# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥

ಸಂಪುಟ : 34 ಆಶ್ವಯುಜ – October-November 2007 ಸಂಚಿಕೆ : 08

ಸಂಸ್ಥಾಪನಾ ಪೋಷಕರು : ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು

ಸಾಮ್ರಾಟ್ ಪೋಷಕರು : ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಹಾಗೂ

ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : ರಾಜಾ. ಎಸ್. ರಾಜಗೋಪಾಲಾಚಾರ್ಯ
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : ರಾಜಾ. ಎಲ್. ಸೂರೀಂದ್ರಾಚಾರ್ಯ

ಸಂಪಾದಕರು : ಕಡಪ ರಾಘವೇಂದ್ರಾಚಾರ್ಯ

ಉಪ-ಸಂಪಾದಕರು : ಪಿ.ವಿ. ಹರಿನಾಥ್

ಸಂಪಾದಕ ಮಂಡಳಿ : ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ
ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ
ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ
ಶ್ರೀ ಬಿ.ಎ. ಪಾಟೀಲ್

ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
**080-41146081, 9341387714, 9342651516**

## ವಿಷಯಸೂಚೀ

ಮಂಗಳಾಚರಣೆ ೦೩
ಸಂಪಾದಕೀಯ ೦೪

**ಲೇಖನಮಾಲಾ**

ಭವ್ಯಸ್ವರೂಪದ ಅಸದೃಶ ಗುರು - ಶ್ರೀರಾಘವೇಂದ್ರರು — ವಿ. ರಮೇಶಾಚಾರ್ಯ ೦೫
ಶ್ರೀರಾಘವೇಂದ್ರಃ ಸಕಲಪ್ರದಾತಾ — ಬಿಂದುಮಾಧವಾಚಾರ್ಯ ನಾಗಸಂಪಿಗೆ ೧೧
ಶ್ರೀಮನ್ನ್ಯಾಯಸುಧೆಯ ಮಂಗಳಶ್ಲೋಕದ ಅಂತರಾರ್ಥ — ಡಾ. ಮಾದನೂರು ಪವಮಾನಾಚಾರ್ಯ ೧೫
ಋಗ್ವೇದಕಾಲೀನ ದೇವತೆಗಳು — ಡಾ. ಕೊರಟಗೆರೆ ವಾಸುದೇವಾಚಾರ್ಯ ೨೬
ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಷಷ್ಠಿ ಕಲಾವಿದ್ಯೆಗಳು — ಕೆ.ಎಲ್. ಪುಷ್ಕರಾಚಾರ್ಯ ೨೯
ಇಣುಕುನೋಟ — ಜಯತೀರ್ಥ ಎಸ್. ೩೨
ಯೋಗದರ್ಶನ — ಟಿ.ವಿ. ಸತ್ಯನಾರಾಯಣ ೩೫
ಆಡಮ್ ಸೇತುವೆ ಅಲ್ಲ, ರಾಮಸೇತುವೆ! — ಡಿ. ಮಧುಸೂದನಾಚಾರ್ಯ ಹಾಗೂ ಡಾ. ಜೋಷಿ ೩೯
ಶ್ರೀಮನ್ಮಹಾಭಾರತ ನಿರೂಪಿಸಿದ ಧರ್ಮರಹಸ್ಯಗಳು — ಶ್ರೀನಿವಾಸ ಸು. ಮಠದ ೪೨
ತಮಿಳುನಾಡಿನ ನವಗ್ರಹ ದೇವಾಲಯಗಳು-೮ — ಸಂಗ್ರಹ : ಸೂರೀಂದ್ರ ೪೪
ಪರ್ಯಟನೆ ೪೭

[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]

## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

## ಮಂಗಳಾಚರಣೆ

ಯಾ ಸಾ ಪದ್ಮಾಸನಸ್ಥಾ ವಿಪುಲಕಟಿತಟೀ ಪದ್ಮಪತ್ರಾಯತಾಕ್ಷೀ
ಗಂಭೀರಾವರ್ತನಾಭಿಃ ಸ್ತನಭರನಮಿತಾ ಶುಭ್ರವಸ್ತ್ರೋತ್ತರೀಯಾ ।
ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣಖಚಿತೈಃ ಸ್ನಾಪಿತಾ ಹೇಮಕುಂಭೈ-
ರ್ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ ॥

- ಶ್ರೀಸೂಕ್ತ

ಅಂಬೋಧೌ ವಿದಧಾವಗಾಧಸಲಿಲೇ ಸೇತುಂ ಸಹೇತುಂ ದ್ವಿಷ-
ತ್ಸೇನಾನ್ಯಂ ಸುರವೀರವೈರಿಣಮಹಂಕಾರಾಕೃತಿಂ ವ್ಯಾಕೃತಿಮ್ ।
ರಕ್ಷೋನಾಯಕಮದ್ಭುತಾತುಲಬಲೋಷ್ಮಾಣಂ ಜಡಂ ಯೋಕೃತ
ಶ್ರೀರಾಮೋ ವಿತನೋತು ನಃ ಕರುಣಯಾ ಸೌಖ್ಯಂ ಸ ಲಕ್ಷ್ಮೀಪತಿಃ ॥

- ಶ್ರೀಸುಮತೀಂದ್ರತೀರ್ಥರು

ಪೂರ್ಣಪ್ರಜ್ಞಮತಾಂಬೋಧಿಪೂರ್ಣೇಂದುಮಕಲಂಕಿನಮ್ ।
ಸುಜನಾಂಬುಧಿ ಭಾಸ್ವಂತಂ ಸುಮತೀಂದ್ರ ಗುರುಂ ಭಜೇ ॥

- ಶ್ರೀಉಪೇಂದ್ರತೀರ್ಥರು

### ಶ್ರೀಸುಶಮೀಂದ್ರವಾಣಿ

**ಮಕ್ಕಳು ಬಾಲ್ಯದಲ್ಲಿ ಚೆನ್ನಾಗಿ ಓದಿ ಬುದ್ಧಿವಂತರಾದರೆ ದೊಡ್ಡವರಾದ ಮೇಲೆ ಒಳ್ಳೆಯ ಉದ್ಯೋಗವನ್ನು ಹೊಂದಿ ತಂದೆ-ತಾಯಂದಿರ ಯೋಗಕ್ಷೇಮ ನೋಡಿಕೊಳ್ಳುವಾಗಿನ ಆನಂದ ಅನುಭವಿಸಿಯೇ ತಿಳಿಯಬೇಕು. ಆದರೆ ಚೆನ್ನಾಗಿ ಓದದೇ ದೊಡ್ಡವನಾದ ಮೇಲೆ ದಡ್ಡನೆಂದೆನಿಸಿಕೊಂಡರೆ ತಂದೆ-ತಾಯಂದಿರಿಗೂ ದುಃಖ. ಪೋಷಿಸಿದ ನಮಗೂ ದುಃಖ. ರಾಯರ ಹಣವನ್ನು ವ್ಯರ್ಥ ಮಾಡಿ-ದಂತೆಯೂ ಆಗುತ್ತದೆ. ಆದ್ದರಿಂದ ಶ್ರದ್ಧೆಯಿಂದ ಮಕ್ಕಳು ವಿದ್ಯೆಯನ್ನು ಅಭ್ಯಾಸ ಮಾಡಬೇಕು. ನಿಮ್ಮ ಹಿಂದೆ ರಾಯರಿದ್ದಾರೆ. ರಾಯರೇ ನಿಮ್ಮನ್ನು ಪೋಷಿಸುವುದು. ಎಲ್ಲಾ ರಾಯರದೇ ನಮ್ಮದೇನಿಲ್ಲ. ಚೆನ್ನಾಗಿ ಓದಿ ಹೆಸರು ಗಳಿಸಿ.**

- ಮಂತ್ರಾಲಯ ವಿದ್ಯಾಪೀಠದ ವಾರ್ಷಿಕೋತ್ಸವದಲ್ಲಿ
ಮಕ್ಕಳನ್ನುದ್ದೇಶಿಸಿ ಶ್ರೀಪಾದರು.



## ಸಂಪಾದಕೀಯ

ಪ್ರಾಚೀನ ಸಂಸ್ಕೃತ ಮಂತ್ರಗಳನ್ನು ತಾವು ಕೇಳಿದ್ದೀರಿ. ಆದರೆ ನವನವೀನ ಕನ್ನಡ ಮಂತ್ರಗಳ ಬಗ್ಗೆ ತಿಳಿಯಿರಿ. ಅತ್ಯಂತ ಪ್ರಾಚೀನ ಕಾಲದ ನಮ್ಮ ಮಂತ್ರಗಳು ಎಲ್ಲವೂ ಸಂಸ್ಕೃತ ಭಾಷೆಯಲ್ಲಿಯೇ ಇವೆ. ಆದ್ದರಿಂದ ಆ ಮಂತ್ರಗಳನ್ನೇ ಕನ್ನಡದಲ್ಲಿ ಹೇಳಿದರೆ ಹೇಗೆ ? ಎಂದು ಭಾವಿಸಿ, ಕನ್ನಡದಲ್ಲಿ ಮಂತ್ರಗಳನ್ನು ಹೇಳುವ ವಿದ್ವನ್ಮಣಿಗಳು ಬರುತ್ತಿದ್ದಾರೆ. ಕನ್ನಡದಲ್ಲಿ ಮಂತ್ರಗಳನ್ನು ಹೇಳುವುದೆಂದರೆ ಸಂಸ್ಕೃತದಲ್ಲಿ ಇರುವುದನ್ನೇ ಕನ್ನಡಕ್ಕೆ ಅನುವಾದಮಾಡಿ ಅದನ್ನು ರಾಗವಾಗಿ ಹೇಳುವುದು. ಉದಾಹರಣೆಗೆ 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್......' ಇತ್ಯಾದಿಯಾಗಿ ಇರುವ ಸಂಸ್ಕೃತ ಪುರುಷಸೂಕ್ತವನ್ನು ''ಸಾವಿರ ತಲೆಗಳು, ಸಹಸ್ರ ನಯನಗಳು, ಇನ್ನು ಸಾವಿರ ಪಾದಗಳಿಂದ ಕೂಡಿರುವ ಈ ಪುರುಷನು ಈ ಬ್ರಹ್ಮಾಂಡವನ್ನು ಆವರಿಸಿ ಮೀರಿ ನಿಂತಿದ್ದಾನೆ'' ಎಂದು ಕನ್ನಡದಲ್ಲಿ ಸ್ವರಹಾಕಿ ಹೇಳಿದರೆ ಅದು 'ಕನ್ನಡ ಪುರುಷಸೂಕ್ತ'. ಹೀಗೆ ಹೇಳಿದರೆ ಅದು ಪುರುಷಸೂಕ್ತವಾಗುತ್ತದೆಯೇ ? (ಇದು ಅನುವಾದವಾಯಿತು. ಋಷಿಗಳ ಮಂತ್ರವಲ್ಲ). ಪ್ರತಿ ಭಾಷೆಗೂ ಅದರದ್ದೇ ಆದ ಶಕ್ತಿ, ಸೊಗಡು ಇರುತ್ತದೆ. ಅದನ್ನು ನಮಗೆ ಬೇಕಾದಂತೆ ತಿರುಚುವುದು ತಪ್ಪು. ಮಂತ್ರಗಳು ನಮಗೆ ಅರ್ಥವಾಗಬೇಕಾದರೆ ಅದರ ಅರ್ಥವನ್ನು ನಮ್ಮ ಮಾತೃಭಾಷೆಯಲ್ಲಿ ತಿಳಿಯಬಹುದು. ಆದರೆ ಆ ಅರ್ಥಗಳೇ ರಾಗದೊಡನೆ ಸೇರಿ ಮಂತ್ರವಾಯಿತೆಂದು ಹೇಳಹೊರಟರೆ ಹಾಸ್ಯಾಸ್ಪದವಾಗುತ್ತದೆ. ಏಕೆಂದರೆ, **ಸಂಸ್ಕೃತ ಮಂತ್ರದ ಶಕ್ತಿ ಪ್ರಾಂತೀಯ ಭಾಷೆಯಲ್ಲಿ ಬರುವುದು ಸಾಧ್ಯವೇ ಇಲ್ಲ.** ಅಷ್ಟೇಕೆ ''ಅಗ್ನಿಮೀಳೇ ಪುರೋಹಿತಂ...'' ಎಂಬ ಸಂಸ್ಕೃತ ಮಂತ್ರವನ್ನು 'ಅಗ್ನಿ'ಗೆ (ಬೆಂಕಿ) ಪರ್ಯಾಯ ಶಬ್ದವಾದ 'ವಹ್ನಿ' (ಬೆಂಕಿ) ಶಬ್ದ ಸೇರಿಸಿ ''ವಹ್ನಿಮೀಳೇ ಪುರೋಹಿತಂ...'' ಎಂದು ಹೇಳಿದರೇನೇ ಅದು ಮಂತ್ರವಲ್ಲ. ಅಗ್ನಿ ಶಬ್ದವೇ ಇರಬೇಕು ಎಂದು ಇನ್ನೊಂದು ಸಂಸ್ಕೃತ ಶಬ್ದಕ್ಕೇ ಇಲ್ಲಿ ಅವಕಾಶವಿಲ್ಲ. ಇದರಂತೆಯೇ ''ಓಂ ಕ್ಲೀಂ ಕೃಷ್ಣಾಯ ನಮಃ'' ಎಂಬ ಶಕ್ತಿಯುತ ಕೃಷ್ಣಮಂತ್ರವನ್ನು, ಕೃಷ್ಣನೆಂದರೂ ವಾಸುದೇವನೆಂದರೂ ಒಂದೇ ಎಂದು ಭಾವಿಸಿ ''ಓಂ ಕ್ಲೀಂ ವಾಸುದೇವಾಯ ನಮಃ'' ಎಂದು ಹೇಳಿದರೆ ಅದು ಕೃಷ್ಣಮಂತ್ರವಾಗುವುದಿಲ್ಲ. ಸಂಸ್ಕೃತಕ್ಕೆ ಸಂಸ್ಕೃತದ ಪರ್ಯಾಯ ಶಬ್ದವನ್ನು ಉಪಯೋಗಿಸಲೇ ಅವಕಾಶವಿಲ್ಲವೆಂದಮೇಲೆ ಸಂಸ್ಕೃತ ಮಂತ್ರಗಳ ಸ್ಥಾನದಲ್ಲಿ ಕನ್ನಡ ಮಂತ್ರಗಳು ಬರಲು ಅವಕಾಶವಿರುತ್ತದೆಯೇ ? ''ಓಂ ಕ್ಲೀಂ ಕೃಷ್ಣಾಯ ನಮಃ'' ಮಂತ್ರಕ್ಕೆ ಚತುರ್ಮುಖ ಬ್ರಹ್ಮನು ಋಷಿ. ''ಓಂ ಕ್ಲೀಂ ಕೃಷ್ಣನಿಗೋಸ್ಕರ ನಮಸ್ಕಾರ'' ಎನ್ನುವ ಕನ್ನಡ ಮಂತ್ರಕ್ಕೆ ಯಾರು ಋಷಿ ? ಸರಿ, 'ಕ್ಲೀಂ' ಎಂಬುದಕ್ಕೆ ಕನ್ನಡದಲ್ಲಿ ಏನು ಹೇಳುತ್ತೀರಿ ? ಎಷ್ಟೊಂದು ಆಭಾಸವಲ್ಲವೇ ?

ಹಾಗೆಂದು ನಮಗೆ ಕನ್ನಡದ ಬಗ್ಗೆ ಅಗೌರವವಿಲ್ಲ. **ನಮ್ಮ ಹರಿದಾಸಸಾಹಿತ್ಯವೆಲ್ಲವೂ ಮುದ್ದು ಕಸ್ತೂರಿ ಕನ್ನಡದಲ್ಲಿದೆ** ಎಂದು ನಮಗೆ ಹೆಮ್ಮೆಯೇ. ಶ್ರೀಗುರುರಾಯರ ''ಇಂದು ಎನಗೆ ಗೋವಿಂದ'' ಎಂಬ ಭವ್ಯ ಕನ್ನಡ ಕೃತಿಯ ಗಾನಕ್ಕೆ ಕನ್ನಡದ ಕೋಟಿ ಕೋಟಿ ಜನರು ರೋಮಾಂಚಿತರಾಗಿ ಭಾವಪರವಶರಾಗಲಿಲ್ಲವೇ? ಹಾಗೆಂದು ಯಾರಾದರೂ ವಿದ್ವಾಂಸರು ಆ ಹಾಡನ್ನು ಸಂಸ್ಕೃತಕ್ಕೆ ಅನುವಾದ ಮಾಡಿದರೆ ಆ ಸಂಸ್ಕೃತ ಕೃತಿಯು ಖಂಡಿತಾ ರಾಯರ ಕೃತಿಯ ಪವಿತ್ರ ಸ್ಥಾನವನ್ನು ಹೊಂದುವುದಿಲ್ಲ (ಸಂಸ್ಕೃತದಲ್ಲೇ ಇದ್ದರೂ). ಮೂಲವೇ ಬೇರೆ, ಡ್ಯೂಪ್ಲಿಕೇಟೇ ಬೇರೆ. ಇದರಂತೆಯೇ ಪರಮ ಪವಿತ್ರ ಕನ್ನಡದ ಮೇರುಕೃತಿ ''ಶ್ರೀಮದ್ಧರಿಕಥಾಮೃತಸಾರ''ವನ್ನು ಸಂಸ್ಕೃತಕ್ಕೆ ಅನುವಾದ ಮಾಡಿದರೂ ಶ್ರೀಜಗನ್ನಾಥದಾಸರ ಕೃತಿಯಲ್ಲಿನ ಪಾವಿತ್ರ್ಯತೆ ಸಂಸ್ಕೃತಕ್ಕೆ ಬರುವುದಿಲ್ಲ.

ನಾವು ಹೇಳುವುದಿಷ್ಟೇ. ಆಯಾ ಭಾಷೆಯ ಸ್ಥಾನ-ಮಾನಗಳು ಅವುಗಳಿಗಿವೆ. **ಸಂಸ್ಕೃತ ಮಂತ್ರಗಳ ಪ್ರಭಾವ ಆ ಮಂತ್ರಗಳ ಪಠಣೆ ಮಾಡಿದಾಗ ಬರುವುದೇ ಹೊರತು ಅದರ ಸಾರವನ್ನು ಕನ್ನಡದಲ್ಲಿ, ತುಳುವಿನಲ್ಲಿ ಹೇಳಿದರೆ ಫಲ ಸಿಗುವುದೇ ಇಲ್ಲ**(ಅರ್ಥವಾಗುವುದು ಅಷ್ಟೇ). ನಮಗೆ ತೋಂದರೆ ಆಗುವುದೆಂದು ಇಷ್ಟ ಬಂದಂತೆ ಬದಲಿಸಲು ನಮ್ಮ ಪ್ರಾಚೀನ ಪವಿತ್ರ ಮಂತ್ರಗಳು ಶಾಲೆಯ ವೇಳಾಪಟ್ಟಿಯಲ್ಲ.

**''ಜಯತು ಸಂಸ್ಕೃತಮ್''**

# ಭವ್ಯಸ್ವರೂಪದ ಅಸದೃಶ ಗುರು - ಶ್ರೀರಾಘವೇಂದ್ರರು

■ ವಿದ್ವಾನ್ ಶ್ರೀ ವಿ. ರಮೇಶಾಚಾರ್ಯ
'ಗೌತಮ ಕೃಪ', ಆಚಾರ್ಯ ಸ್ಟ್ರೀಟ್, ತುಮಕೂರು - ೫೭೨ ೧೦೧

**ಲೋ**ಕದಲ್ಲಿ ಶಿಷ್ಯನಿಗೆ ವಿದ್ಯೋಪದೇಶ ಮಾಡುವ ವ್ಯಕ್ತಿಗಳೆಲ್ಲ ಗುರು-ಗಳೆಂದು ಕರೆಸಿಕೊಂಡರೂ ಶಾಸ್ತ್ರದಲ್ಲಿ ನಿರೂಪಿತವಾದ ಗುರುಲಕ್ಷಣದಿಂದ ಕೂಡಿದ 'ನಿಜಗುರು'ಗಳು ಸಿಗುವುದು ದುರ್ಲಭವೇ ಸರಿ. ಸಿಕ್ಕಿದರೂ ಬೆರಳೆಣಿಕೆಯಷ್ಟು ಮಾತ್ರ. ಶಾಸ್ತ್ರವು ಗುರುಸ್ಥಾನಾಪನ್ನನಿಗೆ ಎಂತಹ ಗುಣಗಳು ಇರಬೇಕು, ಯಾವ ಗುಣಗಳು ಇರಬಾರದು ಎಂಬುದನ್ನು ತಿಳಿಸುತ್ತದೆ.

ಉತ್ತಮ ಗುರುಗಳಲ್ಲಿ ಈ ಕೆಳಕಂಡ ದುರ್ಗುಣಗಳು ಇರಬಾರದು.

**ಕ್ರೋಧೀ ಕುಷ್ಠೀ ಮಹಾರೋಗೀ ಮಲಿನೀ ನಿರ್ಘೃಣೋ ಜಡಃ ।**
**ಅಪಂಡಿತೋ ನಿಂದಕಶ್ಚ ಲೋಲುಪೋ ವಿಷಯಾತುರಃ ॥**

**ದಾಂಭಿಕೋ ಗರ್ವಸಂಯುಕ್ತಃ ಪಾಪಾತ್ಮಾ ದುಷ್ಟವಂಶಜಃ ।**
**ಘಾತೀ ಪರದ್ರೋಹಕರ್ತಾ ಪರದ್ರವ್ಯಾಪಹಾರಕಃ ॥**

**ಅಜಿತಾತ್ಮಾ ವೇದಬಾಹ್ಯಃ ಪರದಾರರತಃ ಸದಾ ।**
**ಪರದೋಷಾರೋಪಕಶ್ಚ ಕೃಪಣಶ್ಚ ಅಜಿತೇಂದ್ರಿಯಃ ॥**

**ವೇದ ದೇವ ದ್ವಿಜಾತೀನಾಂ ಯತಿತೀರ್ಥಂ ಗವಾಮಪಿ ।**
**ತುಲಸೀ ವಹ್ನಿ ಸೂರ್ಯಾಣಾಂ ದ್ವೇಷ್ಟಾ ಯೋಗ್ಯೋ ಗುರುರ್ನ ಹಿ ॥**

ಅವರಲ್ಲಿರಬೇಕಾದ (ಗುರುಗಳಲ್ಲಿ) ಸದ್ಗುಣಗಳು ಎಂತಹವೆಂದರೆ -

**ಸತ್ಕರ್ಮನಿಷ್ಠೋ ಧರ್ಮಾಣಾಮ್ ಉಪದೇಷ್ಟಾ ಸುಬುದ್ಧಿದಃ ।**
**ಯೋಗಾಭ್ಯಾಸಕಲಾಭಿಜ್ಞೋ ಯೋಗವಾನ್ ಸಮದರ್ಶಿನಃ ॥**

**ಕೃತಕರ್ಮಾ ತೀರ್ಥಸೇವೀ ಧರ್ಮಾಧರ್ಮವಿವೇಚಕಃ ।**
**ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥಾಶ್ರಮೀ ಯತಿಃ ॥**

**ಸ್ವಾಶ್ರಮಾಚಾರಸನ್ನಿಷ್ಠೋ ಬುದ್ಧಿಮಾನ್ ವಿಜಿತೇಂದ್ರಿಯಃ ।**
**ಕ್ಷಮೀ ಕೃಪಾಲುರ್ಮೃದುವಾಕ್ ಸುಮುಖಃ ಸೌಮ್ಯದರ್ಶನಃ ॥**

**ಅನಿದ್ರಶ್ಚ ಸಮುದ್ಯೋಗೀ ಶಾಂತಾತ್ಮಾ ಪರತೋಷಕೃತ್ ।**
**ಔದಾರ್ಯವಾನ್ ಜ್ಞಾನನಿಷ್ಠಃ ಶುಚಿಃ ತ್ಯಕ್ತಪರಿಗ್ರಹಃ ॥**



**ವೇತ್ತಾ ಸಕಲಧರ್ಮಾಣಾಂ ಶಾಸ್ತ್ರೇಷು ಪರಿನಿಷ್ಠಕಃ ।**
**ಸತ್ಯವಾಕ್ ಮಿತಭುಕ್ ಜ್ಞಾನೀ ದ್ವಿಜವಂಶಜಃ ॥**

**ಇತ್ಯಾದಿ ಗುಣಯುಕ್ತೋ ಯಃ ಸ ಗುರುಃ ಪರಮೋತ್ತಮಃ ।**
**ತಸ್ಯ ಸೇವಾಂ ಚಿರಂ ಕೃತ್ವಾ ಸೇವಯಾತಂ ಪ್ರಸಾದ್ಯ ಚ ॥**

**ತಸ್ಮಾದುಪಾಸನಾ ಗ್ರಾಹ್ಯಾ ಸುತೀರ್ಥೇ ವಿಧಿಪೂರ್ವಕಾಃ ॥**

**ನಿರೋಗೀ :** ಶ್ರೀರಾಘವೇಂದ್ರರ ಚರಿತ್ರೆಯನ್ನು ನೋಡಿದಾಗ ಯಾವುದೇ ರೋಗಾದಿ ಬಾಧೆ ಅವರನ್ನು ಕಾಡಿದ್ದು ಕಂಡುಬರುವುದಿಲ್ಲ.

**ಮಹಾನ್ ಪಂಡಿತರು - ಜ್ಞಾನಿಗಳು :** ಶ್ರೀರಾಘವೇಂದ್ರರ ಎದುರಿಗೆ ವಾದಮಾಡಿ ಜಯಿಸಿದ ಪ್ರತಿವಾದಿಗಳೇ ಇಲ್ಲ. ಇನ್ನು ಅವರು ಮಾಡಿರುವ ಗ್ರಂಥರಾಶಿಗಳನ್ನು ನೋಡಿದರೆ ಅವರ ಪಾಂಡಿತ್ಯ, ಎಂತಹ ಶ್ರೇಷ್ಠ ಜ್ಞಾನಿ-ಗಳೆಂಬುದನ್ನು ಶ್ರುತಪಡಿಸುತ್ತದೆ. ಗ್ರಂಥಗಳಲ್ಲಿ ಶಬ್ದಪ್ರಯೋಗವೂ ಗಾಂಭೀರ್ಯ-ದಿಂದ ಕೂಡಿ, ಅತಿಹೆಚ್ಚು ಬೆಳೆಸದೆ, ಹೇಳಿದ್ದನ್ನೇ ಮತ್ತೆ ಮತ್ತೆ ಹೇಳದೆ (ಉಕ್ತಂ ನೋ ವಕ್ತಿಭೂಯಃ) ಇರೋಣ, ಪ್ರಾಚೀನಾಚಾರ್ಯರಲ್ಲಿ ದೋಷಗಳನ್ನು ತೋರಿಸುತ್ತಾ ತಮ್ಮ ಪ್ರೌಢಿಮೆಯನ್ನು ಮೆರೆಯದ, ಸಮುಚಿತವಾದ ಅರ್ಥದೊಂದಿಗೆ ವಿವರಿಸುವ ಅವರ ಗ್ರಂಥರಚನಾ ಕೌಶಲ್ಯ ಅದ್ಭುತವಾದದ್ದು. ಇಂತಹ ಅದ್ಭುತ ಪಾಂಡಿತ್ಯವಿದ್ದರೂ **'ಗರ್ವರಹಿತರು'**. ಇದೇ ಬಹಳ ಮುಖ್ಯ. **'ವಿನಯೋ ಹಿ ಭೂಷಯತಿ ಸರ್ವರಸಮ್'** ಎಂಬಂತೆ ವಿನಯದ ಸಾಕಾರ ಮೂರ್ತಿ. ಶ್ರೀರಾಘವೇಂದ್ರರಾದರೋ ಅನರ್ಘ್ಯ ಗ್ರಂಥರಚನಾಕಾರರಾದರೂ ಪ್ರಾಚೀನ ವ್ಯಾಖ್ಯಾನಕಾರರಾದ ಶ್ರೀಜಯತೀರ್ಥರು, ಚಂದ್ರಿಕಾಚಾರ್ಯರು, ವಿಜಯೀಂದ್ರರು ಇತ್ಯಾದಿಗಳ ಬಗ್ಗೆ ಹೇಳಬೇಕಾದರೆ ಅದೇನು ಭಕ್ತಿಭಾವ! 'ಟೀಕಾಗಾಂಭಿರ್ಯಮುದ್ಧರ್ತುಂ ವ್ಯಾಸತೀರ್ಥಾದಯಾ ಕ್ಷಮಾಃ, ಚಿತ್ರೈಃ ಪದ್ಯೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ........., ವಿಸ್ತರಸ್ತು ಗುರುಪಾದಕೃತ ಗ್ರಂಥೇ ದ್ರಷ್ಟವ್ಯಃ, ಅತ್ರ ಮಹಾಂತಃ ಪ್ರಷ್ಟವ್ಯಃ' ತಮಗೆ ಗೊತ್ತಿಲ್ಲದ ವಿಚಾರ ಇಲ್ಲವಾದರೂ (ಶಿಷ್ಯಾಪೇಕ್ಷಯಾ) ಸರ್ವಜ್ಞಕಲ್ಪರಾದರೂ ವಾಕ್ಯಪ್ರಯೋಗದ ಭಾವ ಅವರ ಹಿರಿತನದ ವಿನಯವನ್ನು ಎತ್ತಿತೋರಿಸುತ್ತದೆ.

**ಯೋಗಾದಿಸಿದ್ಧಿ :** ಸರ್ವತಂತ್ರಸ್ವತಂತ್ರರಾದ, ಅಷ್ಟಾಂಗಯೋಗನಿರತರಾದ ಇತ್ಯಾದಿ ಪದಪ್ರಯೋಗಗಳನ್ನು ಜಗತ್ತಿನ ಯತಿಗಳಲ್ಲಿ ಔಪಚಾರಿಕವಾಗಿ ಕೇಳುತ್ತೇವೆ. ರಾಘವೇಂದ್ರರಲ್ಲಿ ಅಣಿಮಾದಿ ಅಷ್ಟಸಿದ್ಧಿಗೆ ಬರವೇ ಇಲ್ಲ.

**ಧರ್ಮಾಧರ್ಮ ವಿವೇಕಜ್ಞಾನ :** ಅವರ ಅನುಗ್ರಹಕ್ಕೆ ಪಾತ್ರರಾದ ಶಿಷ್ಯರಾದ ಶ್ರೀಕೃಷ್ಣಾಚಾರ್ಯರೇ ಲೋಕಮಾನ್ಯ ಸ್ಮೃತಿಕಾರರೆಂದು ಪ್ರಸಿದ್ಧಿ ಇರಬೇಕಾದರೆ ಗುರುಗಳಲ್ಲಿ ಕೇಳುವುದೇನು ?

**ಕ್ಷಮೀ :** ಕ್ಷಮಾ ಮಾಡುವುದರಲ್ಲಿ ಸಮುದ್ರರೇ ಸರಿ. ತುರುಷ್ಕರಾಜ ಪರೀಕ್ಷಿಸಲು ನಿಷೇಧ ಪದಾರ್ಥವನ್ನು ತಂದು ಇಟ್ಟರೂ, ಅವನಲ್ಲಿ ಕೋಪಗೊಂಡು ಶಾಪಾದಿಗಳನ್ನು ನೀಡಿದವರಲ್ಲ.

**ಜಿತೇಂದ್ರಿಯರು :** ಅವರ ಪೂರ್ವಾಶ್ರಮವನ್ನು ವಿಚಾರಮಾಡಿದರೆ ಘೋರ ದಾರಿದ್ರ್ಯಾವಸ್ಥೆಯಲ್ಲಿದ್ದರೂ ಎಂದೂ ವಿಚಲಿತರಾಗದ, ಇಂದ್ರಿಯ ತೃಪ್ತಿಗಾಗಿ ಇನ್ನೊಬ್ಬರನ್ನು ಬೇಡದ **'ತೇನ ತ್ಯಕ್ತೇನ ಭುಂಜೀಥಾ'** ಎನ್ನುವ ಅವರ ಗುಣ ಗೃಹಸ್ಥಾಶ್ರಮದಲ್ಲೇ ಹಾಗಿದ್ದರೆ ಇನ್ನು ಯತಿಧರ್ಮದಲ್ಲಿ ಕೇಳುವುದೇನು ? ವೈರಾಗ್ಯ ಶಿಖಾಮಣಿಗಳು.

**ಔದಾರ್ಯವಾನ್ :** ತಾವು ವೈರಾಗ್ಯಶಿಖಾಮಣಿಗಳಾದರೂ ತಮ್ಮನ್ನು ಆಶ್ರಯಿಸಿದ ಶಿಷ್ಯರಿಗೆ - ಭಕ್ತರಿಗೆ ಕೇಳಿದ್ದನ್ನೆಲ್ಲಾ ದಯಪಾಲಿಸುವ ಭಕ್ತರ ಮೇಲಿನ ಕೃಪಾಶೀಲತೆ ಇನ್ನೊಬ್ಬರಲ್ಲಿ ಕಾಣುವಂತಿಲ್ಲ.

ಇನ್ನು ಆಚಾರ್ಯರು ತಿಳಿಸಿದಂತೆ -

**ಸಂಶಯಃ ಸಂಶಯಚ್ಛಾದ್ ಗುರುರುಕ್ತೋ ಮನೀಷಿಭಿಃ ।**
**ಸಂತಸ್ತು ತ್ರಿವಿಧಾ ಪ್ರೋಕ್ತಾ ಉತ್ತಮ ಮಧ್ಯಮಾಧಮಾಃ ॥**
**ತತ್ರ ದೇವತಾ ಉತ್ತಮ ಪ್ರೋಕ್ತಾ ॥**

ಎಂಬಂತೆ ಕರ್ಮಜದೇವತೆಯಾದ, ೧೯ನೇ ಕಕ್ಷದಲ್ಲಿದ್ದು ಭಕ್ತಿಯೋಗಿಗಳ ಗುಂಪಿನಲ್ಲಿರುವ ಶ್ರೇಷ್ಠ ಗುರು. ಇಷ್ಟೆಲ್ಲ ಗುಣಗಳು ಬೇರೆ ಮಧ್ವಮತದ ಗುರು-ಗಳಲ್ಲಿದ್ದರೂ ಇವರಲ್ಲಿ ವಿಶೇಷವಾಗಿ ವ್ಯಕ್ತವಾಗಲು ಕಾರಣವೇನೆಂದರೆ ಅವರ 'ಭವ್ಯಸ್ವರೂಪ'ವೇ ಕಾರಣ.

ಅಪ್ಪಣಾಚಾರ್ಯರು ಸ್ತುತಿಸಿದ -

**ಭವ್ಯಸ್ವರೂಪೋ ಭವದುಃಖತೂಲ ಸಂಘಾಗ್ನಿಚರ್ಯಸುಖಧೈರ್ಯಶಾಲೀ ।**
**ಸಮಸ್ತದುಷ್ಟಗ್ರಹನಿಗ್ರಹೇಶೋ ದುರತ್ಯಯೋಪಪ್ಲವಸಿಂಧುಸೇತುಃ ॥**



ಎಂಬಲ್ಲಿ ಶ್ರೀರಾಘವೇಂದ್ರರ ಪರಮಾನುಗ್ರಹಕ್ಕೆ ಪಾತ್ರರಾದ ಶ್ರೀಧೀರೇಂದ್ರ-ತೀರ್ಥರು ವ್ಯಾಖ್ಯಾನಿಸುತ್ತಾ ಭವ್ಯಸ್ವರೂಪಃ = ಕುಶಲ ಸ್ವಭಾವದವರು ಎಂದಿದ್ದಾರೆ. ಕುಶಲವೆಂದರೆ ಕ್ಷೇಮ ಅಥವಾ ಮಂಗಳಕರ. ಕ್ಷೇಮವೆಂದರೆ ನಿರೋಗಿಗಳು ಮಂಗಳಕರ (ಶುಭ) ಶರೀರ ಲಕ್ಷಣ ಸಂಪನ್ನರು. ಮನುಷ್ಯನಿಗೆ ರೋಗ ಬರುವುದು ಶರೀರದ ದೋಷದಿಂದ. ಶರೀರ ನಿರ್ದುಷ್ಟವಾದರೆ ರೋಗಕ್ಕೆ ಕಾರಣವಿಲ್ಲ. ಪ್ರಕೃತದಲ್ಲಿ ಶ್ರೀರಾಘವೇಂದ್ರರು ತಮ್ಮ ಕಕ್ಷೆಗೆ ಅನುಗುಣವಾದ, ತಮ್ಮ ಯೋಗ್ಯತೆಗೆ ತಕ್ಕ ಮೂಲರೂಪದ ಶರೀರ ಲಕ್ಷಣವನ್ನು ಮನುಷ್ಯಜನ್ಮದಲ್ಲೂ ಹೊಂದಿದ್ದಾರೆ. ಇದೇ ಶ್ರೀರಾಘವೇಂದ್ರರ ಜನ್ಮದ ವೈಶಿಷ್ಟ್ಯ. ದೇವತೆಗಳು ಮನುಷ್ಯರಾಗಿ ಹುಟ್ಟಿದಾಗ ಮೂಲರೂಪದ ಲಕ್ಷಣಗಳು ಇರಲೇಬೇಕೆಂದಿಲ್ಲ. ಇದ್ದರೂ ಗೂಹನ ಮಾಡಿ-ಕೊಳ್ಳುವುದೇ ದೇವತಾಧರ್ಮ. ಆದರೆ ಶ್ರೀರಾಘವೇಂದ್ರರಲ್ಲಿ ವಿಶೇಷ ವಾಯು ಸನ್ನಿಧಾನದ ದೆಸೆಯಿಂದ ವ್ಯಕ್ತವಾದ ಶರೀರದ ಲಕ್ಷಣಕ್ಕೆ ಅನುಗುಣವಾಗಿ ಗುಣಗಳೂ ಪ್ರಕಾಶಕ್ಕೆ ಬಂದಿವೆ. ಎಲ್ಲಿ ಲಕ್ಷಣವಿರುತ್ತದೋ ಅಲ್ಲಿ ಗುಣಗಳೂ ಇದ್ದೇ ಇರುತ್ತವೆ. ಆಚಾರ್ಯರು ತಿಳಿಸಿದ -

**ಚತುರ್ವಿಂಶತಿಮಾರಭ್ಯ ಷೋಡಶಾದಾ ಸುರಾ ಸ್ಮೃತಾಃ ।**
**ಅಷ್ಟಕಾದೃಷಯಶ್ಶೋಕ್ತಾ ತದೂನಾ ಚಕ್ರವರ್ತಿನಃ ॥**

ಎಂಬ ಬೃಹದ್ಭಾಷ್ಯದಂತೆ ದೇವತಾಯೋಗ್ಯವಾದ ೧೬ ಕ್ಕೂ ಮಿಗಿಲಾದ ಲಕ್ಷಣ ಶ್ರೀರಾಘವೇಂದ್ರರ ಶರೀರದಲ್ಲಿದೆ. ಅದರ ಪ್ರಭಾವ ಹಾಗೂ ವಾಯುದೇವರ ನಿತ್ಯಸನ್ನಿಧಾನವೇ ಜಗದ್ವಿಖ್ಯಾತಿಗೆ ಕಾರಣ. **'ಭವ್ಯಸ್ವರೂಪ'** ಎಂಬಲ್ಲಿ ಕುಶಲ ಸ್ವಭಾವ ಎಂಬ ಅರ್ಥದಿಂದ ಉಪಲಕ್ಷಣತಯಾ ಭವ್ಯ ಶಬ್ದದ ಎಲ್ಲ ಗುಣಗಳೂ ವ್ಯಕ್ತವಾಗಿವೆ. ಮೇದಿನೀ ಕೋಶ ಹೇಳುವಂತೆ ''ಭವ್ಯಂ ಶುಭೇ ಚ ಸತ್ಯೇ ಚ ಯೋಗ್ಯೇ ಭಾವಿನಿ ಚ ತ್ರಿಷು'' ಇತ್ಯಾದಿ ಪ್ರಮಾಣಗಳಂತೆ ಭವ್ಯ ಶಬ್ದಕ್ಕೆ ಅನೇಕಾರ್ಥಗಳು. ಕ್ಷೇಮ, ಶುಭ, ಅಸ್ಥಿ, ಭವಿಷ್ಯದ್‌ಜ್ಞಾನ, ಅದೃಷ್ಟ, ಸತ್ಯ, ಭಾಗ್ಯ, ಯೋಗ್ಯ, ಶ್ರೇಷ್ಠ, ಶಾಂತ, ಸೌಮ್ಯ, ಸಾಧು, ಇತ್ಯಾದಿ.

೧) **ಶುಭ** : ಮಂಗಳಕರವಾದ ದೇವತಾಯೋಗ್ಯ ಶುಭಲಕ್ಷಣವುಳ್ಳವರಾದ್ದರಿಂದ ಭವ್ಯಸ್ವರೂಪರು.

೨) **ಕ್ಷೇಮ** : ನಿರೋಗಿಗಳಾದ ಸ್ವಭಾವವುಳ್ಳವರಾದ್ದರಿಂದ ಭವ್ಯಸ್ವರೂಪರು.

೩) **ಭವಿಷ್ಯದ್‌ಜ್ಞಾನ :** ಉಪಲಕ್ಷಣತಯಾ ತ್ರಿಕಾಲಜ್ಞಾನವುಳ್ಳವರಾದ್ದರಿಂದ ಭವ್ಯಸ್ವರೂಪರು.

೪) **ಸತ್ಯ :** ಸತ್ಯಸಂಧರೂ, ಸತ್ಯಸ್ವರೂಪಿ ಭಗವನ್ನಿಷ್ಠರೂ, ಜಗತ್ಸತ್ಯತ್ವ, ಹರಿಸರ್ವೋತ್ತಮತ್ವ ವೇದ ಸತ್ಯತ್ವಾದಿಪ್ರತಿಪಾದಕ ಸ್ವಭಾವವುಳ್ಳವರಾದ್ದರಿಂದ ಭವ್ಯಸ್ವರೂಪರು.

೫) **ಭಾಗ್ಯ :** ಸತ್ ಶಬ್ದ ವಾಚ್ಯರಾದ (ನಿರ್ದುಷ್ಟರು) ವಾಯುದೇವರ ಸನ್ನಿಧಾನ-ವುಳ್ಳ ಪರಮಶ್ರೇಷ್ಠ ಭಾಗ್ಯವಂತರು. ಆದುದರಿಂದಲೇ ಎಲ್ಲ ಯತಿಗಳ ಮಧ್ಯೆ ಮೇರುವಿನಂತೆ ಕೀರ್ತಿವುಳ್ಳವರಾದ್ದರಿಂದ ಭವ್ಯಸ್ವರೂಪರು.

೬) **ಶಾಂತ :** ಎಂತಹ ಘೋರ ಅವಸ್ಥೆಯಲ್ಲೂ ಧೃತಿಗೆಡದ ಶಾಂತಸ್ವಭಾವವುಳ್ಳ-ವರಾದ್ದರಿಂದ ಭವ್ಯಸ್ವರೂಪರು.

೭) **ಸೌಮ್ಯ :** ಯಾರ ಮೇಲೂ ದ್ವೇಷ ಸಾಧಿಸದ ಎಲ್ಲರ ಮೇಲೂ ಕೃಪಾದೃಷ್ಟಿ ಬೀರುವ ಸ್ವಭಾವವುಳ್ಳವರಾದ್ದರಿಂದ ಭವ್ಯಸ್ವರೂಪರು.

೮) **ಅದೃಷ್ಟ :** ಅದೃಷ್ಟನಾಮಕ ಭಗವಂತನ ವಿಶೇಷ ವಿಭೂತಿರೂಪಕ್ಕೆ ಪಾತ್ರರಾದ ಸ್ವಭಾವವುಳ್ಳವರಾದ್ದರಿಂದ ಭವ್ಯಸ್ವರೂಪರು. (ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಮ್).

೯) **ಅಸ್ಥಿ :** ಇವರ ಶರೀರದ ಮೂಳೆಯೂ ಕೂಡ ಅಂದರೆ ಕಣ, ಕಣವೂ ಭಗವದುಪಾಸನೆಯಿಂದ ಭಗವದ್ ಸಂಬಂಧರೂಪ ಅಸ್ಥಿ ಉಳ್ಳ ಸ್ವರೂಪರು. ಆದ್ದರಿಂದ ಭವ್ಯಸ್ವರೂಪರು.

೧೦) **ಯೋಗ್ಯ, ಅರ್ಹ, ಸಮರ್ಥ :** ಎಲ್ಲ ರೀತಿಯಿಂದಲೂ ಮಧ್ವಮತವನ್ನು ಉದ್ಧರಿಸಲು, ಸಜ್ಜನರನ್ನು ಉದ್ಧರಿಸಲು ಯೋಗ್ಯಸ್ವರೂಪವುಳ್ಳವರೂ, ಅರ್ಹರೂ, ಸಿದ್ಧಾಂತಸ್ಥಾಪನೆಯಲ್ಲಿ ಸಮರ್ಥರೂ ಆದ್ದರಿಂದ ಭವ್ಯಸ್ವರೂಪರಾಗಿದ್ದಾರೆ.

ಇಂತಹ ಸರ್ವಸಮರ್ಥರಾದ, ಗುರುಲಕ್ಷಣೋಪೇತರಾದ, ದೇವತಾಲಕ್ಷಣ ಸಂಪನ್ನರಾದ ಇವರು ತನ್ನನ್ನು ಆಶ್ರಯಿಸಿದ ಭಕ್ತರ ಭವಜನಿತ ದುಃಖಗಳೆಂಬ ಹತ್ತಿಯ ರಾಶಿಯನ್ನು ಸುಡುವುದರಲ್ಲಿ ಅಗ್ನಿ ಸಮರಾಗಿದ್ದಾರೆ.

ಯಾವಾಗಲೂ ಜ್ಞಾನಸುಖವನ್ನು ಅನುಭವಿಸುವ, ಎಂತಹ ಪರಿಸ್ಥಿತಿಯಲ್ಲೂ ಧೃತಿಗೆಡದ ಧೈರ್ಯವಂತರೂ ಆಗಿದ್ದಾರೆ. ಕಂಟಕಗಳನ್ನು ನೀಡುವ ಸಮಸ್ತ ಪಿಶಾಚಾದಿ(ಢಾಕಿನ್ಯಾದಿ ಯಾವುದೇ ಗಣದ ಕ್ರೂರಗ್ರಹವಾದರೂ)ಗಳನ್ನು ನಿಗ್ರಹ ಮಾಡುವುದರಲ್ಲಿ ಸಮರ್ಥರಾದ, ದಾಟಲು ಅಶಕ್ಯವಾದ ಕಷ್ಟಗಳೆಂಬ ಸಮುದ್ರದ



ಸೇತುವೆಯಂತೆ ಇರುವ, 'ಅಪಾಯಕೋಟಿಗೆ ಉಪಾಯ ಒಂದೇ' ಎಂಬಂತೆ ಸಕಲಾಪತ್ತು ಪರಿಹರಿಸುವ ಶ್ರೇಷ್ಠ, ಭವ್ಯಸ್ವರೂಪದ ಗುರುಗಳಾಗಿದ್ದಾರೆ. ಇಂತಹ ಶ್ರೀರಾಘವೇಂದ್ರರನ್ನು ಅಪ್ಪಣಾಚಾರ್ಯರು ಕಾಯಾ, ವಾಚಾ, ಮನಸಾ ಅವರ ಗುಣಗಳನ್ನೇ ಉಪಾಸಿಸುತ್ತಾ ಒಂದೊಂದು ಶಬ್ದದಲ್ಲೂ ಅವರ ಧೀರೋದಾತ್ತ ಗುಣಗಳ ಚಿಂತನೆಯ, ಉಪಾಸನೆಯ ಭಕ್ತಿರಸವನ್ನೇ ಉಕ್ಕಿಸಿದ್ದಾರೆ. ಇಂತಹ 'ಭವ್ಯಸ್ವರೂಪ'ದ ಗುರುಗಳು ಸಿಕ್ಕಿರುವುದೇ ನಮ್ಮ ಭಾಗ್ಯ. ಇಂತಹ ಭವ್ಯಸ್ವರೂಪರು ಆರಾಧನಾ ಸಂದರ್ಭದಲ್ಲಿ (ಶಿಷ್ಯರ (ಭಕ್ತರ) ಕಡೆಗೆ ದೃಷ್ಟಿಕೊಡುವ ಪರ್ವಕಾಲ) ನಮ್ಮಂತಹ ಅಲ್ಪರ ಮೇಲೆ ದಯಾದೃಷ್ಟಿ ಬೀರಿ ನಮ್ಮ ಭವಿಷ್ಯವನ್ನು ಉಜ್ವಲಗೊಳಿಸಿ ಭಗವಂತನೆಡೆಗೆ ಸಾಗುವ ಮಾರ್ಗದ ದಾರಿದೀಪವಾಗಿ ಎಂದೆಂದೂ ಕಂಗೊಳಿಸುತ್ತಾ, ಅವರ ಬೆಳಕಿನಡಿಯಲ್ಲಿ ಆಶ್ರಯ ಪಡೆದು ಧನ್ಯರಾಗುವಂತಹ ಭಾಗ್ಯವನ್ನೂ, ಜ್ಞಾನಸಂಪತ್ತನ್ನೂ ನೀಡಿ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

❑❑

## ಶ್ರೀನವರತ್ನ ಸುದರ್ಶನಾಚಾರ್ಯರಿಂದ ಪ್ರಾಯೋಜಿತವಾದ ಮಾನವೀಯ ಕಳಕಳಿಯ ನೂತನ ಯೋಜನೆ

**"ಜಾತಸ್ಯ ಹಿ ಧೃವೋ ಮೃತ್ಯುಃ ಧೃವಂ ಜನ್ಮ ಮೃತಸ್ಯ ಚ"**

ಎಂಬ ಗೀತಾಚಾರ್ಯನ ವಾಕ್ಯದಂತೆ ಈ ಮಾನವ ಶರೀರವು ಅನಿತ್ಯ. ಈ ಚರಾಚರ ಜಗತ್ತಿನಲ್ಲಿ ಹುಟ್ಟು-ಸಾವುಗಳು ಸತ್ಯ. ಈ ಕಾರಣದಿಂದಾಗಿ ಈ ಶರೀರವನ್ನು ಹೊಂದಿದ ಜೀವಿಗೆ ಈ ಜಗತ್ತಿನಲ್ಲಿ ಇರುವ ತನಕ ಶುಭಕರ್ಮಗಳೂ, ಮೃತಿ ಹೊಂದಿದ ನಂತರ ಅಪರಕರ್ಮಗಳು ಶಾಸ್ತ್ರೋಕ್ತವಾಗಿ ನಡೆಯಬೇಕೆಂದು ಸೃಷ್ಟಿ ನಿಯಮ.

ನಮ್ಮ ಸಮಾಜದಲ್ಲಿ ಬಹಳ ಜನರು ಇತರರಿಗೆ ಇರುವಂತೆ ಬಂಧು-ಬಾಂಧವರನ್ನು ಹೊಂದಿರುವುದಿಲ್ಲ. ವಯಸ್ಸಾದ ನಂತರದಲ್ಲಿ ಆ ವ್ಯಕ್ತಿಯ ಮನಸ್ಸಿನಲ್ಲಿ "ನಾನು ಮೃತಿ ಹೊಂದಿದ ಮೇಲೆ ನನ್ನ ಅಪರಕರ್ಮಗಳನ್ನು ಮಾಡುವವರು ಯಾರೂ ಇಲ್ಲ" ಎಂಬ ಚಿಂತೆಯು ಬಹಳವಾಗಿ ಕಾಡುತ್ತಿರುತ್ತದೆ. ಈ ರೀತಿಯಾಗಿ ಏಕಾಂಗಿಗಳಾದ ಜೀವಿಗಳಿಗೆ ಅವರ ಚಿಂತೆಯನ್ನು ದೂರಮಾಡಿ, ಅವರ ನಿಧನದ ನಂತರದಲ್ಲಿ ಶಾಸ್ತ್ರೋಕ್ತವಾಗಿ ಅವರ ಅಪರಕರ್ಮಗಳನ್ನು ಮಾಡುವ ಒಂದು ಅತ್ಯಂತ ಪವಿತ್ರವಾದ ಮಾನವೀಯ ಅನುಕಂಪದ ಯೋಜನೆಯನ್ನು ಅಪರಕರ್ಮ ಧುರೀಣರಾದ ಶ್ರೀನವರತ್ನ ಸುದರ್ಶನಾಚಾರ್ಯರು ರೂಪಿಸಿರುತ್ತಾರೆ. ಈ ಯೋಜನೆಯ ಅನ್ವಯ ಬಂಧು-ಬಾಂಧವರಿಲ್ಲದ ಏಕಾಂಗಿ ವ್ಯಕ್ತಿಗಳು ಈ ಯೋಜನೆಯಲ್ಲಿ ತಮ್ಮ ಹೆಸರು - ವಿಳಾಸಗಳನ್ನು ನೋಂದಾಯಿಸಿ ನಿಶ್ಚಿಂತರಾಗಿ ತಮ್ಮ ಸ್ವಸ್ವಯೋಗ್ಯ ಕರ್ಮನಿರತರಾಗಿ ಸಾಧನೆ ಮಾಡಿಕೊಳ್ಳಬಹುದು. ಈ ಒಂದು ಸಾಮಾಜಿಕ ಕಳಕಳಿಯ ಯೋಜನೆಗೆ ಆಸಕ್ತಿಯುಳ್ಳ ಉದಾರ ಹೃದಯಿಗಳು ದೇಣಿಗೆಯನ್ನು ನೀಡಲು ಅವಕಾಶವಿರುತ್ತದೆ. ಈ ಯೋಜನೆಯ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ

**ಶ್ರೀನವರತ್ನ ಸುದರ್ಶನಾಚಾರ್ಯ**
ಶ್ರೀಪವಮಾನ ಮಂದಿರ ಧಾರ್ಮಿಕ ಕೇಂದ್ರ, ಶ್ರೀಗುರು ರಾಘವೇಂದ್ರ ಸೇವಾ ಸಮಿತಿ (ರಿ.)
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ ಸಂಖ್ಯೆ : 080-26766711, 26768662, 55391173, ಮೊಬೈಲ್ ಸಂಖ್ಯೆ : 98801-10281

ಲೇಖನಾಂಕ

# ಶ್ರೀರಾಘವೇಂದ್ರಃ ಸಕಲಪ್ರದಾತಾ

■ ವಿದ್ವಾನ್ ಬಿಂದುಮಾಧವಾಚಾರ್ಯ ನಾಗಸಂಪಿಗೆ
ಬಾಗಲಕೋಟೆ

ಅಪ್ಪಣ್ಣಾಚಾರ್ಯರಿಂದ ಉಕ್ತವಾದ ಈ ಋಷಿವಾಣಿಗೆ ಶ್ರೀಮದ್ಧೀರೇಂದ್ರ-ತೀರ್ಥರು ಗುರುಸ್ತೋತ್ರ ವ್ಯಾಖ್ಯಾನದಲ್ಲಿ 'ಸಕಲಪ್ರದಾತಾ' ಎನ್ನುವಲ್ಲಿ 'ಸರ್ವಾಭೀಷ್ಟಪ್ರದ ಇತ್ಯರ್ಥ' ಎಂದಿದ್ದಾರೆ. ಮಹಾನುಭಾವರಾದ ಶ್ರೀರಾಘವೇಂದ್ರರು ತಮ್ಮ ಪಾದಕಮಲ-ಗಳನ್ನು ಭಜಿಸುವ ಭಕ್ತಜನರ ಸಕಲಾಭೀಷ್ಟಗಳನ್ನು ಪೂರೈಸುತ್ತಾರೆ ಎಂದು ಅರ್ಥ.

ಶ್ರೀರಾಘವೇಂದ್ರಸ್ವಾಮಿಗಳ ಸಕಲಪ್ರದಾತೃತ್ವವನ್ನು ಹಲವು ಮುಖದಿಂದ ತಿಳಿಯಬಹುದು.

**1) ಮುಖ್ಯವಾಗಿ ಜ್ಞಾನದ ಅಭೀಷ್ಟ, ತನ್ಮೂಲಕ ಮೋಕ್ಷ**

ಆಚಾರ್ಯ ಮಧ್ವರ ಗ್ರಂಥಗಳಿಗೆ ಟೀಕಾಕೃತ್ಪಾದರು ರಚಿಸಿದ ಟೀಕಾವಾಕ್ಯಗಳಿಗೆ ಟಿಪ್ಪಣಿ ಬರೆಯುವುದೇ ತಮ್ಮ ಜೀವನದ ಸಾಫಲ್ಯವೆಂದು ತಿಳಿದ ಶ್ರೀರಾಘವೇಂದ್ರರು ಜ್ಞಾನಪಿಪಾಸುವಿಗೆ ಎಲ್ಲ ರೀತಿಯಿಂದಲೂ ಉಪಕಾರಮಾಡಿದ್ದಾರೆ. ಇಂತಹ ವಿಷಯಕ್ಕೆ ವ್ಯಾಖ್ಯಾನಮಾಡಿಲ್ಲ ಎಂಬುದಾಗಿ ಇಲ್ಲ. ಅವರ ಸಮಗ್ರ ಬದುಕೇ ಒಂದು ವ್ಯಾಖ್ಯಾನ.

**೧) ಶ್ರುತಿಪ್ರಸ್ಥಾನಕ್ಕೆ**

ವೇದತ್ರಯವಿವೃತಿ, ಪುರುಷಸೂಕ್ತವೇ ಮೊದಲಾದ ಪಂಚಸೂಕ್ತವ್ಯಾಖ್ಯಾನ, ಮಂತ್ರಾರ್ಥಮಂಜರೀ.

**೨) ಸೂತ್ರಪ್ರಸ್ಥಾನಕ್ಕೆ**

ತತ್ವಪ್ರಕಾಶಿಕಾ ಭಾವದೀಪ, ನ್ಯಾಯಸುಧಾಪರಿಮಳ, ನ್ಯಾಯಮುಕ್ತಾವಲೀ, ಅಣುಭಾಷ್ಯಕ್ಕೆ ತತ್ವಮಂಜರೀ, ಚಂದ್ರಿಕಾಪ್ರಕಾಶ, ತಂತ್ರದೀಪಿಕಾ.

**೩) ಉಪನಿಷತ್ಪ್ರಸ್ಥಾನಕ್ಕೆ**

ಈಶಾವಾಸ್ಯಾದಿ ಹತ್ತು ಉಪನಿಷತ್ತುಗಳ ಟೀಕೆಗೆ ಟಿಪ್ಪಣೀ (ಖಂಡಾರ್ಥ)



**೪) ಗೀತಾಪ್ರಸ್ಥಾನಕ್ಕೆ**

ಗೀತಾಭಾಷ್ಯ ಪ್ರಮೇಯದೀಪಿಕಾ ಟಿಪ್ಪಣೀ, ಗೀತಾತಾತ್ಪರ್ಯ ಟೀಕಾಟಿಪ್ಪಣೀ, ಗೀತಾವಿವೃತಿ.

**೫) ಆಚಾರ್ಯರ ತಂತ್ರಸಾರಕ್ಕೆ :** ತಂತ್ರಸಾರಮಂತ್ರೋದ್ಧಾರ.

**೬) ಪ್ರಸಿದ್ಧವಾದ ಪ್ರಕರಣಗ್ರಂಥಗಳಿಗೆ :** ದಶಪ್ರಕರಣ ಟೀಕಾಟಿಪ್ಪಣೀ

**೭) ಇತಿಹಾಸ ಹಾಗೂ ಪುರಾಣಪ್ರಸ್ಥಾನಕ್ಕೆ**

ರಾಮಚಾರಿತ್ರ್ಯಮಂಜರೀ, ಕೃಷ್ಣಚಾರಿತ್ರ್ಯಮಂಜರೀ, ಮಹಾಭಾರತತಾತ್ಪರ್ಯ ನಿರ್ಣಯ ಭಾವಸಂಗ್ರಹ.

**೮) ವ್ಯಾಸತ್ರಯಗಳಲ್ಲಿ**

ತರ್ಕತಾಂಡವ ವ್ಯಾಖ್ಯಾನ, ತಾತ್ಪರ್ಯಚಂದ್ರಿಕಾ ವ್ಯಾಖ್ಯಾನ.

**೯) ಪೂರ್ವಮೀಮಾಂಸಾಶಾಸ್ತ್ರಕ್ಕೆ :** ಭಾಟ್ಟಸಂಗ್ರಹ

**೧೦) ಸಾಧನಕ್ಷೇತ್ರಕ್ಕೆ**

ಪ್ರಾತಃಸಂಕಲ್ಪಗದ್ಯ, ಸರ್ವಸಮರ್ಪಣಗದ್ಯ, ನದೀತಾರತಮ್ಯಸ್ತೋತ್ರ.

**೧೧) ದಾಸಸಾಹಿತ್ಯ**

ಇಂದು ಎನಗೆ ಗೋವಿಂದ, ಮರುತ ನಿನ್ನಯ ಮಹಿಮೆ.

ಹೀಗೆ ಅಧ್ಯಯನ ಪರಂಪರೆಯ ಯಾವ ಮುಖದಿಂದ ನೋಡಿದರೂ ಅಲ್ಲಿ ರಾಯರು ನೀಡಿದ ಶಾಸ್ತ್ರಾಭೀಷ್ಟ ಅಪಾರವಾಗಿವೆ. ಈ ದೃಷ್ಟಿಯಿಂದ ಶ್ರೀರಾಘವೇಂದ್ರರು ''ಸಕಲ ವಾಙ್ಮಯ ಪ್ರದಾತೃ''ವಾಗಿದ್ದಾರೆ.

**ಐತಿಹಾಸಿಕವಾಗಿ**

**2) ತಂಜಾವೂರು ಪ್ರಾಂತದ ಸಂದರ್ಭ :** ಒಮ್ಮೆ ತಂಜಾವೂರು ಪ್ರಾಂತದಲ್ಲಿ ಎಂದೂ ಕಂಡರಿಯದ ಭೀಕರವಾದ ಬರಗಾಲ ಬಂದೊದಗಿತು. ಅಂದಿನ ದೊರೆ ವಿಜಯರಾಘವ ಶ್ರೀಸುಧೀಂದ್ರರ ತಪಃಶಕ್ತಿಯ ಬಗ್ಗೆ ಬಹಳವಾಗಿ ಕೇಳಿದ್ದ. ಅವನಿಗೆ ಅವರ ಶಿಷ್ಯ ಶ್ರೀರಾಘವೇಂದ್ರರನ್ನು ಮೊರೆಹೋಗುವ ವಿಚಾರ ಮೂಡಿತು. ಅವನ ಪ್ರಾರ್ಥನೆಯಂತೆ ತಮಗೆ ಆಶ್ರಮವಾದ ಊರಿನಲ್ಲಿರುವ ಜನತೆಯು ಹಸಿವಿನಿಂದ ಶ್ರಮಪಡುತ್ತಿರುವುದನ್ನು ಕಂಡು ಅವರಿಗೆಲ್ಲ ಅನ್ನದ ಮಾರ್ಗ ತೋರಲು ನಿಶ್ಚಯಿಸಿ ರಾಜನಿಂದ ಯೋಗ್ಯವಾದ ಧರ್ಮಕಾರ್ಯಗಳನ್ನು ಹಾಗೂ ಯಜ್ಞಗಳನ್ನು

ಮಾಡಿಸಿದರು. ಇದರ ಪರಿಣಾಮವಾಗಿ ೧೨ ವರ್ಷಗಳ ಕಾಲ ದೀರ್ಘವಾಗಿ ಕ್ಷಾಮದಿಂದ ಬಳಲಿದ ಜನ ಶ್ರೀರಾಘವೇಂದ್ರರಿಂದಲೇ ಅನ್ನೋದಕಗಳನ್ನು ಪಡೆದರು. ಆಗ ರಾಜನು ಇಂಥವರ ಪುಣ್ಯದಿಂದಲೇ ರಾಜ್ಯವು ಸುರಕ್ಷಿತವಾಗಿರುವುದು, ತಾನು ಹೆಸರಿಗೆ ಮಾತ್ರ ರಾಜ ಎಂದುಕೊಂಡನು. ರಾಯರ ತಪಃಶಕ್ತಿಯಿಂದಾಗಿ ಧಾರಾಕಾರವಾಗಿ ಮಳೆ ಸುರಿದು ಜನರೆಲ್ಲಾ ಅವರನ್ನು ಕಲಿಯುಗದ ಋಷ್ಯಶೃಂಗರೆಂದೇ ಭಾವಿಸಿದರು. ಹೀಗೆ ಭಕ್ತರ ಕಷ್ಟ ಪರಿಹರಿಸಿ ಅಭೀಷ್ಟಗಳನ್ನು ನೀಡುವವರಾದ್ದರಿಂದ ಶ್ರೀರಾಘವೇಂದ್ರರು 'ಸಕಲ ಪ್ರದಾತೃ'ವಾಗಿದ್ದಾರೆ. ಇದನ್ನು ಶ್ರೀಜಗನ್ನಾಥದಾಸರು ಹೀಗೆ ಹೇಳಿದ್ದಾರೆ -

**"ದ್ವಾದಶವರ್ಷಾನ್ನೋದಕ ಸಲಿಸಿದೆ ।**
**ಮೇಧಿನೀಪತಿಗೆ ಮಹಾದಯವಂತ ರಾಘವೇಂದ್ರ ॥"**

**3) ಶ್ರೀನಿವಾಸಾಚಾರ್ಯರ ಪ್ರಸಂಗ :** ಶ್ರೀರಾಘವೇಂದ್ರರು ಪಂಢರಪುರಕ್ಕೆ ಹೋಗುವ ದಾರಿಯಲ್ಲಿ ಬಿದರಹಳ್ಳಿ ಕ್ಷೇತ್ರವನ್ನು ಸಂದರ್ಶಿಸಿದರು. ಪ್ರಸಿದ್ಧ ಟಿಪ್ಪಣಿ-ಕಾರರಾದ ಶ್ರೀಯದುಪತ್ಯಾಚಾರ್ಯ ಶಿಷ್ಯಶಿರೋಮಣಿ ಗೃಹಸ್ಥ ಶ್ರೀನಿವಾಸಾಚಾರ್ಯರ ಭೇಟಿಯಾಯಿತು. ಶ್ರೀನಿವಾಸಾಚಾರ್ಯರು ನಿರಂತರ ಅಧ್ಯಯನಶೀಲರು. ಅವರು ರಚಿಸಿದ ಟಿಪ್ಪಣಿಗಳು ದ್ವೈತವೇದಾಂತದ ವಿದ್ವಾಂಸರಿಗೆ, ವಿದ್ಯಾರ್ಥಿಗಳಿಗೆ ಮಾನ್ಯ-ವಾಗಿದ್ದು, ಶ್ರೀರಾಘವೇಂದ್ರರೂ ಕೂಡ ಅವರ ಟಿಪ್ಪಣಿಯ ಬಗ್ಗೆ ಬಹಳವಾಗಿ ಕೇಳಿದ್ದರು. ಶ್ರೀರಾಘವೇಂದ್ರರ ಮಹಿಮೆಯೂ ಶ್ರೀನಿವಾಸಾಚಾರ್ಯರ ಕಿವಿಗೆ ಬಿದ್ದಿತ್ತು. ಇಬ್ಬರು ಅಪೂರ್ವ ಟಿಪ್ಪಣಿಕಾರರ ಮಹಾನ್ ಸಮಾಗಮ ಅದು. ಶ್ರೀರಾಯರು ಶ್ರೀನಿವಾಸಾಚಾರ್ಯರ ಗ್ರಂಥಗಳನ್ನೆಲ್ಲಾ ಅವಲೋಕಿಸಿ ಗೃಹಸ್ಥ-ರಾಗಿದ್ದುಕೊಂಡೇ ಸಾಧಿಸಿದ ಇಷ್ಟೊಂದು ವಾಙ್ಮಯ ಸೇವೆಯನ್ನು ಗಮನಿಸಿ, ಅವರನ್ನು ತುಂಬುಹೃದಯದಿಂದ ಅಭಿನಂದಿಸಿ, ಅವರ ಯೋಗ್ಯತೆಯನ್ನು ಗುರುತಿಸಿ ಹರಸಿದರು. ಇದು ಜಗತ್ತು ಕಂಡರಿಯದ ಹೃದಯವೈಶಾಲ್ಯ ಮೆರೆದ ಶ್ರೀಗುರುರಾಜರು ಸಕಲಪ್ರದಾತೃವಾಗಿದ್ದಾರೆ.

**4) ಕಿರೀಟಗಿರಿ ಮುಂತಾದ ಗ್ರಾಮದ ಪ್ರಸಂಗ :** ಕಿರೀಟಗಿರಿ ಗ್ರಾಮದಲ್ಲಿ ಸೀಕರಣೆಯಲ್ಲಿ ಬಿದ್ದ ಮೃತ ಶಿಶುವನ್ನು ಬದುಕಿಸಿ ಆಯುಃಪ್ರದಾನ ಮಾಡಿರುವದು. ಮಠದ ಪರಿಚಾರಕನೊಬ್ಬನ ಅಪಮೃತ್ಯು ಪರಿಹರಿಸಿದುದು ಬೇಸಿಗೆಯ ಬೆಂಗಾಡಿನಲ್ಲಿ ಸಂಚರಿಸುತ್ತಿರುವಾಗ ಶಾಟಿಯಿಂದ ನೆರಳು ನಿರ್ಮಾಣ ಮಾಡಿದುದು ಈ ರೀತಿ ಅಪಾರ ಮಹಿಮೆಗಳು ಶ್ರೀರಾಘವೇಂದ್ರರು ಸಕಲ ಪ್ರದಾತರು ಎನ್ನುವುದನ್ನು ಸಾಬೀತುಪಡಿಸುತ್ತವೆ.



**ಪ್ರಚಲಿತ :** ರಾಯರು ಎಲ್ಲಿ ಕಡೆಯಲ್ಲಿಯೂ ನಿರಂತರ ನೆಲೆಸಿ ಧರ್ಮಕಾರ್ಯ. ಪಾಠ-ಪ್ರವಚನಗಳ ಮೂಲಕ ಜ್ಞಾನದಾನ, ದೇವರ ಕಾರ್ಯ, ಪಿತೃಕಾರ್ಯಗಳ ಮೂಲಕ ಅನ್ನದಾನಗಳು ನಡೆಯುವುದಕ್ಕೆ ಕಾರಣೀಭೂತರಾಗಿ ತನ್ಮೂಲಕ ಸಾವಿರಾರು ಕುಟುಂಬ ಪೋಷಕರು, ಅಸಂಖ್ಯ ಭಕ್ತರಿಗೆ ದಾರಿದೀಪರೂ, ಸನ್ಮಾರ್ಗಪ್ರದರೂ ಆಗಿದ್ದಾರೆ. ಜೊತೆಗೆ ಕಣ್ಣಿಲ್ಲದವರಿಗೆ ಕಣ್ಣು (ಒಳಗಣ್ಣು) ಮಾತಿಲ್ಲದವರಿಗೆ ಮಾತು (ಪಾಂಡಿತ್ಯ) ಸಂಸಾರದಲ್ಲಿ ಬರಡಾದವರಿಗೆ ನೆಮ್ಮದಿಯ ಜೀವನ, ಒಟ್ಟರ್ಥದಲ್ಲಿ ಶ್ರೀಗುರುರಾಜರು ಭವರೋಗಿಗಳಿಗೆ ವೈದ್ಯರು, ಸಾಧಕರಿಗೆ ಮೋಕ್ಷಮಾರ್ಗದರ್ಶಕರೂ ಆಗಿದ್ದಾರೆ.

ಆದ್ದರಿಂದ ಈ ಎಲ್ಲ ಹಿನ್ನೆಲೆಯಲ್ಲಿ ರಾಯರು ಇಂದಿಗೂ ಎಂದೆಂದಿಗೂ ಸಕಲಪ್ರದಾತೃಗಳಾಗಿದ್ದಾರೆ. ಇವರಂತೆ ಸಕಲಪ್ರದಾತೃಗಳು ಯಾರೂ ಇಲ್ಲ.

❑❑


॥ ಶ್ರೀಮಲಕ್ಷ್ಮೀ ಅನಂತ ಪ್ರಸನ್ನ ॥

**ಶ್ರೀಅನಂತಪದ್ಮನಾಭ ಟೂರ್ಸ್ ಅಂಡ್ ಟ್ರಾವೆಲ್ಸ್**

**ದಕ್ಷಿಣ ಭಾರತ (ಉಡುಪಿ ಪರ್ಯಾಯ, ರಾಮೇಶ್ವರ) ಯಾತ್ರೆ**

ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ತೀರ್ಥಪ್ರಸಾದ, ಮಡಿಯಿಂದ ಊಟದ ವ್ಯವಸ್ಥೆ ಇದೆ.

**ದಿನಾಂಕ 30-12-2007 ರಿಂದ 19-01-2008 ರವರೆಗೆ**

**ಯಾತ್ರಾಸ್ಥಳಗಳು :**

ಶ್ರೀಶೈಲ, ಅಹೋಬಿಲ, ತಿರುಪತಿ, ಕಂಚಿ, ತಿರಕೋಯಿಲೂರು, ಚಿದಂಬರಂ, ಕುಂಭಕೋಣ, ತಂಜಾವೂರು, ದೊಡ್ಡ ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೆಂದ್ರ, ತಿರುವನಂತಪುರಂ, ಗುರುವಾಯೂರು, ಉಡುಪಿ, ಪಾಜುಕಾಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 6,900/- ಮಾತ್ರ** (3 × 2 ಲಕ್ಸುರಿ ಬಸ್ಸಿನಲ್ಲಿ)

**ಸೀಟು ಒಂದಕ್ಕೆ ರೂ. 9,600/- ಮಾತ್ರ** (2 × 2 ಪುಷ್‌ಬ್ಯಾಕ್ ಡಿಲಕ್ಸ್ ಬಸ್ಸಿನಲ್ಲಿ)

ಈ ಸುದೀರ್ಘ ಪ್ರವಾಸದಲ್ಲಿ ಚಹಾ / ಕಾಫಿ, ಉಪಹಾರ, ವಸತಿ ಸೌಕರ್ಯ, ಬಸ್ಸು ಛಾರ್ಜುಗಳು ಸೇರಿವೆ.

ಇಂದೇ ಸೀಟು ಒಂದಕ್ಕೆ ರೂ. 3000/- ಕಳುಹಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.

**ಸೂಚನೆ** : 23-09-2007 ರಿಂದ 23 ದಿನಗಳ ಉತ್ತರ ಭಾರತ (ಬದರಿ) ಯಾತ್ರಾ ಪವಿತ್ರ ಪಕ್ಷಮಾಸದಲ್ಲಿ ಹೈದ್ರಾಬಾದ್ ರೈಲ್ವೆ ನಿಲ್ದಾಣದಿಂದ ಹೊರಡಲಿದೆ ಮತ್ತು ನವೆಂಬರ್ 2007 ರಲ್ಲಿ 12 ದಿನಗಳ ನೇಪಾಳ, ಕಾಶಿ ಯಾತ್ರಾ ಇದೆ.

ಹೆಚ್ಚಿನ ವಿವರಗಳಿಗೆ :

**D. Vijayeendracharya Kosgi**
S/o. D. Ananthapadmanathacharya, Flat, 102, Madhuchaitanya Aprts.,
Sai Delux Nagar, Moulali, Hyderabad - 500 040
**Ph : 040-27141716, Cell : 9440702447**

# ಶ್ರೀಮನ್ನ್ಯಾಯಸುಧೆಯ ಮಂಗಳಶ್ಲೋಕದ ಅಂತರಾರ್ಥ

■ ಡಾ. ಮಾದನೂರು ಪವಮಾನಾಚಾರ್ಯ
ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು

ಸಕಲಸಜ್ಜನರಿಗೆ ಶುದ್ಧ ತತ್ವಜ್ಞಾನವನ್ನು ನೀಡಲೆಂದು ಸರ್ವಮೂಲಗ್ರಂಥಗಳನ್ನು ರಚಿಸಿದ ಶ್ರೀಮದಾಚಾರ್ಯರು, ಪ್ರಸ್ಥಾನತ್ರಯಗಳಲ್ಲೊಂದಾದ ಸೂತ್ರಪ್ರಸ್ಥಾನಕ್ಕೆ ಸಂಬಂದಪಟ್ಟಂತೆ ನಾಲ್ಕು ಗ್ರಂಥಗಳನ್ನು ರಚಿಸಿರುವರು. ಅವುಗಳಲ್ಲಿ **'ಅನುವ್ಯಾಖ್ಯಾನ'**ವು ಬ್ರಹ್ಮಸೂತ್ರಗಳ ಅರ್ಥವನ್ನು ವಿಸ್ತಾರವಾಗಿ ವಿಮರ್ಶಿಸುವ ಬೃಹತ್ತಮ, ಮಹತ್ತಮ ಕೃತಿಯೆನಿಸಿದೆ.

## ಅನುವ್ಯಾಖ್ಯಾನದ ಅಪೂರ್ವತೆ

ಬ್ರಹ್ಮಸೂತ್ರಗಳ ಅರ್ಥವನ್ನು ತಿಳಿಸುವ **'ಸೂತ್ರಭಾಷ್ಯ'**ವನ್ನು ಶ್ರೀಮದಾಚಾರ್ಯರು ರಚಿಸಿದ್ದರೂ, ಅದರಿಂದ ತೃಪ್ತರಾಗದ ಪಂಡಿತಾಚಾರ್ಯರ ಪ್ರಾರ್ಥನೆಯ ಮೇರೆಗೆ ತರ್ಕಭೂಯಿಷ್ಠವಾದ ಅನುವ್ಯಾಖ್ಯಾನದ ರಚನೆಯಾಯಿತು. ಭಾವಿ ಚತುರ್ಮುಖರಾದ ಶ್ರೀಮದಾಚಾರ್ಯರು ಚತುರರಾದ ನಾಲ್ಕು ಮಂದಿ ಶಿಷ್ಯರಿಗೆ ಏಕಕಾಲದಲ್ಲೇ ನಾಲ್ಕು ಅಧ್ಯಾಯಗಳನ್ನೂ ಹೇಳಿ, ಬರೆಸಿ, ಈ ಗ್ರಂಥವನ್ನು ರಚಿಸಿದರು. ದುರ್ವಾದಿಗಳ ದುರಹಂಕಾರವನ್ನು ತರಿಯುವ ವಜ್ರಾಯುಧದಂತೆ ಇರುವ ಈ ಗ್ರಂಥವು ಬಹುದರ್ಶಿಗಳಿಗೆ ಮಾತ್ರ ವಿಶೇಷವಾಗಿ ಅರ್ಥವಾಗುವುದು.

> "ಗ್ರಂಥೋಽಯಮಪಿ ಬಹ್ವರ್ಥೋ ಭಾಷ್ಯಂಚಾತ್ಯರ್ಥವಿಸ್ತರಮ್ ।
> ಬಹುಜ್ಞಾ ಏವ ಜಾನಂತಿ ವಿಶೇಷೇಣಾರ್ಥಮೇತಯೋಃ ॥"

## ಅನುವ್ಯಾಖ್ಯಾನದ ಮಂಗಳಾಚರಣೆ

ಸರ್ವಜ್ಞರಾದ ಶ್ರೀಮದಾಚಾರ್ಯರು ಪ್ರಾಕೃತ ಗುಣಗಳ ಪ್ರಭಾವಕ್ಕೆ ಒಳಗಾಗದೇ ಇರುವವರು. ಅವರಿಗೆ ವಿಘ್ನ ಮುಂತಾದ ಯಾವ ಪ್ರತಿಬಂಧಕಗಳೂ ಇಲ್ಲ. ಆದ್ದರಿಂದ ಇಂತಹ ಪ್ರತಿಬಂಧಕಗಳ ನಿವೃತ್ತಿಗಾಗಿ ಅವರು ಭಗವಂತನಿಗೆ ನಮಸ್ಕಾರ ಮಾಡುವುದೂ ಇಲ್ಲ. ಸಹಜವಾಗಿಯೇ ನಿರಂತರ ಭಗವಂತನನ್ನು ಚಿಂತಿಸುವ ನಮಿಸುವ ಆಚಾರ್ಯರು ಗ್ರಂಥಾರಂಭದಲ್ಲೂ ನಮಿಸಿದ್ದಾರೆ -



> "ನಾರಾಯಣಂ ನಿಖಿಲಪೂರ್ಣಗುಣೈಕದೇಹಂ ನಿರ್ದೋಷ-
> ಮಾಪ್ಯತಮಪ್ಯಖಿಲೈಃ ಸುವಾಕ್ಯೈಃ ।
> ಅಸ್ಯೋದ್ಭವಾದಿದಂ ಅಶೇಷವಿಶೇಷತೋಽಪಿ
> ವಂದ್ಯಂ ಸದಾ ಪ್ರಿಯತಮಂ ಮಮ ಸನ್ನಮಾಮಿ ॥"

ಇಲ್ಲಿ ಆರು ವಿಶೇಷಣಗಳಿಂದ ನಾರಾಯಣನನ್ನು ಸ್ತುತಿಸಿ ನಮಿಸಲಾಗಿದೆ. ಗ್ರಂಥದ ಆರಂಭದಲ್ಲಿ ಗ್ರಂಥಪ್ರತಿಪಾದ್ಯದೇವತೆಯ ವಂದನೆಯೇ ಔಚಿತ್ಯಪೂರ್ಣವೆನಿಸುವುದು. ಅದುವೇ ಅಧಿಕೃತವೆನಿಸುತ್ತದೆ. ಬ್ರಹ್ಮಮೀಮಾಂಸಾಶಾಸ್ತ್ರದ ಆರಂಭದಲ್ಲಿ ಬ್ರಹ್ಮನಿಗೆ ನಮಸ್ಕರಿಸುವ ಬದಲು ನಾರಾಯಣನಿಗೆ ನಮಸ್ಕರಿಸುವುದು ಅನುಚಿತ ಎಂಬ ಶಂಕೆಗೆ ಅವಕಾಶವಿಲ್ಲ. **'ಬ್ರಹ್ಮಶಬ್ದಶ್ಚ ವಿಷ್ಣಾವೇವ'** ಎಂಬ ವಚನದಂತೆ ಬ್ರಹ್ಮ- ನಾರಾಯಣ-ವಿಷ್ಣುಗಳಿಗೆ ಭೇದವಿಲ್ಲ. ಆದ್ದರಿಂದ ನಾರಾಯಣನಿಗೆ ನಮಿಸಲಾಗಿದೆ ಹಾಗೂ ಬ್ರಹ್ಮಮೀಮಾಂಸಾಶಾಸ್ತ್ರದ ನಾಲ್ಕು ಅಧ್ಯಾಯಗಳಲ್ಲಿ ಸಮರ್ಥಿಸಿರುವ ನಾಲ್ಕು ಅಧ್ಯಾಯಾರ್ಥ ಸೂಚಕವಾದ ನಾರಾಯಣ ಶಬ್ದದಿಂದಲೇ ಇಲ್ಲಿ ಪರಬ್ರಹ್ಮನನ್ನು ಸ್ತುತಿಸಲಾಗಿದೆ. ಆದರೆ ರಘುವಂಶ ಕಾವ್ಯದ ಆರಂಭದಲ್ಲಿ ಯಾವ ರೀತಿಯ ಸಂಬಂಧವೂ ಇಲ್ಲದ ಶಿವ-ಪಾರ್ವತಿಯರ ವರ್ಣನೆ ಹಾಗೂ ವಂದನೆಗಳು ಮಹಾಕವಿಯ ಔಚಿತ್ಯ ಹೀನತೆಗೆ ನಿದರ್ಶನವಾಗಿವೆ.

## ಟೀಕಾಕೃತ್ಪಾದರ ಚಮತ್ಕಾರದ ವ್ಯಾಖ್ಯಾನ

ಶ್ರೀಮದಾಚಾರ್ಯರ ಅನುವ್ಯಾಖ್ಯಾನದ ಮಂಗಳಶ್ಲೋಕವನ್ನು ವ್ಯಾಖ್ಯಾನಿಸುತ್ತಲೇ ತಮ್ಮ ಟೀಕೆಯ ಆರಂಭದ ಮಂಗಲವನ್ನೂ ಆಚರಿಸಿ, ಮೂಲಶ್ಲೋಕದ ಅರ್ಥವಿವರಣೆಯನ್ನು ನೀಡುವ ಟೀಕಾಕೃತ್ಪಾದರ ಶ್ರೀಮನ್ನ್ಯಾಯಸುಧೆಯ ಶೈಲಿ ಅತ್ಯಂತ ರೋಚಕ. ಶ್ರೀಮದಾಚಾರ್ಯರು ಅನುವ್ಯಾಖ್ಯಾನದ ಮಂಗಲಪದ್ಯದಲ್ಲಿ ಯಾವ ವಿಶೇಷಣಗಳಿಂದ ಯಾವ ಭಗವದ್ರೂಪವನ್ನು ವಂದಿಸಿರುವರೋ ಟೀಕಾಕಾರರು ಅದೇ ವಿಶೇಷಣಗಳನ್ನು ವಿವರಿಸುತ್ತಾ ಅದೇ ಭಗವದ್ರೂಪವನ್ನು ತಮ್ಮ ಗ್ರಂಥದ ಮಂಗಳಪದ್ಯದಲ್ಲಿ ವಂದಿಸುವರು. ಹೀಗೆ ಮೂಲ ಮಂಗಳಪದ್ಯವನ್ನು ಟೀಕೆಯ ಮಂಗಳಪದ್ಯದಿಂದಲೇ ವ್ಯಾಖ್ಯಾನಿಸುವ ಅದ್ಭುತ ಜಾಣ್ಮೆಯನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಇತರ ದರ್ಶನಗಳಲ್ಲಿ, ಮೂಲಗ್ರಂಥಗಳಲ್ಲಿ ಶಿವನ ವಂದನೆ ಇದ್ದರೆ, ವ್ಯಾಖ್ಯಾನಗ್ರಂಥಗಳಲ್ಲಿ ಶಾರದೆಯ ವಂದನೆಯಿರುತ್ತದೆ. ಮತ್ತೊಂದು ಕಡೆ ಮೂಲ ಗ್ರಂಥಕಾರರು ಸಾಂಬಮೂರ್ತಿಯನ್ನು ನಮಿಸಿದರೆ ವ್ಯಾಖ್ಯಾಕಾರರು ತಮ್ಮ ತಂದೆ-ತಾಯಿಗಳನ್ನು ವಂದಿಸಿ ಗ್ರಂಥವನ್ನು ಆರಂಭಿಸುತ್ತಾರೆ. ಆದರೆ ಮಂಗಳಾಚರಣೆ-

ಯಿಂದಲೇ ಮೂಲಗ್ರಂಥಕ್ಕೆ ಅಕ್ಷರಶಃ ಅನುಗುಣವಾದ ಅಪ್ರತಿಮ ಟೀಕೆಯೆಂದರೆ ಶ್ರೀಮನ್ನ್ಯಾಯಸುಧೆಯೇ ಆಗಿದೆ.

## ನಾರಾಯಣಂ ಎಂಬುದರ ವ್ಯಾಖ್ಯಾನವೇ ಶ್ರಿಯಃ ಪತ್ಯೇ

ಬ್ರಹ್ಮಸೂತ್ರಗಳು ವೇದಗಳ ಅರ್ಥವನ್ನು ನಿರ್ಣಯಿಸಲು ಹೊರಟಿವೆ. ಸಮಸ್ತ ವೇದಗಳ ಸಂಕ್ಷಿಪ್ತ ರೂಪವೇ ಓಂಕಾರ. ಓಂಕಾರದಲ್ಲಿ ಅಡಕವಾದ ಎಂಟು ಅಕ್ಷರಗಳಿಂದ ಪ್ರತಿಪಾದ್ಯ ಮಂತ್ರವೇ ನಾರಾಯಣಾಷ್ಟಾಕ್ಷರಮಂತ್ರ. ವೇದಾರ್ಥಗಳನ್ನು ನಿರ್ಣಯಿಸುವ ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನಿಸುವಾಗ ಶ್ರೀಮದಾಚಾರ್ಯರು ವೇದಸಾರಭೂತವಾದ ಓಂಕಾರ ಪ್ರತಿಪಾದ್ಯ ನಾರಾಯಣರೂಪವನ್ನೇ ವಂದಿಸಿರುವರು. ನಾರಾಯಣ ಎಂಬ ಹೆಸರು ಭಗವಂತನಿಗೆ ಸಾಂಕೇತಿಕವಾಗಿ ಬಂದುದಲ್ಲ. ಅದೊಂದು ಯೌಗಿಕವಾದ ವಿಶಿಷ್ಟ ಗುಣಗಳನ್ನು ತಿಳಿಸುವ ಅಪೂರ್ವ ನಾಮ. ಅದರ ಅರ್ಥವನ್ನು ಟೀಕಾಕಾರರು **'ಶ್ರಿಯಃ ಪತ್ಯೇ'** ಎಂಬ ಅಂಶದಿಂದ ತಿಳಿಸಿರುವರು. ನಾರಾ = ದೋಷಗಳೇ ಇಲ್ಲದ ಲಕ್ಷ್ಮೀದೇವಿ, ಅಂತಹ ಲಕ್ಷ್ಮೀದೇವಿಗೆ ಪತಿಯಾಗಿ ತನ್ನ ವಕ್ಷಃಸ್ಥಳದಲ್ಲಿ ಸದಾ ಆಶ್ರಯವನ್ನು ನೀಡಿದವನು ಭಗವಂತ. ಈ ಭಾವವನ್ನು ಭಾಗವತವು ಸ್ಪಷ್ಟಪಡಿಸುತ್ತದೆ -

"ಸ್ವಸ್ಯಾಃ ಶ್ರಿಯಃ ತ್ರಿಜಗತಃ ಜನಕೋ ಜನನ್ಯಾಃ
ವಕ್ಷೋನಿವಾಸಮಕರೋತ್ ಪರಮಂ ವಿಭೂತೇಃ ।
ಶ್ರೀಃ ಸ್ವಾಃ ಪ್ರಜಾಃ ಸಕರುಣೇನ ನಿರೀಕ್ಷಣೇನ
ಯತ್ರ ಸ್ಥಿತೈಧಯತ ಸಾಧಿಪತೀನ್ ತ್ರಿಲೋಕಾನ್ ॥"

ಲಕ್ಷ್ಮೀದೇವಿಯ ಜ್ಞಾನಪೂರ್ವಕ ಭಕ್ತಿ ಹಾಗೂ ಶರಣಾಗತಿಗೆ ಮೆಚ್ಚಿದ ಮೂಜಗದ ತಂದೆ ಶ್ರೀಹರಿಯು ತ್ರಿಲೋಕಜನನಿಯಾದ ತನ್ನ ಮಡದಿ ಲಕ್ಷ್ಮೀದೇವಿಗೆ ತನ್ನ ಎದೆಯಲ್ಲೇ ಶ್ರೇಷ್ಠವಾದ ನೆಲೆಯನ್ನು ಕಲ್ಪಿಸಿದನು. ಅಲ್ಲಿ ನೆಲೆಸಿದ ಲಕ್ಷ್ಮೀದೇವಿಯು ತನ್ನ ಕರುಣೆಯ ಕುಡಿನೋಟದಿಂದ ಈ ಎಲ್ಲ ಲೋಕ ಹಾಗೂ ಲೋಕಪಾಲಕರನ್ನು ನಿರಂತರ ಅಭಿವೃದ್ಧಿ ಹೊಂದುವಂತೆ ಮಾಡಿದಳು.

ಎಲ್ಲ ಲಕ್ಷ್ಮೀಪುತ್ರರೂ ಲಕ್ಷ್ಮೀದೇವಿಗೆ ಆಶ್ರಯವನ್ನು ನೀಡುವವರೇ, ಸಂಪತ್ತಿನಿಂದಾಗಿ ಸಮರ್ಥರೆನಿಸುವ, ಬಯಕೆಗಳ ಬೆನ್ನು ಹತ್ತಿದ, ಇಂಥವರ ಆಶ್ರಯ ಲಕ್ಷ್ಮಿಗೆ ಬೇಕಿರಲಿಲ್ಲ. ಆಕೆ ಬಯಸಿದ್ದು - **'ರಮಾ ವವ್ರೇ ಮುಕುಂದಂ ನಿರಪೇಕ್ಷಮೀಶ್ವರಮ್'** ನಿರಪೇಕ್ಷನಾದ ಸರ್ವಸಮರ್ಥನಾದ ಮುಕ್ತಿಯನ್ನು ನೀಡುವ ಭಗವಂತನ ಆಸರೆಯನ್ನು. ತನ್ನ ಆಸರೆಯನ್ನು ನೀಡಿ ಭಗವಂತ ಲಕ್ಷ್ಮಿಯ ಆಸೆಯನ್ನು ಪೂರೈಸಿದ.



ಹೀಗೆ ಲಕ್ಷ್ಮೀಪತಿಯಾದ್ದರಿಂದ ಶ್ರೀಹರಿಯು ನಾರಾಯಣ ಎನಿಸಿರುವನು. **'ನಾರಾಯಣಂ ಸನ್ನಮಾಮಿ'** - 'ನಾರಾಯಣನನ್ನು ಭಕ್ತಿಯಿಂದ ನಮಿಸುವೆ' ಎಂದು ಆಚಾರ್ಯರು ಕರ್ತರಿ ಪ್ರಯೋಗದಲ್ಲಿ ಹೇಳಿದ್ದನ್ನೇ ಶ್ರೀಸುಧಾಕಾರರು **'ಶ್ರಿಯಃ ಪತ್ಯೇ ನಮಃ (ಕ್ರಿಯತೇ)'** ಎಂದು ಕರ್ಮಣಿ ಪ್ರಯೋಗಕ್ಕೆ ಬದಲಾಯಿಸಿ ಮೂಲದ ಭಾವವನ್ನು ಅತ್ಯಂತ ಚಮತ್ಕಾರದಿಂದ ಅನಾವರಣಗೊಳಿಸಿದ್ದಾರೆ.

## 'ಶ್ರೀಪತಯೇ' ಎನ್ನದೆ 'ಶ್ರಿಯಃ ಪತ್ಯೆ' ಎಂದದ್ದೇಕೆ?

ಭಗವಂತನು ಜಗತ್ಪತಿಯಾಗಿದ್ದರೂ, ಜಗತ್ತಿನ ಎಲ್ಲ ಭಕ್ತರ ಮೇಲಿರುವ ಪ್ರೀತಿಗಿಂತಲೂ ಲಕ್ಷ್ಮೀದೇವಿಯಲ್ಲಿರುವ ಭಗವತ್ ಪ್ರೀತಿಯು ಕೋಟಿ ಪಟ್ಟು ಅಧಿಕವಾಗಿರುವುದರಿಂದ, ಅಂತಹ ಲಕ್ಷ್ಮೀದೇವಿಯನ್ನು ಭಗವಂತನ ಮಡದಿ ಎಂದು ಅನುಸಂಧಾನ ಮಾಡಿದಾಗ ಭಗವಂತನು ವಿಶೇಷವಾಗಿ ಪ್ರಸನ್ನನಾಗುವನು. ಹಾಗೆಯೇ ಲಕ್ಷ್ಮೀದೇವಿಗೂ ತನ್ನ ಬೇರೆಲ್ಲ ಸ್ತುತಿಗಳಿಗಿಂತ **'ಭಗವಂತನ ಮಡದಿ'** ಎಂದು ತನ್ನನ್ನು ಸ್ತುತಿಸಿದಾಗ ವಿಶೇಷವಾಗಿ ಆನಂದವಾಗುವುದು. ಹೀಗೆ ಶ್ರೀಪತಿ ಎಂಬ ಉಪಾಸನೆಯು ರಮಾ-ನಾರಾಯಣರಿಬ್ಬರ ಅನುಗ್ರಹಕ್ಕೂ ಸಾಧಕ ಎಂಬ ದೃಷ್ಟಿಯಿಂದ **'ಶ್ರಿಯಃ ಪತ್ಯೆ'** ಎಂದು ಇಲ್ಲಿ ಸ್ತುತಿಸಲಾಗಿದೆ.

**'ಶ್ರೀಪತಯೇ'** ಎಂಬ ಒಂದೇ ಪದದಿಂದ ಸ್ತುತಿಸದೆ **'ಶ್ರಿಯಃ ಪತ್ಯೆ'** ಎಂದು ಪದಗಳನ್ನು ಬಿಡಿಸಿ ಸ್ತುತಿಸಿದ್ದೇಕೆ? ಎಂದು ಪ್ರಶ್ನೆ ಬರಬಹುದು. ಆದರೆ **'ಶ್ರೀಃ ಪತಿಃ ಯಸ್ಯ ಸಃ'** ಎಂದು (ಬಹುವ್ರೀಹಿ) ಸಮಾಸ ಮಾಡಿದಾಗ, ಲಕ್ಷ್ಮಿಯೇ ಯಾರಿಗೆ ಒಡತಿಯೋ ಅವನು ಶ್ರೀಪತಿ ಎಂಬ ಅರ್ಥ ಬರುವುದರಿಂದ ಇಂಥ ವಿಪರೀತಾರ್ಥಕ್ಕೆ ಅವಕಾಶವೇ ಇಲ್ಲದಂತೆ ಸ್ಪಷ್ಟವಾಗಿ **'ಶ್ರಿಯಃ ಪತ್ಯೆ'** ಎಂದು ಬಿಡಿಸಿ ಹೇಳಲಾಗಿದೆ. ಈ ಉದ್ದೇಶದಿಂದಲೇ ಬೇರೆಲ್ಲ ಕಡೆಗಳಲ್ಲಿಯೂ ಸಮಾಸ ಮಾಡದೆ **'ರಮಣಂ ಶ್ರಿಯಃ, ರಮಣಂ ಲಕ್ಷ್ಮ್ಯಾಃ, ರಮಾಯಾಃ ರಮಣಂ'** ಎಂದೇ ಹೇಳಲಾಗಿದೆ.

ಪರಮ ಪತಿವ್ರತೆಯಾದ ಲಕ್ಷ್ಮೀದೇವಿಯು ಪತಿಯನ್ನು ಬಿಟ್ಟು ತನ್ನನ್ನು ಮಾತ್ರ ವಂದಿಸುವುದನ್ನು, ಪತಿಗೆ ಸಮಾನವಾಗಿ ವಂದಿಸುವುದನ್ನು ಎಂದಿಗೂ ಸಹಿಸುವುದಿಲ್ಲ. ಪತಿಯ ಜೊತೆಗೆ, ಪರಮ ಪುರುಷನ ಪತ್ನಿ ಎಂದು ವಂದಿಸಿದಾಗ ಲಕ್ಷ್ಮಿಗೆ ವಿಶೇಷ ಸಂತೋಷವುಂಟಾಗುತ್ತದೆ. ಈ ಅಂಶವನ್ನು ಮುಂದಿನ ವಾಕ್ಯ ಪುಷ್ಟೀಕರಿಸುತ್ತದೆ -

"ವಿಷ್ಣುನಾ ಸಹಿತಾ ಧ್ಯಾತಾ ಸಾಽಪಿ ತುಷ್ಟಿಂ ಪರಾಂ ವ್ರಜೇತ್ ॥"

ಹೀಗೆ ಭಗವಂತನ ಜೊತೆಗೆ ಲಕ್ಷ್ಮೀದೇವಿಗೆ ನಮಿಸುವ ಮೂಲಕ ಪ್ರಧಾನವಾಗಿ ಭಗವಂತನಿಗೂ, ಅನಂತರ ಭಾಗ್ಯದೇವತೆಯಾಗ ಲಕ್ಷ್ಮೀದೇವಿಗೂ ನಮಸ್ಕರಿಸಿ ಉಭಯರ ಅನುಗ್ರಹವನ್ನು ಪಡೆಯಬೇಕೆಂದು ಸೂಚಿಸಲಾಗಿದೆ.

## ನಿಖಿಲಪೂರ್ಣಗುಣೈಕದೇಹಂ, ನಿರ್ದೋಷಂ

ನಾಲ್ಕು ಅಧ್ಯಾಯಗಳನ್ನೊಳಗೊಂಡ ಬ್ರಹ್ಮಮೀಮಾಂಸಾಶಾಸ್ತ್ರದ ಮೊದಲ ಎರಡು ಅಧ್ಯಾಯಗಳಲ್ಲಿ ಪ್ರತಿಪಾದಿಸಿರುವ ಭಗವಂತನ ಗುಣಪೂರ್ಣತೆ ಹಾಗೂ ನಿರ್ದೋಷತೆಯನ್ನು ಮೇಲಿನ ಎರಡು ವಿಶೇಷಣಗಳಿಂದ ಶ್ರೀಮದಾಚಾರ್ಯರು ಸಂಗ್ರಹಿಸಿರುವರು. ಈ ಎರಡು ವಿಶೇಷಣಗಳ ವಿವರಣೆಯನ್ನು ನ್ಯಾಯಸುಧೆಯ ಮಂಗಲಪದ್ಯದ ಎರಡು ಪಾದಗಳು ನೀಡುವವು.

ಜ್ಞಾನ, ಆನಂದ ಮೊದಲಾದ ಗುಣಗಳ ನೆಲೆಯಾದ ಭಗವಂತನಿಗೆ ಆ ಗುಣಗಳೇ ಶರೀರವೆನಿಸಿದೆ. ಆದರೂ ನಮ್ಮ ಶರೀರದಂತೆ ಅವನ ಚಿನ್ಮಯ ಶರೀರವು ನಾಶವಾಗುವುದಿಲ್ಲ. ಏಕೆಂದರೆ, ಭಗವಂತನ ಗುಣಗಳು - **'ನಿತ್ಯಾಗಣಿತಗುಣ'**ಗಳಾಗಿವೆ. ಯಾವ ದೇಶ-ಕಾಲದಲ್ಲೂ ಭಗವಂತನ ಯಾವ ಗುಣಗಳಿಗೂ ಉತ್ಪತ್ತಿ - ನಾಶಗಳಿಲ್ಲ. ಆದ್ದರಿಂದ ಇಂತಹ ನಿತ್ಯವಾದ ಗುಣಗಳೆಂಬ ಶರೀರವುಳ್ಳವನು ಭಗವಂತ. ಆ ಗುಣಗಳು ನಿತ್ಯವಾಗಿರುವಂತೆ ಅಗಣಿತಗಳೂ ಆಗಿವೆ. ಯಾರಿಂದಲೂ ಎಣಿಸಲಾಗದ ಅಸಂಖ್ಯ ಗುಣಗಳು ಅವನದ್ದಾಗಿವೆ. **'ಮಯ್ಯನಂತಗುಣೇಽನಂತೇ ಗುಣತೋಽನಂತ ವಿಗ್ರಹೇ'** ಎಂಬ ಭಾಗವತವು ಇದಕ್ಕೆ ಸಂವಾದಿಯಾಗಿದೆ. ಭಗವಂತನ ಈ ಶಾಶ್ವತವಾದ ಅಸಂಖ್ಯ ಗುಣಗಳೆಂಬ ಮಾಣಿಕ್ಯದ, ಎಲ್ಲೆಡೆ ಹರಡಿದ ಬೆಳಕಿನ ಗುಂಪಿನಿಂದ ದೋಷಗಳೆಂಬ ಕಗ್ಗತ್ತಲೆಯು ಇಲ್ಲವಾಗಿದೆ.

ಹೊಳೆ ಹೊಳೆಯುವ ಮಾಣಿಕ್ಯದ ಬೆಳಕು ಕತ್ತಲೆಯನ್ನು ದೂರಮಾಡುವಂತೆ, ಭಗವಂತನ ಗುಣಗಳು ದೋಷಗಳನ್ನು ದೂರಮಾಡಿವೆ. ಮಾಣಿಕ್ಯದ ಬೆಳಕು ಎಲ್ಲೆಡೆ ಹರಡಿದಂತೆ ಭಗವಂತನ ಗುಣಗಳೂ ಎಲ್ಲವನ್ನೂ ವಿಷಯೀಕರಿಸುವ (ಗ್ರಹಿಸುವ) ಸಾಮರ್ಥ್ಯ ಹೊಂದಿವೆ **(ವಿಶದಪ್ರಭಾ)**. ಭಗವಂತನ ಈ ಗುಣಗಳು ಅಭಿವ್ಯಕ್ತವಾಗಿ **(ಉಲ್ಲಾಸ)** ಕಾರ್ಯೋನ್ಮುಖವಾಗಿ ದೋಷಗಳನ್ನು ದೂರಮಾಡುತ್ತವೆ ಎಂದು ತಾತ್ಪರ್ಯ.



## ಮಾಣಿಕ್ಯಪ್ರಭೆ ಹಾಗೂ ತಮಸ್ಸಿನ ಹೋಲಿಕೆಯ ಔಚಿತ್ಯ

ಶ್ರೀಹರಿಯು ಗುಣಪೂರ್ಣನಾದ್ದರಿಂದ ದೋಷರಹಿತನಾಗಿರುವವನು ಎಂಬುದನ್ನು ವಿವರಿಸುವುದಕ್ಕಾಗಿ ಸುಧಾಕಾರರು ಬೆಳಕಿನಿಂದಾಗಿ ಕತ್ತಲೆ ಇಲ್ಲವಾಗುವಂತೆ ಎಂಬ ಉಪಮೆಯನ್ನು ನೀಡಿರುವರು. ಬೆಳಕು ಹಾಗೂ ಕತ್ತಲೆಗೆ ಪರಸ್ಪರ ವಿರೋಧವಿದೆ. ಶಾಸ್ತ್ರದಲ್ಲಿ ಅನೇಕ ಕಡೆಗಳಲ್ಲಿ 'ವಿರೋಧ' ಎಂಬ ಶಬ್ದವನ್ನು ಬಳಸುವುದುಂಟು. ಈ ವಿರೋಧವು ಮೂರು ಬಗೆಯಾಗಿದೆ.

| | | |
|---|---|---|
| ೧. | ವಧ್ಯಘಾತಕಭಾವಃ | ಮೂಷಕ - ಮಾರ್ಜಾಲಗಳಿಗೆ |
| ೨. | ಸಹಾನವಸ್ಥಾನಃ | ಪ್ರಕಾಶ - ತಮಸ್ಸುಗಳಿಗೆ |
| ೩. | ಭಾವಾಭಾವಃ | ಸುರರು ಹಾಗೂ ಅಸುರರಿಗೆ |

೧. ಇಲಿ ಹಾಗೂ ಬೆಕ್ಕಿಗೆ ವಧ್ಯಘಾತಕಭಾವ ಎಂಬ ವಿರೋಧ. ಇಲಿಯನ್ನು ಬೆಕ್ಕು ಕೊಂದು ಸಾಯಿಸುವುದರಿಂದ ಇಲಿಯು ವಧ್ಯವೂ, ಬೆಕ್ಕು ಘಾತಕವೂ ಆಗುವುದರಿಂದ ಅವೆರಡಕ್ಕೆ ವಧ್ಯಘಾತಕತ್ವ ಎಂಬ ವಿರೋಧವಿದೆ.

೨. ಪ್ರಕಾಶ ಹಾಗೂ ತಮಸ್ಸುಗಳಿಗೆ 'ಒಟ್ಟಿಗೆ ಇರುವಿಕೆ' ಎಂಬುದು ಅಸಾಧ್ಯ. ಒಂದೇ ಸ್ಥಳದಲ್ಲಿ ಏಕಕಾಲದಲ್ಲಿ ಅವುಗಳಿಗೆ 'ಸಹಾವಸ್ಥಾನ' ಇರಲು ಸಾಧ್ಯವಿಲ್ಲದ್ದರಿಂದ ಪ್ರಕಾಶ ತಮಸ್ಸುಗಳಿಗೆ 'ಸಹಾನವಸ್ಥಾನ' (ಒಟ್ಟಿಗೆ ಇಲ್ಲದಿರುವಿಕೆ) ಎಂಬ ವಿರೋಧವಿದೆ.

೩. ಸುರಾಸುರರಿಗೆ ಭಾವಾಭಾವ ವಿರೋಧವಿದೆ. ಸುರತ್ವಾಭಾವವೇ ಅಸುರತ್ವ. ಅಸುರತ್ವಾಭಾವವೇ ಸುರತ್ವ. ಪ್ರಕೃತದಲ್ಲಿ, ಬೆಳಕಿಗೆ ಕತ್ತಲೆಯನ್ನೆಲ್ಲ ಇಲ್ಲದಂತೆ ಮಾಡುವುದು ಸಹಜ ಸ್ವಭಾವವಾಗಿರುವಂತೆ ಶ್ರೀಹರಿಯ ಒಂದೊಂದು ಗುಣವೂ ಎಲ್ಲ ದೋಷಗಳನ್ನು ದೂರ ಮಾಡಬಲ್ಲ ಸಹಜ ಸ್ವಭಾವ ಹೊಂದಿದೆ. ಶ್ರೀಹರಿ ಎಲ್ಲ ಗುಣಗಳ ನೆಲೆಯಾಗಿದ್ದಾನೆ ಎಂದು ಹೇಳಿದಾಗ ಅರ್ಥಾತ್ ಅವನು ಎಲ್ಲ ದೋಷಗಳಿಂದ ರಹಿತನು ಎಂದು ಸಿದ್ಧವಾಗುವುದು. ಏಕೆಂದರೆ, ಗುಣದೋಷಗಳಿಗೂ ಪರಸ್ಪರ ವಿರೋಧವಿರುವುದರಿಂದ, ವಿರುದ್ಧವಾದ ಎರಡು ವಸ್ತುಗಳಲ್ಲಿ ಒಂದರ ಅಸ್ತಿತ್ವ, ಇನ್ನೊಂದರ ಅಭಾವಕ್ಕೆ ದ್ಯೋತಕವಾಗುತ್ತದೆ. 'ಯಾರು ಗುಣಿಯೋ ಅವನು ದೋಷಿಯೂ ಕೂಡ' ಎಂಬ ನಿಯಮವು ಪರಿಮಿತವಾದ ಅಲ್ಪಗುಣವುಳ್ಳವನಿಗೆ ಅನ್ವಯಿಸುತ್ತದೆ. ಅಪರಿಮಿತವಾದ ಅನಂತಗುಣಗಳಿರುವವನಿಗೆ ಅಶೇಷ ದೋಷಗಳ ಅಭಾವವೇ ಸಿದ್ಧಿಸುತ್ತದೆ. **'ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ ಪ್ರಚ್ಯುತೋಽಶೇಷದೋಷೈಃ ಸದಾ ಪೂರ್ತಿತಃ'** 'ಶ್ರೀಹರಿಯು ಸದಾ ಎಲ್ಲ ಗುಣಗಳ ನೆಲೆಯಾದ್ದರಿಂದಲೇ ಎಲ್ಲ ದೋಷಗಳಿಂದ ಸದಾ ರಹಿತನಾಗಿದ್ದಾನೆ' ಎಂಬ

ಶ್ರೀಮದಾಚಾರ್ಯರ ಸುಭಾಷಿತವು ಈ ಅಭಿಪ್ರಾಯವನ್ನೇ ಸ್ಫುಟೀಕರಿಸುತ್ತದೆ. ಇದನ್ನು ತಿಳಿಸುವ ಉದ್ದೇಶದಿಂದಲೇ ಟೀಕಾಕಾರರು ಪ್ರಕಾಶ ತಮಸ್ಸಿನ ಹೋಲಿಕೆ ನೀಡಿರುವರು. ಆದ್ದರಿಂದ ಜಗತ್ತಿನ ಸೃಷ್ಟಿ ಮೊದಲಾದ ಮಹತ್ತರ ಕಾರ್ಯಗಳಲ್ಲಿ ತೊಡಗುವ ಶ್ರೀಹರಿಗೆ ಶ್ರಮ, ಆಯಾಸ ಮುಂತಾದ ದೋಷಗಳು ಎಂದಿಗೂ ಒದಗುವುದಿಲ್ಲ. ಹೀಗೆ **'ನಿಖಿಲಪೂರ್ಣ- ಗುಣೈಕದೇಹಂ, ನಿರ್ದೋಷಂ'** ಎಂಬ ಅನುವ್ಯಾಖ್ಯಾನದ ಎರಡು ಶಬ್ದಗಳಿಗೆ **'ನಿತ್ಯಾಗಣಿತಗುಣಮಾಣಿಕ್ಯಪ್ರಭಾಜಾಲೋಲ್ಲಾಸೋಪಹತಸಕಲಾ-ವದ್ಯತಮಸೆ'** ಎಂಬ ಏಕವಾಕ್ಯದಿಂದ ಟೀಕಾಕಾರರು ವಿಸ್ತೃತವಾದ ಸುಂದರ ವಿವರಣೆ ನೀಡಿ ಮೂಲ ಹಾಗೂ ಟೀಕೆಗಳಿಗಿರುವ ಏಕವಾಕ್ಯತ್ವವನ್ನು (ಏಕಾರ್ಥಪ್ರತಿಪಾದಕತ್ವ) ಸೂಚಿಸಿರುವರು.

## ಶ್ರೀಹರಿಯು ಚರಾಚರ ವಿಶ್ವಕ್ಕೆ ಹುಟ್ಟು, ಸಂರಕ್ಷಣೆ ಹಾಗೂ ನಾಶಗಳನ್ನು ನೀಡುವವನು

ಪರತತ್ವದ ಬಗ್ಗೆ ವಿಚಾರ ಮಾಡಬೇಕು ಎಂದು ತಿಳಿಸಿದ ವೇದವ್ಯಾಸದೇವರು **'ಜನ್ಮಾದ್ಯಸ್ಯ ಯತಃ'** ಎಂಬ ಸೂತ್ರದಿಂದ ಅದರ ಲಕ್ಷಣವನ್ನು ಹೇಳಿರುವರು. **'ಅಸ್ಯ ಉದ್ಭವಾದಿದಂ'** ಎಂಬ ಅನುವ್ಯಾಖ್ಯಾನವು ಅದೇ ವಿಷಯವನ್ನು ಹೇಳಲು ಹೊರಟಿದೆ. **'ಜಗಜ್ಜನ್ಮಸ್ಥೇಮಪ್ರಲಯರಚನಾಶೀಲವಪುಷೇ'** ಎಂಬ ನ್ಯಾಯಸುಧೆಯ ಮಂಗಲ ಪದ್ಯದ ಮೂರನೇ ಪಾದವು ಅದರ ವಿವರಣೆಯನ್ನು ನೀಡುತ್ತಿದೆ.

ಗುಣಪೂರ್ಣವಾದ ಅಪೂರ್ವ ವಸ್ತುವನ್ನು ಶಾಸ್ತ್ರವು ಪ್ರತಿಪಾದಿಸುತ್ತಿದೆ. ಜಗತ್ತಿನಲ್ಲಿ ಯಾರೂ ಕಂಡರಿಯದ, ಕೇಳಿ ಅರಿಯದ ಇಂಥಾ ವಸ್ತುವಿನ ಅಸ್ತಿತ್ವದ ಬಗ್ಗೆಯೇ ಪ್ರಶ್ನೆ ಉದ್ಭವಿಸಿದಾಗ, ಅಸಂಭಾವಿತ ಎಂಬ ಸಂದೇಹ ಬಂದಾಗ, ಅದಕ್ಕೆ ಸಮರ್ಪಕವಾದ ಸಮಾಧಾನವನ್ನು ಇಲ್ಲಿ ನೀಡಲಾಗಿದೆ. ಭಗವಂತನು ನಮ್ಮ ಕಣ್ಣಿಗೆ ಕಾಣದಿದ್ದರೂ ಅವನು ನಿರ್ಮಿಸಿದ ಈ ವಿಶ್ವ ನಮ್ಮ ಕಣ್ಣ ಮುಂದೆ ಇದೆ. ಇಂಥ ಜಗತ್ತನ್ನು ನೋಡಿ, ಇದರ ಕರ್ತೃ ಭಗವಂತನೇ ಆಗಿರಬೇಕು, ಅವನಿಂದಾಗಿ ಈ ಜಗತ್ತು ನಿರ್ಮಾಣಗೊಂಡಿದೆ ಎಂದು ತಿಳಿಯುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಜಗತ್ತಿಗೆ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳನ್ನು ನಿರಪೇಕ್ಷವಾಗಿ ನೀಡುವವನೇ ಭಗವಂತ ಎಂದು ಇಲ್ಲಿ ಪ್ರತಿಪಾದಿಸಲಾಗಿದೆ.

## ಈ ವಿಶ್ವದ ಸೃಷ್ಟಿ ಹೇಗಾಯಿತು?

ಯಾವುದೇ ಒಬ್ಬ ವ್ಯಕ್ತಿ ಒಂದು ಕೆಲಸದಲ್ಲಿ ತೊಡಗಬೇಕಿದ್ದರೆ, ಅವನ ಆ ಪ್ರವೃತ್ತಿಗೆ ಕಾರಣವಾದ ಪ್ರವರ್ತಕಗಳು ನಾಲ್ಕು ಎಂದು ಶಾಸ್ತ್ರ ಪಟ್ಟಿ ಮಾಡಿಕೊಟ್ಟಿದೆ - ೧) ರಾಗ, ೨) ದ್ವೇಷ, ೩) ಸುಖ, ೪) ದುಃಖ.



೧. ನಾವು ಯಾರಲ್ಲಿ ಅನುರಾಗ ಅಥವಾ ಪ್ರೀತಿಯನ್ನು ಹೊಂದಿರುತ್ತೇವೆಯೋ, ಅವರನ್ನು ಸಂತೋಷಪಡಿಸಲೆಂದು ಬಗೆಬಗೆಯ ಕೆಲಸಗಳಲ್ಲಿ ತೊಡಗುತ್ತೇವೆ. ಇದು ರಾಗದಿಂದ ಉಂಟಾಗುವ ಪ್ರವೃತ್ತಿ.

೨. ಯಾರನ್ನು ನಾವು ದ್ವೇಷಿಸುತ್ತೇವೆಯೋ, ಅವರಿಂದ ಉಂಟಾಗಲಿರುವ ತೊಂದರೆಗಳಿಗೆ ಭಯಪಡುತ್ತೇವೆ. ಆ ತೊಂದರೆಗಳಿಂದ ಪಾರಾಗುವ ಕೆಲಸಗಳಲ್ಲಿ ತೊಡಗುತ್ತೇವೆ ಅಥವಾ ದ್ವೇಷಿಯನ್ನೇ ಧ್ವಂಸಗೊಳಿಸುವ ಕಾರ್ಯದಲ್ಲಿ ತೊಡಗುತ್ತೇವೆ. ಇದು ದ್ವೇಷದಿಂದುಂಟಾಗುವ ಪ್ರವೃತ್ತಿ.

೩. ಮನಸ್ಸಿಗೆ ಬಹಳಷ್ಟು ಸಂತೋಷವಾದಾಗ, ನಮ್ಮ ಸಂತೋಷವನ್ನು ಹಿಡಿದು ಇಟ್ಟುಕೊಳ್ಳಲಾರದೆ, ಕುಣಿಯುವುದು, ಕುಪ್ಪಳಿಸುವುದು, ಇತ್ಯಾದಿಗಳಲ್ಲಿ ತೊಡಗುತ್ತೇವೆ. ಇದು ಸುಖದಿಂದುಂಟಾಗುವ ಪ್ರವೃತ್ತಿ.

೪. ಯಾವುದೋ ಕೆಟ್ಟ ಘಟನೆಯಿಂದ ಮನಸ್ಸಿಗೆ ತುಂಬ ದುಃಖವಾದಾಗ, ಅದನ್ನು ಕಳೆದುಕೊಳ್ಳುವುದಕ್ಕಾಗಿ ಬಗೆಬಗೆಯ ಪರಿಹಾರೋಪಾಯಗಳಲ್ಲಿ ತೊಡಗುತ್ತೇವೆ. ಇದು ದುಃಖದಿಂದ ಉಂಟಾಗುವ ಪ್ರವೃತ್ತಿ.

ಹೀಗೆ ಜಗತ್ತಿನ ಎಲ್ಲ ಜನರ ಎಲ್ಲ ಬಗೆಯ ಪ್ರವೃತ್ತಿಗಳನ್ನೂ ನಿಯಂತ್ರಿಸುವ ಪ್ರವರ್ತಕ ಚತುಷ್ಟಯಗಳೆನಿಸಿದ ರಾಗ, ದ್ವೇಷ, ಸುಖ, ದುಃಖಗಳಲ್ಲಿ ಯಾವುದರಿಂದಾಗಿ ಭಗವಂತನು ಈ ಜಗತ್ತನ್ನು ನಿರ್ಮಿಸುವ ಕ್ರಿಯೆಯಲ್ಲಿ ತೊಡಗುವನು ? ಎಂಬ ಪ್ರಶ್ನೆ ಉದ್ಭವಿಸಬಹುದು. ಆದರೆ, ರಾಗ-ದ್ವೇಷಗಳು ಬಂಧಕವಾದ ಸತ್ವರಜಸ್ತಮೋಗುಣ-ಗಳಿಂದ ಹುಟ್ಟುವವುಗಳಾದ್ದರಿಂದ, ತ್ರಿಗುಣಾತೀತನಾಗಿ ನಿರ್ಗುಣ ಎನಿಸಿರುವ ಭಗವಂತನ ಬಳಿಯೂ ಸುಳಿಯಲಾರವು ಈ ರಾಗ-ದ್ವೇಷಗಳು. ಇನ್ನು ದುಃಖವು ಅಜ್ಞಾನದ ಫಲವಾದ್ದರಿಂದ ಸರ್ವಜ್ಞನಾದ ಭಗವಂತನಿಗೆ ದುಃಖದ ಲವಲೇಶಕ್ಕೂ ಅವಕಾಶವೇ ಇಲ್ಲ. ಇರುವ ನಾಲ್ಕು ಪ್ರವರ್ತಕಗಳಲ್ಲಿ ರಾಗ, ದ್ವೇಷ, ದುಃಖ ಎಂಬ ಈ ಮೂರಕ್ಕೂ ಅವನಲ್ಲಿ ಅವಕಾಶವಿಲ್ಲದೆ ಇರುವಾಗ ಉಳಿದ ಏಕೈಕ ಪ್ರವರ್ತಕವೆನಿಸಿದ ಸುಖ ಒಂದೇ ಭಗವಂತನಲ್ಲಿ ನಿತ್ಯ ನೆಲೆಗೊಂಡು ಅವನ ಎಲ್ಲ ಬಗೆಯ ವ್ಯಾಪಾರಗಳು ನಡೆಯುವುದಕ್ಕೆ ಕಾರಣವಾಗುತ್ತದೆ. ಹಾಗೆಯೇ ಈ ಜಗತ್ತಿನ ನಿರ್ಮಾಣಕ್ಕೂ ಭಗವಂತನ ಆನಂದೋದ್ರೇಕವೇ ಕಾರಣವಾಗುತ್ತದೆ. ಉಪನಿಷತ್ತು ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುತ್ತದೆ. **'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್'** ಈ ಆಕಾಶ ಶಬ್ದವಾಚ್ಯನಾದ ಭಗವಂತನು ಆನಂದಪೂರ್ಣ-

ನಲ್ಲದಿದ್ದರೆ ಜಗತ್ತಿನಲ್ಲಿ ಯಾರು ಚೇಷ್ಟೆಗಳನ್ನು ನಡೆಸುತ್ತಿದ್ದರು? ಯಾರು ಬದುಕಿ ಉಳಿಯುತ್ತಿದ್ದರು? ಎಂದು ಕಾಕುಸ್ವರದಿಂದ ಉಪನಿಷತ್ತು ಪ್ರಶ್ನಿಸುತ್ತಿದೆ. ಜೀವನು ಉಸಿರಾಟದ ಕ್ರಿಯೆಯನ್ನು ನಡೆಸದೆ ಬದುಕಲಾರ. ನಿರಂತರವಾದ ಆ ಕ್ರಿಯೆ ಜೀವನ ಹತೋಟಿಯಲ್ಲಿ ಇಲ್ಲ. ಆ ಕ್ರಿಯೆಯನ್ನು ನಿಯಂತ್ರಿಸುವವನು ಭಗವಂತನೇ. ಅವನ ಈ ಪ್ರವೃತ್ತಿಯು ರಾಗ, ದ್ವೇಷ, ದುಃಖಪ್ರೇರಿತವಲ್ಲವಾದ್ದರಿಂದ ಆನಂದೋದ್ರೇಕದಿಂದಲೇ ಭಗವಂತನು ಜೀವರನ್ನು ಉಸಿರಾಡಿಸುವ ಕ್ರಿಯೆಯಲ್ಲಿ ತೊಡಗಿಸಿದ್ದಾನೆ ಎಂದು ಸಿದ್ಧವಾಗುತ್ತದೆ. ಆದ್ದರಿಂದ, ಭಗವಂತನು ಪೂರ್ಣಾನಂದನಲ್ಲದಿದ್ದರೆ ಈ ಜೀವಗಣ ಯಾವ ಚಟುವಟಿಕೆಯನ್ನೂ ನಡೆಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಲಾಗಿದೆ. ಆದ್ದರಿಂದ ಆನಂದೋದ್ರೇಕದಿಂದಲೇ ಭಗವಂತನು ಈ ಜಗತ್ತನ್ನು ಸೃಜಿಸುವನು ಎಂದು ನಿರ್ಣಯವಾಗುತ್ತದೆ.

## ಭಗವಂತನು ನಡೆಸುವ ಜಗತ್‌ಸಂರಕ್ಷಣೆ ಯಾವ ಬಗೆಯದು?

ಮಡಕೆಯನ್ನು ನಿರ್ಮಿಸುವ ಕುಂಬಾರನು ಆ ಮಡಕೆಯನ್ನು ಒಡೆದು ಹಾಕದಿದ್ದರೆ ಅದು ತಾನಾಗಿಯೇ ಸುರಕ್ಷಿತವಾಗಿರುವಂತೆ, ಭಗವಂತನೂ ಕೂಡ ತಾನು ನಿರ್ಮಿಸಿದ ಈ ಚೇತನಾಚೇತನ ಪ್ರಪಂಚವನ್ನು ಸಂಹರಿಸದಿದ್ದರೆ ಸರಿ, ಅದು ತಾನಾಗಿಯೇ ಸುರಕ್ಷಿತವಾಗಿ ಇರಲು ಸಾಧ್ಯ ಇದೆ. ಹೀಗಿರುವಾಗ, ಪ್ರತ್ಯೇಕವಾಗಿ ಈ ಜಗತ್ತಿಗೆ ಭಗವಂತನು ಯಾವ ರೀತಿಯ ರಕ್ಷಣೆಯನ್ನು ನೀಡುವನು? ಎಂದು ಪ್ರಶ್ನೆ ಉದ್ಭವಿಸಬಹುದು. ಆದರೆ, ಬರೀ ಜಗತ್ತನ್ನು ಸೃಷ್ಟಿಸಿದ ಮಾತ್ರಕ್ಕೆ ಆ ಪ್ರಪಂಚದಲ್ಲಿ ಎಲ್ಲ ರೀತಿಯ ಚಟುವಟಿಕೆಗಳು ನಡೆಯಲು ಸಾಧ್ಯವಿಲ್ಲ. ಸ್ವತಂತ್ರವಾಗಿ ಕ್ರಿಯಾಶೀಲವಾಗದ ಈ ಪ್ರಪಂಚದಲ್ಲಿ ಕ್ರಿಯೆಯನ್ನು ಉಂಟುಮಾಡುವುದಕ್ಕಾಗಿ ಭಗವಂತ ಆಯಾಯ ವಸ್ತುಗಳಲ್ಲಿ ಒಂದೊಂದು ರೂಪದಿಂದ ನೆಲೆಸಿ, ಆಯಾಯ ಕ್ರಿಯೆಗಳನ್ನು ನಡೆಸುವನು. ಉಪನಿಷತ್ತು ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುತ್ತದೆ. **'ತತ್ಸೃಷ್ಟ್ವಾ ತದೇವಾನುಪ್ರಾವಿಶತ್, ತದನುಪ್ರವಿಶ್ಯ ಸಚ್ಚ ತ್ಯಚ್ಚಾಭವತ್'** ಎಂಬುದಾಗಿ. ಚೇತನರಲ್ಲಿ ನೆಲೆಸಿ ಅವರ ಬುದ್ಧಿ, ಇಂದ್ರಿಯಗಳನ್ನು ಪ್ರಚೋದಿಸಿ, ಅವರಿಗೆ ಸರಿಯಾದ ರಕ್ಷಣೆಯನ್ನು ನೀಡುವನು. ಜಡವಸ್ತುಗಳಲ್ಲಿಯೂ ಆಯಾಯ ವಸ್ತುಗಳ ಸಹಜ ಶಕ್ತಿಯನ್ನು ಉತ್ತೇಜನಗೊಳಿಸಿ ಅವುಗಳ ಸ್ವಭಾವವನ್ನು ಪ್ರಕಟಗೊಳಿಸುವನು. ಹೀಗೆ ಸಕಲವಸ್ತುಗಳಲ್ಲೂ ಅಂತರ್ಯಾಮಿಯಾಗಿ ನೆಲೆಸಿದ ಭಗವಂತನೇ ಎಲ್ಲ ಕ್ರಿಯೆಗಳನ್ನು ನಡೆಸಿ ಅವುಗಳ ಸಂರಕ್ಷಣೆ ನಡೆಸುವನು.



## ಶ್ರೀಹರಿ ನಡೆಸುವ ಜಗತ್ಸಂಹಾರ ಯಾವ ಬಗೆಯದು?

ಜಗತ್ತಿನ ಈ ಸೃಷ್ಟಿ ಸಂರಕ್ಷಣೆಯ ಜೊತೆ ಇದರ ಸಂಹಾರ ಕ್ರಿಯೆಯನ್ನು ನಡೆಸುವವನೂ ಭಗವಂತನೇ. ತ್ರಿಮೂರ್ತಿಗಳಲ್ಲೊಬ್ಬನಾದ ಶಿವ ಜಗತ್ಸಂಹಾರಕನೆಂದು ಅನೇಕ ಕಡೆಗಳಲ್ಲಿ ಕಂಡುಬಂದರೂ, ತ್ರಿನೇತ್ರನ ಅಂತರ್ಯಾಮಿಯಾಗಿದ್ದು ನರಸಿಂಹರೂಪಿಯಾದ ಹರಿಯೇ ಈ ಸಂಹಾರಕ್ರಿಯೆ ನಡೆಸಿ, ರುದ್ರದೇವರಿಗೆ ಆ ಕೀರ್ತಿಯನ್ನು ಕೊಡುವನು. ಭಗವಂತನು ನಡೆಸುವ ಸಂಹಾರವು, ಕಟುಕನೊಬ್ಬ ಕುರಿಯನ್ನು ಸಂಹರಿಸಿದಂತಲ್ಲ. ಅಂಥ ಸಂಹಾರ ಕರುಣೆಯ ಕಡಲಾದ ಹರಿಗೆ ಗುಣವೂ ಆಗಲಾರದು. ಟೀಕಾಕೃತ್ಪಾದರು ತಿಳಿಸಿದಂತೆ –

"ಸ್ವಾಪಂ ಪ್ರಾಪಯತಿ ಶ್ರಮಾಪಹೃತಯೇ ಕಲ್ಪಾವಸಾನೇ ಚ ಯಃ"

ದಿನನಿತ್ಯ ಕೆಲಸ ಮಾಡಿ ಬಳಲಿ, ಬೆಂಡಾದ ಜೀವರಿಗೆ ಆಯಾಸ ಪರಿಹಾರವಾಗಲೆಂದು ನಿದ್ರೆ ನೀಡುವನು ಭಗವಂತನು. ಇದು ದಿನ ಪ್ರಳಯ. ಹಾಗೆಯೇ ಅನೇಕ ಜನ್ಮಗಳಲ್ಲಿ ಮಾಡಿದ ಅನಂತ ಕರ್ಮಗಳಿಂದ ಆಯಾಸಗೊಂಡ ಜೀವರಿಗೆ ವಿಶ್ರಾಂತಿ ನೀಡಲೆಂದು ಅವರನ್ನು ಶ್ರೀಹರಿ ತನ್ನ ಹೊಟ್ಟೆಯಲ್ಲಿ ಧರಿಸುವನು. ಇದುವೇ ಭಗವಂತನು ನಡೆಸುವ, ಅವನ ಮಹಿಮೆಯ ದ್ಯೋತಕವಾದ ಸಂಹಾರಕ್ರಿಯೆ. ಇಂತಹ ಎಲ್ಲ ಕ್ರಿಯೆಗಳನ್ನೂ ನಡೆಸಿ ಜೀವರ ವ್ಯಕ್ತಿತ್ವವನ್ನು ವಿಕಾಸಗೊಳಿಸುವ ಭಗವಂತನು ಯಾವ ಪ್ರಯೋಜನವನ್ನೂ ಬಯಸದ ಆಪ್ತಕಾಮ. ಆದುದರಿಂದ ಈ ಸೃಷ್ಟ್ಯಾದಿ ವ್ಯಾಪಾರಗಳೆಲ್ಲವೂ ಅವನ ಸ್ವಭಾವವೇ ಆಗಿದೆ. ಈ ಅಂಶವನ್ನು **'ಶೀಲವಪುಷೇ'** ಎಂಬ ಪದದಿಂದ ಶ್ರೀಟೀಕಾಕಾರರು ತಿಳಿಸಿರುವರು.

ಹೀಗೆ ಸೃಷ್ಟ್ಯಾದ್ಯಷ್ಟಕಗಳನ್ನು ಜಗತ್ತಿಗೆ ನೀಡುವ, ಎಲ್ಲ ವೇದಗಳು ಹಾಗೂ ವೇದಾನುಸಾರಿಯಾದ ಸ್ಮೃತಿಗಳಲ್ಲಿ ಮುಖ್ಯಪ್ರತಿಪಾದ್ಯನಾದ ಶ್ರೀಹರಿಗೆ ವಂದನೆಗಳು ಎಂದು ಶ್ರೀಟೀಕಾಕೃತ್ಪಾದರು ಶ್ರೀಮದಾಚಾರ್ಯರ ಅನುವ್ಯಾಖ್ಯಾನದ ಮಂಗಳ ಶ್ಲೋಕದ ಆಂತರ್ಯವನ್ನು ತಮ್ಮ ಸುಧಾಟೀಕೆಯ ಮಂಗಳಶ್ಲೋಕದಿಂದ ಹೃದಯಂಗಮವಾಗಿ ಬಿತ್ತರಿಸಿರುವರು.

❑❑

ಚಂದಾದಾರರಾಗಬಯಸುವವರು ಮಂತ್ರಾಲಯ ಹಾಗೂ
ಬೆಂಗಳೂರು ಕಾರ್ಯಾಲಯಗಳಿಗೆ ಹಣ ಕಳುಹಿಸಿ ಚಂದಾದಾರರಾಗಬಹುದು.
ಪತ್ರಿಕೆ ವಿತರಣೆಯ ಬಗ್ಗೆ ಯಾವುದೇ ದೂರುಗಳಿದ್ದರೂ
ಮಂತ್ರಾಲಯದ ವಿಳಾಸವನ್ನು ಸಂಪರ್ಕಿಸಿ.
ವಿಳಾಸಗಳು ಮುಖಪುಟದಲ್ಲಿವೆ.

॥ಶ್ರೀಹರಿ ಸರ್ವೋತ್ತಮ ॥ ॥ಹರೇ ಶ್ರೀನಿವಾಸ ॥ ॥ವಾಯುಜೀವೋತ್ತಮ ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

॥ ಸರ್ವೇ ಜನಾಃ ಸುಖಿನೋ ಭವಂತು ॥


ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗುತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

**ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ**

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ಪುರೋಹಿತರು**

ನಂ. 149, 'ಕಾನೀನ ನಿಲಯ', 5ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ
ಪದ್ಮನಾಭನಗರ, ಬೆಂಗಳೂರು

**ದೂರವಾಣಿ : 080-65351688, ಮೊಬೈಲ್ : 98444 75429**






# ಋಗ್ವೇದಕಾಲೀನ ದೇವತೆಗಳು

## (ಆಧುನಿಕ ವಿದ್ವಾಂಸರ ದೃಷ್ಟಿಯಲ್ಲಿ)

### ಭಾಗ – ೫ : ಉಷಸ್‌ದೇವತೆ


■ ಡಾ. ಕೊರಟಗೆರೆ ವಾಸುದೇವಾಚಾರ್ಯ

ನಂ. ೧೪, ಶ್ರೀನಿವಾಸ ಕೃಪ, ದೇವನೂರು ರಸ್ತೆ, ತುಮಕೂರು - ೫೭೨ ೧೦೨


ಹಿಂದಿನ ಸಂಚಿಕೆಯಿಂದ.......

**ಮಂತ್ರ ೫ : 'ಯೂಯಂ ಹಿ ದೇವೀ.............................. ಜೀವಮ್ ।'**

ದೇವಿಯರಾದ ಉಷಸ್ಸುಗಳೇ, ನೀವು ನಿಯಮಾನುಸಾರವಾಗಿ ನೊಗಕ್ಕೆ ಕಟ್ಟಲ್ಪಟ್ಟ ಕುದುರೆಗಳುಳ್ಳವರಾಗಿ, ನಿದ್ರಾಳುಗಳನ್ನು, ಚತುಷ್ಪಾದಿ ಜೀವಲೋಕವನ್ನು ಎಚ್ಚರಿಸುತ್ತಾ ಕೇವಲ ಒಂದು ದಿನದಲ್ಲಿ ಜಗತ್ತಿನ ಸುತ್ತಲೂ ಸಂಚರಿಸುವಿರಿ.

**ಮಂತ್ರ ೬ : 'ಕ್ವಸಿದಾಸಾಂ ಕತಮಾ............................. ಸದೃಶೀರಜುರ್ಯಾನಃ ।'**

ಈ ಉಷಸ್ಸುಗಳಲ್ಲಿ ಪ್ರಾಚೀನರು ಯಾರು ? ಅವರ ಸ್ಥಾನ ಯಾವುದು ? ಯಾವ ಕಾರಣದಿಂದ ದೇವತೆಗಳು ಇವರಿಗೆ ಋಜುಗಳ ಕಾರ್ಯವನ್ನು ವಿಧಿಸಿದ್ದಾರೆ ? ಈ ದೇದೀಪ್ಯಮಾನರಾದ ಉಷಸ್ಸುಗಳು ಮಂಗಳಕರರಾಗಿ ಸಂಚರಿಸುತ್ತಿದ್ದಾರೆ ? ಇವರು ಏಕರೂಪವುಳ್ಳವರು. ಜರಾರಹಿತರು. ಆದರೂ ಪರಸ್ಪರ ವ್ಯತ್ಯಾಸಯುತರಾಗಿ ತಿಳಿಯಲ್ಪಡುತ್ತಾರೆ. (ಟಿಪ್ಪಣಿ : 'ಆದಿತ್ಯಾ ಋಭವೋಽಸ್ವಪ್ನಾ.....' - ಅಮರಕೋಶ)

ಮ್ಯಾಗ್ಡೊನಲ್ ವಿದ್ವಾಂಸನ ಪ್ರಕಾರ 'ಋಭುಗಳು' ಋಗ್ವೇದಕಾಲದ ಕೆಲವು ಕೆಳದರ್ಜೆಯ ದೇವತೆಗಳು. ಅವರ ಸಂಖ್ಯೆ ಮೂರು. ಅವರು ಪಂಚಕುಶಲಕರ್ಮ ಮಾಡಿ ಪ್ರಸಿದ್ಧರಾಗಿರುತ್ತಾರೆ. ಪಂಚಕುಶಲಕರ್ಮಗಳ ಪೈಕಿ ಒಂದು ಕುಶಲಕರ್ಮವೆಂದರೆ ''ತ್ವಷ್ಟಾ''ಎಂಬ ಸೂರ್ಯನಿರ್ಮಿತವಾದ ಒಂದೇ ಒಂದು ಚಮಸ (ಯಜ್ಞದಲ್ಲಿನ ಪದಾರ್ಥ)ವನ್ನು ದೇವತೆಗಳ ಹೇಳಿಕೆಯಂತೆ ನಾಲ್ಕು ಭಾಗ ಮಾಡಿದ್ದು.

ಇದರ ಆಧ್ಯಾತ್ಮ ಅರ್ಥ - ಚಂದ್ರನ ಮತ್ತು ಅವನ ನಾಲ್ಕು ದಶೆಗಳ ಅರ್ಥ ಅಥವಾ ಸಂವತ್ಸರ ಮತ್ತು ಅದರ ನಾಲ್ಕು ಪ್ರಮುಖ ಋತುಗಳ ಅರ್ಥವೆಂದು ಸಾಯಣಾಚಾರ್ಯರ ಅಭಿಪ್ರಾಯವನ್ನು ಮ್ಯಾಗ್ಡೊನಲ್ ಒಪ್ಪಿದ್ದಾರೆ.

**ಮಂತ್ರ ೭ : 'ತಾ ಘಾತಾ ಭದ್ರಾ............................. ಸದ್ಯ ಆಪ ।'**

ಆ ಉಷಸ್ಸುಗಳೇ ಪೂರ್ವಕಾಲದಲ್ಲಿ ಶುಭಾತ್ಮಕರೂ, ಸಹಾಯಭಾಸುರರೂ, ನಿಯಮಜಸತ್ಯರೂ ಆಗಿದ್ದರು. ಇವರಿಗಾಗಿ ಶ್ರಮಿಸುವ ಯಜಮಾನನು ಉಕ್ಥಗಳಿಂದ ಪ್ರಶಂಸೆ ಮಾಡುತ್ತಾ, ಗಾಯನ ಮಾಡುತ್ತಾ ಕೂಡಲೇ ಹಣವನ್ನು ಪಡೆಯುತ್ತಾನೆ.

(ಇಲ್ಲಿ ಉಕ್ಥ ಎಂದರೆ ಶಸ್ತ್ರಗಳು. ಅವೇ ಮಂತ್ರಗಳು ಎಂದರ್ಥ. ಅರ್ಥಾತ್ ಸಾಮಗಳಿಂದ ಅಭಿವ್ಯಕ್ತವಾಗಿರದ, ಋಗಕ್ಷರಸಾಧ್ಯವಾದ, ಇಂದ್ರಾದಿಗುಣನಿಷ್ಠಾಭಿಧಾನಕ್ಕೆ ಶಸ್ತ್ರವೆನ್ನುವರು. ಈ ಉಕ್ಥಗಳೇ ಅಂತಹ ಶಸ್ತ್ರಮಂತ್ರಗಳು ಎಂದರ್ಥ = ಸಾಯಣರು ಹಾಗೂ ಮ್ಯಾಗ್ಡೊನಲ್).

**ಮಂತ್ರ ೮ : 'ತಾ ಆಚರಂತಿ............................. ಜಿರಂತೇ ।'**

ಆ ಉಷಸ್ಸುಗಳು ಒಂದೇ ಪ್ರದೇಶದಿಂದ ಸಮಾನವಾಗಿ ಹರಡುತ್ತಾ ಪೂರ್ವ ದಿಕ್ಕಿನಿಂದ ಸಮನಾಗಿ ಆಗಮಿಸುತ್ತಾರೆ. ಋತದ ಸ್ಥಾನದಿಂದ (ನಿಶ್ಚಿತ) ಎಚ್ಚರಗೊಳ್ಳುತ್ತಾ ಕಳಚಿಬಿಟ್ಟ ಗೋ ಸಮೂಹದಂತೆ ಪಟುವಾಗಿದ್ದಾರೆ.

(ಟಿಪ್ಪಣಿ : ಋತಃ ಎಂದರೆ 'ಯಜ್ಞಸ್ಯ ಸದಃ' - ಯಜ್ಞಶಾಲೆ, 'ಗವಾಂ ನ ಸರ್ಗಾಂ' ಎಂಬಲ್ಲಿ 'ಗೂಟದಿಂದ ಕಳಚಿದ ಗೋ ಸಮೂಹದಂತೆ' ಎಂದು ಮ್ಯಾಗ್ಡೊನಲ್, 'ಉದಕಾನಾಂ ಸೃಷ್ಟಯ ಇವ' 'ನೀರುಗಳ ಸೃಷ್ಟಿ ಎಂದರೆ ನೀರು ಎರಚಿದಂತೆ' ಎಂದು ಸಾಯಣಭಾಷ್ಯ).

**ಮಂತ್ರ ೯ : 'ತಾ ಇನ್ವೇ ಇವ ಸಮನಾ............................. ಶುಷಯೋ ರುಚಾನಾಃ ।'**

ಆ ಉಷಸ್ಸುಗಳು ಈಗಲೂ ಸಮನಾಗಿ, ವ್ಯತ್ಯಾಸರಹಿತ ವರ್ಣವುಳ್ಳವುಗಳಾಗಿ, ಕಪ್ಪು ಭಯಂಕರ ಆಕೃತಿಗಳನ್ನು ಮುಚ್ಚುತ್ತಾ ಕಂಗೊಳಿಸುವ ದೇಹದಿಂದ ಹೊಳೆಯುತ್ತಿರುವವುಗಳಾಗಿ ನಿರ್ಮಲ ಹಾಗೂ ದೇದೀಪ್ಯಮಾನವಾಗಿ ಸಂಚರಿಸುತ್ತವೆ.

**ಮಂತ್ರ ೧೦ : 'ರಯಿಂ ದಿವೋ ದುಹಿತರೋ............................. ಪತಯಃ ಸ್ಯಾಮ ।'**

ಸ್ವರ್ಗಪುತ್ರಿಯರಾದ ದೇವಿಯರೇ! ಪ್ರಕಾಶಮಾನರಾದ ತಾವು ನಮಗೆ ಸಂತತಿ ಸಹಿತ ಐಶ್ವರ್ಯವನ್ನು ಅನುಗ್ರಹಿಸಿರಿ. ನಾವು ನಮ್ಮ ಮೃದುವಾದ ಹಾಸಿಗೆಗಳಿಂದ



ನಿಮಗೆ ಅಭಿಮುಖವಾಗಿ ಎಚ್ಚರಗೊಳ್ಳುತ್ತೇವೆ. ನಾವು ಬಲಶಾಲಿ ಪುತ್ರ ಸಮೂಹದ ಒಡೆಯರಾಗೋಣ.

(ರಯಿ ಎಂದರೆ ಐಶ್ವರ್ಯ. ಇದೇ ಮುಂದೆ ರಾಟ್ - ರಾಯೌ - ರಾಯಃ ಎಂದಾಗಿರಬಹುದು).

**ಮಂತ್ರ ೧೧ : 'ತದ್ವೇ ದಿವೋ ದುಹಿತರೋ............................. ಪೃಥಿವೀ ಚ ದೇವೀ ।'**

(ಅದಕ್ಕಾಗಿ ಯಜ್ಞವೇ ಪ್ರಜ್ಞಾಸಕ್ತನಾಗಿರುವ ನಾನು ಸ್ವರ್ಗಪುತ್ರಿಯರೇ! ಭಾಸಮಾನರಾಗಿರುವ ನಿಮ್ಮನ್ನೂ ಬೇಡುತ್ತೇನೆ. ಜನರಲ್ಲಿ ನಾವು ಕೀರ್ತಿವಂತರಾಗಿ ಬಾಳೋಣ. ಆ ಭಾಗ್ಯವನ್ನು ದ್ಯೌ ಹಾಗೂ ಪೃಥಿವೀದೇವಿ ಇವರಿಬ್ಬರೂ ದಯಪಾಲಿಸಲಿ ಎಂದು ಋಷಿಗಳು ಉಷೋದೇವತೆಯನ್ನು ಪ್ರಾರ್ಥಿಸುವ ಈ ಮಂತ್ರಗಳು ನಮಗೂ ಮಾರ್ಗದರ್ಶಕವಾಗಿವೆ).

**(ಮುಗಿದುದು)**

## ವಿದ್ವಾನ್. ಹಯವದನ ಪುರಾಣಿಕರಿಂದ ವ್ಯಾಸತ್ರಯ ಪಾಠ

ಮಂತ್ರಾಲಯದ ಶ್ರೀಗುರುಸಾರ್ವಭೌಮ ವಿದ್ಯಾಪೀಠದಲ್ಲಿ ಅಧ್ಯಾಪಕ ಹುದ್ದೆಯನ್ನಲಂಕರಿಸಿರುವ ಶ್ರೇಷ್ಠ ವಿದ್ವಾಂಸರಾದ ವಿದ್ವಾನ್ ಶ್ರೀ ಹಯವದನ ಪುರಾಣಿಕ್‌ರವರಿಂದ ಮಂತ್ರಾಲಯದ ವಿದ್ಯಾಪೀಠದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಹಾಗೂ ಗೃಹಸ್ಥರಿಗೂ ಶ್ರೀವ್ಯಾಸರಾಜಗುರುಸಾರ್ವಭೌಮರಿಂದ ರಚಿತವಾದ ತರ್ಕತಾಂಡವ, ಚಂದ್ರಿಕಾ, ನ್ಯಾಯಾಮೃತ ಮೂರು ಗ್ರಂಥಗಳ ಪಾಠದ ವ್ಯವಸ್ಥೆಯನ್ನು ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ವ್ಯವಸ್ಥೆಗೊಳಿಸಿರುತ್ತಾರೆ. ಅಭ್ಯಸಿಸುವವರಿಗೆ ಮಂತ್ರಾಲಯದಲ್ಲಿ ಸ್ಥಳಾವಕಾಶ ಹಾಗೂ ಊಟದ ವ್ಯವಸ್ಥೆಯನ್ನು ಶ್ರೀಮಠದಿಂದ ಮಾಡಿಕೊಡಲಾಗುವುದು ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತಿವುಳ್ಳವರು ಪಡೆದುಕೊಳ್ಳಬೇಕೆಂದು ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳಾದ ರಾಜಾ. ಎಸ್. ರಾಜಗೋಪಾಲಾಚಾರ್ಯರು ಉಭಯ ಶ್ರೀಪಾದಂಗಳವರ ಚಾತುರ್ಮಾಸ್ಯ ಸೀಮೋಲ್ಲಂಘನ ಸಮಾರಂಭದ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದರು.

– ಸಂ.

ಲೇಖನಾಂಕ

# ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಃಷಷ್ಠಿಕಲಾವಿದ್ಯೆಗಳು

■ ವಿದ್ವಾನ್. ಕೆ.ಎಲ್. ಪುಷ್ಕರಾಚಾರ್ಯ

ಕ್ಯಾತಸಂದ್ರ, ಹಳೇ ಪೋಸ್ಟ್ ಆಫೀಸ್ ರಸ್ತೆ, ತುಮಕೂರು - ೫೭೨ ೧೦೪

ಹಿಂದಿನ ಸಂಚಿಕೆಯಿಂದ.......

೨೦) **ಅಂತರ್ಧಾನಸಿದ್ಧಿ :** ಇದ್ದಕ್ಕಿದ್ದಂತೆಯೇ ದೇಹವನ್ನು ಅದೃಶ್ಯವನ್ನಾಗಿ ಮಾಡುವಿಕೆಗೆ ಮತ್ತು ವಾಯುತತ್ವವನ್ನು ಸ್ವೀಕರಿಸಿ, ವಾಯುಮಾರ್ಗವಾಗಿ ಸಂಚರಿಸುವಿಕೆಗೂ ಈ ಹೆಸರು.

೨೧) **ಪರಕಾಯಪ್ರವೇಶಸಿದ್ಧಿ :** ಮತ್ತೊಬ್ಬರ ಶರೀರದೊಳಕ್ಕೆ ಪ್ರವೇಶಿಸುವುದು ಹಾಗೂ ಪ್ರಾಣಿಶರೀರದ ಒಳಗೂ ಪ್ರವೇಶಿಸುವಿಕೆಗೆ ಈ ಹೆಸರು. ಮತ್ತೊಬ್ಬರ ಶರೀರದ ರೂಪವನ್ನು ವಿಕಾರಗೊಳಿಸುವ ಕ್ರಿಯೆಗೂ ಈ ಹೆಸರು.

೨೨) **ದ್ರವಸಿದ್ಧಿ :** ಪದಾರ್ಥಗಳನ್ನು ಸ್ಪರ್ಶಮಾತ್ರದಿಂದಲೇ ದ್ರವಮಾಡುವಿಕೆಗೆ ಮತ್ತು ದ್ರವ-ದ್ರವಗಳು (ಅನ್ಯಾಂತರ) ಸೇರಿದರೂ, ಆಯಾ ದ್ರವಗಳ ಕಣಗಳನ್ನು ಪ್ರತ್ಯೇಕ-ವಾಗಿ ಮಾಡುವಿಕೆಗೂ ಈ ಹೆಸರು.

ಉದಾ : ಅಗಸ್ತ್ಯರ ತೀರ್ಥಕಮಂಡಲುವಿದ್ದಂತೆ. **ಯಾವ ತೀರ್ಥದ ಕಣ-ವನ್ನಾದರೂ ಪ್ರತ್ಯೇಕವಾಗಿ ಸ್ವೀಕರಿಸಲು ಕೊಡುತ್ತಿದ್ದರು.**

೨೩) **ಅಂತರ್ಮುಖಸಿದ್ಧಿ :** ತನ್ನ ದೇಹದ ನಾಡಿಗಳಲ್ಲಿ ಬ್ರಹ್ಮಾಂಡದ ವಿಷಯಗಳನ್ನು ಪ್ರತ್ಯೇಕವಾಗಿ ಅನುಭವಿಸುವಿಕೆಗೆ ಮತ್ತು ಈ ವಿಧ ಸ್ಥಿತಿಯನ್ನು ಮತ್ತೊಬ್ಬರಿಗೆ ಆರೋಪಿಸುವುದಕ್ಕೂ ಈ ಹೆಸರು.

೨೪) **ದೂರಸ್ಥಸಿದ್ಧಿ :** ಅತಿದೂರ ಪ್ರದೇಶಗಳ ಮತ್ತು ಲೋಕಾಂತರಗಳಲ್ಲಿಯ ವಿಷಯಗಳನ್ನು ಶಬ್ದತರಂಗಗಳ ಮುಖಾಂತರ ತಿಳಿಯುವಿಕೆಗೆ ಈ ಹೆಸರು.

೨೫) **ಸ್ವ-ಇಚ್ಛಾಮರಣಸಿದ್ಧಿ :** ತನಗೆ ಬೇಕೆನಿಸಿದಾಗ (ಧನಂಜಯನಾಡಿಸಿದ್ಧಿ ಇರುವವರಿಗೆ ಮಾತ್ರ) ಈ ಪಾಂಚಭೌತಿಕದೇಹವನ್ನು ತ್ಯಾಗಮಾಡುವ ಸ್ಥಿತಿಗೆ ಈ ಹೆಸರು. ವರಬಲಾದಿಗಳಿಂದಲೂ ಈ ಸ್ಥಿತಿಯನ್ನು ಹೊಂದಬಹುದು.

೨೬) **ಸ್ಮೃತಿಪಟಲಸಿದ್ಧಿ :** ಆ ಯಾವ ದೇಶದ ಮತ್ತು ಕಾಲದ, ಸದ್ಯದ ಘಟನೆಗಳನ್ನು-ಸನ್ನಿವೇಶಗಳನ್ನು ತನ್ನ ಮನದಲ್ಲಿ ಕಂಡುಕೊಳ್ಳುವಿಕೆಗೆ ಈ ಹೆಸರು.



೨೭) **ಕಿರಣಸಿದ್ಧಿ :** ರಶ್ಮಿಗಳನ್ನು ಆಶ್ರಯಿಸಿ ಬದುಕುವಿಕೆಗೆ ಮತ್ತು ರಶ್ಮಿದ್ವಾರಾ ಎಲ್ಲೆಡೆ ಸಂಚರಿಸುವಿಕೆಗೆ ಹಾಗೂ ರಶ್ಮಿದ್ವಾರಾ ವಿಷಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯುವ ಕ್ರಿಯೆಗೂ ಈ ಹೆಸರು.

೨೮) **ಲೋಹಸಿದ್ಧಿ :** ಚಿನ್ನ, ಬೆಳ್ಳಿ ಮುಂತಾದ ಲೋಹಗಳನ್ನು ವನಸ್ಪತಿ ವಿಶೇಷದಿಂದ ತಯಾರಿಸುವಿಕೆಗೆ ಈ ಹೆಸರು. ಇದಕ್ಕೆ ''ಧಾತುಸಿದ್ಧಿ'' ಎಂದೂ ಕರೆಯುತ್ತಾರೆ.

೨೯) **ಅಶ್ಮರಾಗಸಿದ್ಧಿ :** ಅನೇಕ ವಿಧ ಕಲ್ಲುಗಳಿಂದ (ಶಿಲೆಗಳು) ಪರಸ್ಪರ ಹೊಡೆದು ವಿಭಿನ್ನ ರಾಗೋತ್ಪತ್ತಿಯನ್ನು ಮಾಡುವಿಕೆಗೆ ಈ ಹೆಸರು ಅಥವಾ ನಾದಾತ್ಮಕ ಕಲ್ಲುಗಳ ಪರೀಕ್ಷೆಯ ಸಿದ್ಧಿ ಎಂದೂ ಕರೆಯುವರು.

೩೦) **ಮೃಷ್ಟಾನ್ನಸಿದ್ಧಿ :** ಧಾನ್ಯಾದಿಗಳ ಪಾಕಸಂಸ್ಕಾರವಿಲ್ಲದಲೆಯೇ ತಕ್ಷಣದಲ್ಲಿ ಅದೇ ಧಾನ್ಯಗಳನ್ನು ಸ್ಪರ್ಶಿಸಿ, ಸರ್ವವಿಧ ಭಕ್ಷ-ಭೋಜ್ಯವಸ್ತುಗಳನ್ನಾಗಿ ಪರಿವರ್ತಿಸುವಿಕೆಗೆ ಈ ಹೆಸರು.

೩೧) **ವಿಷಪರಿಹಾರಸಿದ್ಧಿ :** ಸರ್ವವಿಧ ವಿಷಗಳನ್ನು ಹಸ್ತ ಸ್ಪರ್ಶದ ಮಾತ್ರದಿಂದಲೇ ಆ ವಿಷದ ಅಸ್ತಿತ್ವವನ್ನು ತೆಗೆಯುವಿಕೆಗೆ ಮತ್ತು ವಿಷದಿಂದ ಸಾಯದಂತೆ ವಿಷಸ್ತಂಭನ ಮಾಡುವಿಕೆಗೂ ಈ ಹೆಸರು.

೩೨) **ಶಿಲಾಪ್ರವೇಶಸಿದ್ಧಿ :** ಕಲ್ಲು-ಬಂಡೆ, ಬೆಟ್ಟ-ಪರ್ವತ ಇವುಗಳನ್ನು ಪ್ರವೇಶಿಸಿ ಮುಂದಕ್ಕೆ (ಅಡಚಣೆಯಾಗದಂತೆ) ನಡೆದುಹೋಗುವುದಕ್ಕೆ ಈ ಹೆಸರು ಅಥವಾ ತಮ್ಮ ಶರೀರವನ್ನು, ಬೇರೆಯವರ ಶರೀರವನ್ನೂ ಶಿಲೆಯನ್ನಾಗಿ ಮಾಡುವಿಕೆಗೂ ಈ ಹೆಸರು.

೩೩) **ಅನೇಕರೂಪಸಿದ್ಧಿ :** ಯೋಗಶಕ್ತಿಯಿಂದಲೇ (ಸಾಂಶನಲ್ಲದೆ) ಅನೇಕ ರೂಪ-ಗಳನ್ನು ತೆಗೆದುಕೊಳ್ಳುವಿಕೆಗೆ ಮತ್ತು ಬೇರೊಬ್ಬರ ರೂಪದಂತೆ ತನ್ನ ಮುಖ ರೂಪವನ್ನು ತೆಗೆದುಕೊಳ್ಳುವಿಕೆಗೆ ಈ ಹೆಸರು.

೩೪) **ಸ್ತ್ರೀರೂಪಸಿದ್ಧಿ :** ಪುರುಷರು ತಾತ್ಕಾಲಿಕವಾಗಿ ಸ್ತ್ರೀರೂಪವನ್ನು (ದೇಹವನ್ನು) ತೆಗೆದುಕೊಳ್ಳುವಿಕೆಗೆ ಈ ಹೆಸರು.

೩೫) **ಪ್ರಾಣಿರೂಪಸಿದ್ಧಿ :** ಯೋಗಶಕ್ತಿಯಿಂದಲೇ ಪ್ರಾಣಿಗಳಂತೆ ರೂಪಗಳನ್ನು ತಾತ್ಕಾಲಿಕವಾಗಿ ತೆಗೆದುಕೊಳ್ಳುವಿಕೆಗೆ ಮತ್ತು ಆಯಾ ಪ್ರಾಣಿಗಳಂತೆ ಕೇವಲ ಕಾಣಿಸಿಕೊಳ್ಳುವುದಕ್ಕೂ ಈ ಹೆಸರು.

೩೬) **ಸ್ತಂಭನಸಿದ್ಧಿ :** ಯೋಗದಿಂದ ತನ್ನನ್ನು ಯಾರೂ ಅಲ್ಲಾಡಿಸದಂತೆ ಅಂದರೆ ಸ್ತಂಭದಂತೆ ಆಗುವಿಕೆಗೆ ಮತ್ತು ಮತ್ತೊಬ್ಬರನ್ನು ಅಲ್ಲಾಡದಂತೆ (ಕಂಬದಂತೆ) ಮಾಡುವಿಕೆಗೂ ಈ ಹೆಸರು.

೩೭) **ಕಣಸಿದ್ಧಿ :** ಪ್ರತಿಯೊಂದು ಪದಾರ್ಥಗಳ ಕಣಗಳನ್ನು ಬೇರೆ ಬೇರೆ ಮಾಡುವಿಕೆಗೆ ಈ ಹೆಸರು. ಹಾಗೆಯೇ ಯಾವುದರ ಸಹಾಯವಿಲ್ಲದಲೆ ಬೇರೆ ಬೇರೆ ಪದಾರ್ಥಗಳ ಅಥವಾ ಲೋಹಗಳ ಕಣಗಳನ್ನು ಹಸ್ತಸ್ಪರ್ಶಮಾತ್ರದಿಂದಲೇ ಸೇರಿಸಿ ಅಂದರೆ ಮೇಳವಿಸಿ ಮಿಶ್ರಪದಾರ್ಥ ಅಥವಾ ಲೋಹಗಳನ್ನಾಗಿ ನಿರ್ಮಾಣ ಮಾಡುವಿಕೆಗೂ ಈ ಹೆಸರು. ಉದಾ :- ಚಿನ್ನ, ಬೆಳ್ಳಿ, ಹಿತ್ತಾಳೆಯ ಮಿಶ್ರ, ತಾಮ್ರ, ಚಿನ್ನ, ಪಾದರಸ ಮತ್ತು ಅಭ್ರಕ ಇತ್ಯಾದಿಗಳು. ಹೀಗೆಯೇ ಹಸ್ತಸ್ಪರ್ಶ ಮಾತ್ರದಿಂದಲೇ ನೂತನ ಪ್ರತಿಮಾದಿಗಳ ನಿರ್ಮಾಣ ಮಾಡುವರು.

೩೮) **ಲಂಬಕುಬ್ಜಸಿದ್ಧಿ :** ಎತ್ತರ ವಸ್ತುಗಳನ್ನು ತಗ್ಗುಮಾಡುವಿಕೆ ಮತ್ತು ಕುಬ್ಜವಸ್ತು-ಗಳನ್ನು ಲಂಬಮಾಡುವಿಕೆಗೆ ಈ ಹೆಸರು. ಹಾಗೆಯೇ ತಾವೂ ಕೂಡ ತಮ್ಮ ಶರೀರವನ್ನು ಲಂಬಕುಬ್ಜವನ್ನಾಗಿ ಪರಿವರ್ತಿಸಿಕೊಳ್ಳುವವರಾಗುತ್ತಾರೆ. ಮತ್ತೊಬ್ಬರ ದೇಹಾದಿಗಳನ್ನೂ ಮಾಡುವ ಸಾಮರ್ಥ್ಯಕ್ಕೂ ಈ ಹೆಸರು.

೩೯) **ವಾಯು, ಜಲ, ಅಗ್ನಿ, ಶೀತಸ್ತಂಭನಸಿದ್ಧಿ :** ವಾಯುವಿಲ್ಲದಲೆ, ಜಲವಿಲ್ಲದಲೆ ಬಹುದಿನ ಬದುಕುವಿಕೆ ಮತ್ತು ವಾಯ ಬೀಸದಂತೆ, ಜಲ ಹರಿಯದಂತೆ, ಅಗ್ನಿ ಉರಿಯದಂತೆ ಮಾಡುವುದು. ಶೀತೋಷ್ಣವಾಗದಂತೆ ಮಾಡಿಕೊಳ್ಳುವಿಕೆಗೂ ಈ ಹೆಸರು. ಒಟ್ಟಿನಲ್ಲಿ ಇವುಗಳ ''ಸ್ತಂಭನಸಿದ್ಧಿ'' ಎಂದು ತಿಳಿಯಬೇಕು. ಇದಕ್ಕೆ''ಯೋಗಾಗ್ನಿಸಿದ್ಧಿ'' ಎಂದೂ ಕರೆಯುವರು.

೪೦) **ನಕ್ಷತ್ರಸಿದ್ಧಿ :** ಯಾವ ನಕ್ಷತ್ರಗಳನ್ನು ಬೇರಾದರೂ ಕಾಂತಿಯುಕ್ತ ಸಣ್ಣ ರೂಪವಾಗಿ ತನ್ನೆಡೆಗೆ ಬರಿಸಿಕೊಳ್ಳುವಿಕೆಗೆ ಹಾಗೂ ತಾನೂ ನಕ್ಷತ್ರರೂಪದಲ್ಲಿ ಕಾಣಿಸಿಕೊಳ್ಳುವಿಕೆಗೆ ಈ ಹೆಸರು.

೪೧) **ರೋಗಸ್ತಂಭನಸಿದ್ಧಿ :** ಯಾವ ರೋಗಾದಿ ಉಪದ್ರವಗಳನ್ನು ತಾತ್ಕಾಲಿಕವಾಗಿ ಅಂಟಿಸಿಕೊಳ್ಳದಿರುವಿಕೆ, ರೋಗಾದಿಗಳನ್ನು ಬೇರೊಂದು ವಸ್ತುಗಳಿಗೆ ವರ್ಗಾಯಿಸುವುದು, ಅಂಟಿದ ರೋಗವನ್ನು ಹರಡದಂತೆ (ಉಲ್ಬಣವಾಗದಂತೆ) ಅಂದರೆ ಸಾಧನೆಗೆ ಬಾಧಕವಾಗದಂತೆ ತಡೆಯುವಿಕೆ. ಈ ವಿಧಗಳಿಗೆ ಈ ಹೆಸರು. ಉದಾ : ಭೀಷ್ಮರಿಗೆ ಸರ್ವವಿಧ ಯಾತನಾಮಯ ಸ್ಥಿತಿಯ ಶರೀರವಾದರೂ, ಲೆಕ್ಕಿಸದೇ ಶಾಂತಿಪರ್ವ ರೂಪ ಧರ್ಮೋಪದೇಶವನ್ನು ಧರ್ಮರಾಯನಿಗೆ ಮಾಡುವ ಪ್ರಸಂಗ.

(ಈ ಎಲ್ಲಾ ೬೪ ಕಲೆಗಳು ಶ್ರೀರಾಯರ ಪರಮಗುರುಗಳಾದ ಶ್ರೀವಿಜಯೀಂದ್ರರ ವಶದಲ್ಲಿ ಇದ್ದವು).

**(ಮುಂದುವರೆಯುವುದು)**






ನಿಮ್ಮ ತರ್ಕಕ್ಕಾಗಿ

ಸಮಾಜದಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಆಗುತ್ತಿರುವ ಬದಲಾವಣೆಗಳನ್ನು ಕುರಿತ ಲೇಖನಗಳ ಬಗೆಗಿನ ಒಂದು ಇಣುಕುನೋಟ ಇದಾಗಿದೆ. ಇದನ್ನು ವಿಮರ್ಶಿಸುವ, ಪರಾಂಬರಿಸುವ ಯುಕ್ತಿ ನಿಮ್ಮದಾಗಿದೆ. ಈ ಲೇಖನವು ದಿನಪತ್ರಿಕೆಗಳಲ್ಲಿ, ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳ ಆಧಾರಿತವಾಗಿದೆ.

– ಸಂ.

## ಕ್ಷೀರವ ಕ್ಷಯರೋಗಿ ಹಳಿದರೇನು?

ಇತ್ತೀಚೆಗೆ ಮರ್ಯಾದಾಪುರುಷೋತ್ತಮನಾದ ಶ್ರೀರಾಮಚಂದ್ರದೇವರ ಬಗ್ಗೆ ಮತ್ತು ವಿಶೇಷವಾಗಿ 'ಶ್ರೀರಾಮಸೇತು' ಬಗ್ಗೆ ಹಲವಾರು **"ಅಭಿನವ ರಾವಣರು"** ತಮ್ಮ ಮಹಾನುಡಿಮುತ್ತುಗಳನ್ನು ಉದುರಿಸಿ ತಮ್ಮ ಯೋಗ್ಯತೆ, ಸಂಸ್ಕೃತಿಯ ಪರಿಚಯ ಮಾಡಿಕೊಟ್ಟಿರುತ್ತಾರೆ. ರಾಮ ಯಾವ ಕಾಲೇಜಿನಲ್ಲಿ ಇಂಜಿನೀಯರಿಂಗ್ ಮಾಡಿದ? ಎಂದು ಕೇಳಿದ್ದಾರೆ.

ಅವರು ಬಲು funny ಪ್ರಶ್ನೆಗಳನ್ನು ಜಗದೇಕಕಾರಣನಾದ ಶ್ರೀರಾಮನ ಬಗ್ಗೆ ಕೇಳಿದ್ದಾರೆ. ಅವರಿಗೆ ನನ್ನ ಕೆಲವು ಉತ್ತರರೂಪದ ಪ್ರಶ್ನೆ ಅಥವಾ ಪ್ರಶ್ನೆರೂಪದ ಉತ್ತರ. ಸಾಧ್ಯವಿದ್ದರೆ, ವಿವೇಕದಿಂದ (ಇದ್ದರೆ, ಇದ್ದಷ್ಟು) ಉತ್ತರಿಸಲಿ.

೧. ಈಗ ಒಂದು ಕಾಗೆ ಹೊರಗೆ ಹಾರಿತಲ್ಲ ಅದೆಲ್ಲಿ aviation ಕಲಿತಿದ್ದು?

೨. ಜೇನುನೊಣಕ್ಕೆ ಯಾರು civil engineering ಕಲಿಸಿದ್ದು? (Thank God, ಅದು ಇಂಜೀನಿರಿಂಗ್ ಓದಿಲ್ಲ).

೩. ಸಣ್ಣವರಿದ್ದಾಗ ಮಂಡಿ ಒಡೆದು ಗಾಯ ಮಾಡಿಕೊಂಡು ರಕ್ತ ಸುರಿಸುತ್ತಾ ಮನೆಗೆ ಬಂದಾಗ ಎಲ್ಲರ ಅಜ್ಜಿ ಅರಿಶಿಣವನ್ನು ಹಚ್ಚಿದ್ದರಲ್ಲ ಅವರೆಲ್ಲಿ M.B.B.S ಓದಿದ್ದು?

೪. ಸಿಸೇರಿಯನ್ ಆಪರೇಷನ್ ಮನುಷ್ಯರಿಗೆ ಬಿಟ್ಟು ಮತ್ಯಾವ ಪ್ರಾಣಿಗೆ? ಅವೆಲ್ಲ ಯಾವ Maternityಗೆ ಹೋಗೋದು?

೫. Mid-wife ಗಳು (ಸೂಲಗಿತ್ತಿಯರು) ಅದೆಲ್ಲಿ ಗೈನಕಾಲಜಿ ಓದಿದ್ದು ?

೬. ಇಂಜಿನೀಯರುಗಳು ತಯಾರಿಸಿದ ರಸ್ತೆಗಳು ಒಂದೇ ಮಳೆಗೆ ಅದೆಷ್ಟು ತರಕೆದ್ದು ಹೋಗಿಲ್ಲ ?

ಸಾಧ್ಯವಾದರೆ ಕೆಳಗಿನವುಗಳಿಗೆ ವೈಜ್ಞಾನಿಕ ಕಾರಣ ನೀಡಿ.

೧. ನೀವು ಕುಡಿಯುವ ಕಾಫಿ ? ಎದ್ದ ಕೂಡಲೇ ಮುರಿಯುವ ಮೈ ?

೨. ನೀವು ಪ್ರೀತಿಸುವ ಹೆಂಡತಿ / ಗಂಡ ? (ಬರೀ 'ದೇಹ'ಕ್ಕಾಗಿ ಎಂದು ಉತ್ತರವಿದ್ದರೆ ಅವನ / ಳ ಎದುರಿಗೆ ಹೇಳಿ ನೋಡೋಣ).

೩. ಮೇಲಿನ ಪ್ರಶ್ನೆಗೆ ಉತ್ತರಿಸಲು ಸಂಕೋಚವಾಯಿತೇ ? ಅದಕ್ಕೆ ವೈಜ್ಞಾನಿಕ ಕಾರಣ ?

ಇನ್ನು ರಾಮನನ್ನೇ ನಂಬದ ನಿಮಗೆ ದೇವರು ಏನು ಕುಡಿದರೆ ನಿಮಗೆ ಏನು ? ನಿಮಗೆ ಶ್ರೀರಾಮದೇವರೇಕೆ, ಸೀತೆ ಏಕೆ, 'ಶ್ರೀಮಾನ್', 'ಹ್ರೀಮಂತ' ಎಂದು ತಾನು ಅನ್ನಿಸಿಕೊಂಡು ತೋರಿದ 'ಹ್ರೀ' (ನಾಚಿಕೆ, ಲಜ್ಜೆ) ಏಕೆ ? ಅವನ ಭಾವಚಿತ್ರ ಏಕೆ ? ಅದಕ್ಕೇಕೆ ಚಪ್ಪಲಿ ಹಾರ ? (ತಮಿಳುನಾಡಿನಲ್ಲಿ ಶ್ರೀರಾಮನ ಚಿತ್ರಕ್ಕೆ ಹೀಗೆ ಅವಮರ್ಯಾದೆ ಮಾಡಲಾಗಿತ್ತು) (ವಸ್ತುತಃ ಯಾವ ಧರ್ಮದ ಉನ್ನತರಿಗೂ ಅಪಮಾನ ಬೇಡ. ಇದನ್ನು ತಿಳಿಸಿದ್ದು ಶ್ರೀರಾಮದೇವರು!) **ನೀವು ಇಲ್ಲ ಎಂದು ನಂಬುವ ಶ್ರೀರಾಮದೇವರ ಬಗ್ಗೆ ಅದೇಕೆ ಸಲ್ಲದ ದ್ವೇಷ?** ಅದೇಕೆ 'ಅನಾರ್ಯ' ವರ್ತನೆ ? ಶ್ರೀರಾಮದೇವರ ಬಗ್ಗೆ ನೀವು ಕೊಟ್ಟ comments ಹೇಗೆ ಅಂದರೆ ಹೊಲಸು ಮನಸ್ಸಿನ ಕೊಳಕು ದುರ್ನಾತ.

ಮೂರ್ತಿಭಂಜಕ ಸಂಸ್ಕೃತಿಯ, ಔರಂಗಜೇಬ ಸಂಸ್ಕೃತಿಯ, ಸಂತತಿಯ ವರ್ತನೆ, ಬೆಂಬಲ ಇನ್ನಾದರೂ ಸಾಕುಮಾಡಿ.

**'ಕೋನ್ವಸ್ಮಿನ್ ಸಾಂಪ್ರತೇ ಕಶ್ಚ ವೀರ್ಯವಾನ್'**

(ಜಗತ್ತಿನ ಸದ್ಗುಣಗಳು ಎಷ್ಟು? ಯಾವುವು? ಅವೆಲ್ಲ ಒಬ್ಬನಲ್ಲಿ ಇವೆಯೋ? ಇದ್ದಲ್ಲಿ ಯಾರು ?)

ಎನ್ನುವ ಪ್ರಶ್ನೆಗೆ ಉತ್ತರವಾಗಿ ಹೊರಟಿದ್ದು 'ಶ್ರೀಮದ್ರಾಮಾಯಣ'. ಕುಮಾರವ್ಯಾಸನ ಭಾರತದ 'ವಿದುರ ನೀತಿ'ಯಲ್ಲಿ ವಿದುರ ಹೇಳುತ್ತಾನೆ. 'ಧರಣಿಯೊಳು ಕಡುಮೂರ್ಖರಿವರಿಬ್ಬರು ಕಣಾ' (ಒಬ್ಬ ರಾವಣ, ಮತ್ತೊಬ್ಬ ಸುಯೋಧನ) ಕಾರಣ ನಾರಿಯರಿಗೆ ಮನಸೋಲು.

ಇಂತಹ ಸನಾತನದ, ಸತ್ಯವಾದ ಸೇತುವಿಗೆ ಹಲವಾರು ಪ್ರಯೋಜನಗಳು ಇವೆ. ಹಾಗಾಗಿ ಇರಬೇಕು ಎಂದು ವಾದಿಸುವವರಿಗೆ ಒಂದೇ ಕೊನೆಯ ಪ್ರಶ್ನೆ. ಪ್ರಯೋಜನ-ವಿದ್ದರೆ ಮಾತ್ರ ಭೂಮಿಯ ಮೇಲೆ ಇರಬೇಕಾ ? (then what about politicians).



ಕೆಲ ಭಗವದ್ವೇಷಿ, ನಿತ್ಯವಾದ, ಭವ್ಯವಾದ ಆರ್ಯ ಸಂಸ್ಕೃತಿಯ ದ್ವೇಷಿಗಳನ್ನು ಕಂಡೇ ಕುಮಾರವ್ಯಾಸ ತನ್ನ ಭಾರತದ ಆದಿಪರ್ವದಲ್ಲಿ ಹೇಳಿದ್ದಾನೆ - **ಹೆಳವ ವಾರಣಾಸಿಯ ನಿಂದಿಸಿದರೇನು, ಕಳ್ಳ ಚಂದ್ರನನ್ನು, ಕ್ಷಯರೋಗಿ ಕ್ಷೀರವನ್ನು ನಿಂದಿಸಿದರೇನು?** ಎಂದು.

ರಾಮಸೇತು ಕೇವಲ VHP, BJP ಅಥವಾ RSS ಗೆ ಮಾತ್ರ ಸಂಬಂಧ-ಪಟ್ಟದ್ದಲ್ಲ. ಆದರೆ ಈ ನಾಡಿನ, ರಾಷ್ಟ್ರದ ಪ್ರತಿಯೊಬ್ಬರದು. (ಹಿಂದು, ಮುಸ್ಲಿಂರಾದಿಯಾಗಿ ಎಲ್ಲರದ್ದೂ).

ಡಾ. ಮುಮ್ತಾಜ್ ಆಲಿ ಖಾನ್ ರ ಅನಿಸಿಕೆಯಂತೆ ಬಹಳ ಹಿಂದೆ ಅವರ ಧರ್ಮದ ಪ್ರವಾದಿಯೊಬ್ಬರನ್ನು ಸೇತುವಿನ ಮಾರ್ಗವಾಗಿ ಲಂಕಾಕ್ಕೆ ಕಳುಹಿಸಲಾಗಿತ್ತಂತೆ. ಶ್ರೀರಾಮಸೇತು ಅವರಿಗೂ ಸಹಾಯಮಾಡಿದೆ.

ಇನ್ನು, ಶ್ರೀರಾಮಸೇತುವನ್ನು, ಅದರ ಹೆಸರನ್ನು Adams Bridge ಎಂದು ವಿರೂಪಗೊಳಿಸುವುದರಲ್ಲಿ ವಾರ್ತಾಚಾನೆಲ್‌ಗಳೇನೂ ಹಿಂದೆ ಬಿದ್ದಿಲ್ಲ. ಇಂಗ್ಲೀಷರೇನೋ ದುರಾಗ್ರಹಪೀಡಿತರು ಸರಿ. ಆದರೆ ಭಾರತೀಯರು 'ಎನ್ನಿಸಿಕೊಂಡ' ವಾರ್ತಾವಾಹಿನಿ-ಯವರಿಗೇನು ಧಾಡಿ. ಚೊಕ್ಕವಾಗಿ 'ಶ್ರೀರಾಮಸೇತು' ಎನ್ನಲು.

ಇನ್ನಾದರೂ ಸಮಾಜದ ಮುಖ್ಯವಾಹಿನಿ, ಎಲ್ಲ ಪ್ರಜ್ಞಾವಂತರು, ನಾಡಿನ ಹಲವಾರು ವಿದ್ವಾಂಸರು, 'ವಿದ್ಯಾವಾಚಸ್ಪತಿ'ಗಳು (ತಮ್ಮ ಗುರುಗಳಿಂದಲೇ ಎಲ್ಲರೆದುರು 'ನಡೆದಾಡುವ ವಿಶ್ವಕೋಶ' (walking encyclopedia) ಎನ್ನಿಸಿಕೊಂಡವರು ಬಹಳ ಹಿಂದೆ ೧೯೮೫ ರ ಸುಮಾರು) ಮಠಾಧೀಶರು ಬಹಿರಂಗವಾಗಿ ಶ್ರೀರಾಮಸೇತುವಿನ ಬಗ್ಗೆ, ನಮ್ಮ ಸಂಸ್ಕೃತಿಯ - ಧರ್ಮದ ರಕ್ಷಣೆಗೆ ಪಂಢರಪುರದ ಪಾಂಡುರಂಗನಂತೆ ಕಟೀಬದ್ಧರಾಗಿ ನಿಲ್ಲಬೇಕು. ತಮ್ಮ ಆಪ್ತರನ್ನು ನಿಲ್ಲಿಸಬೇಕು. ಕಾರಣ, Its now or never.

■ **ಜಯತೀರ್ಥ ಎಸ್.**
ನಂ. ೧೧೯೬, 'ಪ್ರಜಧಾಮ', ೭ನೇ ಮುಖ್ಯರಸ್ತೆ, 'ಡಿ' ಬ್ಲಾಕ್,
ಎ.ಇ.ಸಿ.ಎಸ್. ಲೇಔಟ್, ಕುಂದಲಹಳ್ಳಿ ಗೇಟ್, ಬೆಂಗಳೂರು
ದೂರವಾಣಿ : ೦೮೦-೨೮೪೯೫೦೨೫

**ಸೂಚನೆ :** ಈ ಕೆಳಕಂಡ ಸಂಖ್ಯೆಯು ಮಾಸಪತ್ರಿಕೆ ವಿತರಣಾ ವಿಭಾಗದವರದ್ದಾಗಿದೆ. ಇವರು ಸೇವಾದೃಷ್ಟಿಯಿಂದ ಮಂತ್ರಾಲಯದಲ್ಲಿನ ವಸತಿ, ಸೇವೆಗಳ ಬಗ್ಗೆ ಮಾಹಿತಿ-ಯನ್ನು ನೀಡುತ್ತಿದ್ದರು. ಕೆಲವರು ಈ ನಂಬರಿಗೆ ಕರೆಮಾಡಿ ವಸತಿ ವ್ಯವಸ್ಥೆಗಳ ಬಗ್ಗೆ ತೀವ್ರವಾಗಿ ನಿಂದಿಸುತ್ತಿರುವ ಕಾರಣ, ಇನ್ನು ಮುಂದೆ ಈ ನಂಬರಿನಿಂದ ಕೇವಲ ಮಾಸಪತ್ರಿಕೆಯ ಬಗ್ಗೆ ಮಾತ್ರ ಮಾಹಿತಿಯನ್ನು ನೀಡುತ್ತಾರೆ. ಇತರ ವಿವರಗಳಿಗೆ ಈ ನಂಬರಿನಿಂದ ಮಾಹಿತಿಗಳನ್ನು ಇನ್ನು ಮುಂದೆ ಕೊಡಲಾಗುವುದಿಲ್ಲ. **099857-03033**

# ಯೋಗದರ್ಶನ

■ ವಿದ್ವಾನ್. ಟಿ.ವಿ. ಸತ್ಯನಾರಾಯಣ

ಹಿರಿಯ ಸಹಾಯಕ ಸಂಶೋಧಕ - ಶ್ರೇಣಿ ೧, ಪ್ರಾಚ್ಯ ವಿದ್ಯಾ ಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು - ೫೭೦ ೦೦೫

ಆರು ದರ್ಶನಗಳಲ್ಲಿ ಯೋಗದರ್ಶನವೂ ಒಂದು. ಪ್ರಕೃತ ಲೇಖಕರು ಯೋಗದರ್ಶನಾನುಸಾರ ಅದರ ತತ್ತ್ವವನ್ನು ವಿವರಿಸಿದ್ದಾರೆ - ಸಂ.

ಹಿಂದಿನ ಸಂಚಿಕೆಯಿಂದ.......

**ಧ್ಯೇಯ** - ಎಂದರೆ ಧ್ಯಾನಕ್ಕೆ ಯೋಗ್ಯವಾದ ಸ್ವರೂಪವು, ಸಂಶಯ - ವಿಪರ್ಯಯಗಳಿಲ್ಲದೆ ಚೆನ್ನಾಗಿ ಯಾವ ವೃತ್ತಿಯಿಂದ ತಿಳಿಯಲ್ಪಡುವುದೋ ಅದು ''ಸಂಪ್ರಜ್ಞಾತ''ವಾಗುತ್ತದೆ. ಇದರಲ್ಲಿ ಧ್ಯೇಯವಸ್ತುವನ್ನು ಬಿಟ್ಟು, ಬೇರೆಯದಾದ ಎಲ್ಲ ವೃತ್ತಿಗಳ ನಿರೋಧವು ಇರುವುದು.

**ಸಂಪ್ರಜ್ಞಾತ ಸಮಾಧಿ**ಯು **ಸವಿತರ್ಕ, ಸವಿಚಾರ, ಸಾನಂದ, ಸಾಸ್ಮಿತ** ಎಂದು ನಾಲ್ಕು ವಿಧವಾಗಿವೆ.

**ಸವಿತರ್ಕ :** ಚಿತ್ತದಲ್ಲಿ ಕಲ್ಪಿಸಿಕೊಳ್ಳಬೇಕಾದ ವಿಷಯವನ್ನು, ಬೇರೆ ವಿಷಯ-ಗಳನ್ನು ಹೊರಹಾಕುವುದರ ಮೂಲಕ ಮತ್ತೆ ಮತ್ತೆ ಆಲೋಚಿಸುವುದು ''ಸವಿತರ್ಕ'', ಕಲ್ಪಿಸಿಕೊಳ್ಳಬೇಕಾದ ವಿಷಯಕ್ಕೆ **ಭಾವ್ಯ** ಎಂದು ಹೆಸರು. ಭಾವ್ಯವು ೧) **ಈಶ್ವರ** ಮತ್ತು ೨) **ಇಪ್ಪತ್ತೈದು ತತ್ತ್ವ**ಗಳೆಂದು ಎರಡು ವಿಧ ತತ್ತ್ವಗಳು. ೧) **ಜಡ** ಮತ್ತು ೨) **ಅಜಡ** ಎಂಬುವುದಾಗಿ ಎರಡು ವಿಧವಾಗಿವೆ. ಜಡವಾದುದು ೨೪ ತತ್ತ್ವಗಳು. ಅಜಡ ಎಂದರೆ ಪುರುಷ (ಚೈತನ್ಯದಾಯಕ ಪರಮಾತ್ಮನೆಂಬ ಹೆಸರಿನ ಶಕ್ತಿ). ಪುರುಷನು ಸದಾ ಕ್ರಿಯಾಶೀಲ. ಇವುಗಳಲ್ಲಿ ಸ್ಥೂಲವಾದ ಪಂಚಮಹಾಭೂತಗಳು ಮತ್ತು ಇಂದ್ರಿಯಗಳನ್ನು ವಿಷಯವನ್ನಾಗಿ ಮಾಡಿಕೊಂಡು, ಇದು ಮೊದಲು, ಇದು ಆಮೇಲೆ ಎಂಬ ಅನುಸಂಧಾನದಿಂದ, ಇದು ಶಬ್ದ, ಇದು ಅರ್ಥ ಎಂಬ ಉಲ್ಲೇಖ-ದಿಂದ ಯಾವಾಗ ಭಾವನಾವು ಬರುವುದೋ ಅದು **ಸವಿತರ್ಕಸಮಾಧಿ.** ಮೊದಲು ಮತ್ತು ಕೊನೆ ಎನ್ನುವ ಅನುಸಂಧಾನವಿಲ್ಲದೆ ಇದು ಶಬ್ದ, ಇದು ಅರ್ಥ ಎಂಬ ಉಲ್ಲೇಖವಿಲ್ಲದೆ ಬರುವ ಭಾವನಾವು **ನಿರ್ವಿತರ್ಕಸಮಾಧಿ** ಎನಿಸುತ್ತದೆ.

**ಸವಿಚಾರ :** ಅಷ್ಟು ಮಾತ್ರ ಅಂತಃಕರಣ (ಶರೀರದೊಳಗಿನ ಇಂದ್ರಿಯ) ಎಂಬ ಸೂಕ್ಷ್ಮವಿಷಯವನ್ನು ಅವಲಂಬಿಸಿ, ಅದರ ದೇಶ-ಕಾಲ ಮತ್ತು ಧರ್ಮಗಳ ಸಹಿತ



ಉಂಟಾಗುವ ಭಾವನಾಕ್ಕೆ ''ಸವಿಚಾರ'' ಎಂದು ಹೆಸರು. ದೇಶ-ಕಾಲ-ಧರ್ಮಗಳ ಜ್ಞಾನವು ತೋರದೆ ಕೇವಲ ಧರ್ಮವುಳ್ಳ ವ್ಯಕ್ತಿ ಮಾತ್ರ ಗೋಚರವಾಗುವ ಭಾವನಾ ನಿರ್ವಿಚಾರ.

**ಸಾನಂದ :** ರಜೋಗುಣ - ತಮೋಗುಣಗಳು ಬಹುವಾಗಿವೆ, ಸ್ವಲ್ಪವಾಗಿವೆ ಎಂಬುದಾಗಿ ಅಂತಃಕರಣದ ಸತ್ತ್ವವು ಹೊರಗೆ ಯಾವಾಗ ಗೋಚರವಾಗುವುದೋ ಆಗ ಚಿತ್‌ಶಕ್ತಿಯಲ್ಲಿನ ಸುಖ ಪ್ರಕಾಶಮಯವಾದ ಸತ್ವವು ಭಾವ್ಯವಾಗಿ ಅದರ ಉದ್ರೇಕದಿಂದ ಸಾನಂದ ಸಮಾಧಿಯು ಉಂಟಾಗುತ್ತದೆ.

**ಸಾಸ್ಮಿತ :** ಅನಂತರ ರಜೋಗುಣ ಮತ್ತು ರಜೋಗುಣಗಳಿಂದ ಸ್ವಲ್ಪವೂ ಸಂಬಂಧವನ್ನು ಹೊಂದದ ಶುದ್ಧಸತ್ವವನ್ನು ಆಶ್ರಯಿಸಿ ಯಾವ ಭಾವನೆಯು ಉಂಟಾಗುವುದೋ ಅದರಲ್ಲಿ ಸ್ವೀಕೃತವಾದ ಸತ್ವಕ್ಕೆ ತಿರೋಧಾನ (ಮರೆಯಾಗುವಿಕೆ) ಉಂಟಾದರೆ ಆಗ ಚಿತ್‌ಶಕ್ತಿಯು ಉದ್ರೇಕಗೊಳ್ಳುತ್ತದೆ. ಆ ಸಮಯದಲ್ಲಿ ಕೇವಲ ಸತ್ತಾ ಮಾತ್ರ ಉಳಿದಿರುತ್ತದೆ. ಇದು ಸಾಸ್ಮಿತ ಸಮಾಧಿ.

ಈ ನಾಲ್ಕು ಬಗೆಯ ಸಂಪ್ರಜ್ಞಾತ ಸಮಾಧಿಗಳಲ್ಲಿ ಮುಂದು ಮುಂದಿನ ಸಮಾಧಿಯನ್ನು ಪಡೆಯುವಾಗ ಹಿಂದು ಹಿಂದಿನ ಸಮಾಧಿಯ ತ್ಯಾಗವಿರುತ್ತದೆ.

**ಅಸಂಪ್ರಜ್ಞಾತ ಸಮಾಧಿಯು ೧) ಭವಪ್ರತ್ಯಯ, ೨) ಉಪಾಯಪ್ರತ್ಯಯ** ಎಂದು ಎರಡು ವಿಧವಾಗಿದೆ.

**ಭವಪ್ರತ್ಯಯ :** ಯಾರಿಗೆ ವಿವೇಕ ಖ್ಯಾತಿ ಇಲ್ಲವೋ ಅವರಿಗೆ ಆಗುವ ಚಿತ್ತಲಯವೇ ಭವಪ್ರತ್ಯಯ. ಯಾರು ಮೋಕ್ಷವನ್ನು ಬಯಸುವರೋ ಅವರಿಗೆ ಈ ಭವಪ್ರತ್ಯಯವು ಬೇಡವಾದುದು. ಈ ಚಿತ್ತದ ಲಯವುಳ್ಳವನು ಮತ್ತೆ ಸಂಸಾರದಲ್ಲಿ ಬೀಳುವನು. ಈ ಲಯವು ನಿದ್ರೆಗೆ ಸಮಾನ.

**ಉಪಾಯಪ್ರತ್ಯಯ :** ಮೋಕ್ಷಾಪೇಕ್ಷಿಗಳಿಗೆ ಇದು ಉಪಾದೇಯವಾದುದು. ಪುರುಷನಲ್ಲಿರುವ ಸಾತ್ವಿಕವಾದ ಶ್ರದ್ಧೆಯಿಂದ ವೀರ್ಯ ಮತ್ತು ಉತ್ಸಾಹಗಳು ಹುಟ್ಟುವುವು. ಅದರಿಂದ ಯಮನಿಮಗಳು ಉಂಟಾಗುತ್ತವೆ. ನಂತರ ಇವುಗಳ ಮೂಲಕ ಧ್ಯಾನವು ಉಂಟಾಗುತ್ತದೆ. ಕಡೆಗೆ ಧ್ಯಾನದಿಂದ ಸಮಾಧಿಯು ಆಗುತ್ತದೆ. ಅನಂತರ ಶ್ರೇಷ್ಠ ವೈರಾಗ್ಯವು ಬಂದು ಅದರ ಮೂಲಕ ಅಸಂಪ್ರಜ್ಞಾತ ಸಮಾಧಿಯು ಹುಟ್ಟುವುದು. ಮೋಕ್ಷವನ್ನು ಬಯಸುವ ಯೋಗಿಗಳಿಗೆ ಆಗುವ ಸಾಧನವೇ ಅಸಂಪ್ರಜ್ಞಾತ ಸಮಾಧಿ. ಈ ಸಮಾಧಿಯಿಂದ ಯೋಗಿಗೆ ಮೋಕ್ಷವು ದೊರಕುತ್ತದೆ.

ಎಲ್ಲ ರೀತಿಯ ದುಃಖಗಳು, ಕ್ಲೇಶಗಳೂ ದೂರವಾಗಿ ಮನಸ್ಸು ಸಂತೋಷಗೊಂಡು, ಅನಿರ್ವಚನೀಯವಾದ ಆತ್ಮಶಕ್ತಿಯ ದರ್ಶನದಿಂದ ಶಾಂತಸ್ಥಿತಿಯುಂಟಾಗುವುದು. ಇದೇ ಮೋಕ್ಷ.

ಒಟ್ಟಾರೆ ಎಂಟು ವಿಧವಾದ ಯೋಗಾಂಗಗಳಲ್ಲಿ ಹಿಂದು ಹಿಂದಿನ ಅಂಗವು ಮುಂದು ಮುಂದಿನದಕ್ಕೆ ಅವಶ್ಯಕವಾಗಿ ಬೇಕಾಗುತ್ತದೆ. ಈ ಯೋಗಾಂಗಗಳನ್ನು ಬಿಟ್ಟು ಯೋಗ ಸಾಧ್ಯವಲ್ಲ ಮತ್ತು ಅನರ್ಥಕರ. ವೈರಾಗ್ಯ ಮತ್ತು ಅಭ್ಯಾಸದಿಂದ ಕ್ರಮಪ್ರಕಾರವಾಗಿ ಆಚರಿಸಲ್ಪಟ್ಟ ಯೋಗವು ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪಡೆಯುವುದಕ್ಕೆ ಸಾಧನವಾಗುವುದು.

## ಕೈವಲ್ಯ

ಯೋಗಕ್ಕೆ ಕೈವಲ್ಯವೇ ಪರಮಪುರುಷಾರ್ಥ. ಅಂದರೆ ಮುಖ್ಯ ಪ್ರಯೋಜನ. ಕೈವಲ್ಯವನ್ನೇ ಮೋಕ್ಷವೆಂದು ಯೋಗಿಗಳು ಕರೆಯುತ್ತಾರೆ. ಪುರುಷನಿಗೆ ಭೋಗ (ಸುಖಾದಿಗಳು) ಅಪವರ್ಗ(ಮೋಕ್ಷ)ಗಳನ್ನು ಸಾಧಿಸಿ ಕೃತಕೃತ್ಯವಾದ ಬುದ್ಧಿ ಮುಂತಾದ ಗುಣಗಳು, ಪರಮವೈರಾಗ್ಯ ಮುಂತಾದ ಸಂಸ್ಕಾರಗಳು ಮನಸ್ಸಿನಲ್ಲಿ ಸೇರಿಹೋಗಿ, ಮನಸ್ಸು ಅಹಂಕಾರದಲ್ಲಿ ಲೀನವಾಗಿ, ಅಹಂಕಾರವು (ಅಸ್ಮಿತಾ) ಮಹತ್ತಿನಲ್ಲಿ ಲಯ ಹೊಂದಿ, ಆ ಮಹತ್ತತ್ತ್ವವು ಪ್ರಧಾನದಲ್ಲಿ ಲಯ ಹೊಂದಿದರೆ ಆಗ ಪ್ರಧಾನಕ್ಕೆ ಕೈವಲ್ಯವುಂಟಾಗಿ ಅದು ಪುರುಷನಲ್ಲಿ ಉಪಚರಿತವಾಗುವುದು. ಆ ಸಂದರ್ಭದಲ್ಲಿ ಚಿತಿಶಕ್ತಿಯು ಅಂದರೆ ಚಿತ್‌ಸ್ವಭಾವನಾದ (ಜ್ಞಾನಸ್ವರೂಪನಾದ) ಪುರುಷನು ಕೇವಲ ತನ್ನ ಸಹಜ ಸ್ವರೂಪಮಾತ್ರದಿಂದ ಇರುವನು. ಆಗ ಅವನಿಗೆ ಬುದ್ಧಿ ಮೊದಲಾದ ವಸ್ತುಗಳಿಂದ ಅತ್ಯಂತ ವಿಯೋಗವಿರುತ್ತದೆ. ಪುರುಷನು ಯಾವಾಗಲೂ ಶುದ್ಧನು, ಸಂಗರಹಿತನು ಮತ್ತು ಪ್ರಕಾಶನೂ ಆಗಿರುತ್ತಾನೆ. ಇದೇ ಇವನ ನಿಜಸ್ವರೂಪ. ಈ ಸ್ವರೂಪವು ಸ್ಥಿರವಾಗಿ ಪ್ರಕಾಶಿತವಾಗಿ ನಿಂತರೆ ಅದೇ ಕೈವಲ್ಯ ಎನಿಸುತ್ತದೆ.

ನಾನು ಮಾಡುತ್ತೇನೆ, ನಾನು ಅನುಭವಿಸುತ್ತೇನೆ. ಮೊದಲಾದುವು ಆತ್ಮನಲ್ಲಿ ಪಾರಮಾರ್ಥಿಕವಾದವುಗಳು. ಅಂದರೆ ನಿಜವಲ್ಲ. ಸಂಸಾರಬಂಧನವಿದ್ದಾಗ ಇವು ನಿಜವಾಗಿರುತ್ತವೆ. ವಿವೇಕ ಖ್ಯಾತಿಯಿಂದ ಇವು ನಾಶವಾದಾಗ ಶುದ್ಧ-ಬುದ್ಧ-ಸ್ವಯಂ ಪ್ರಕಾಶಕನಾದ ಆತ್ಮನು (ಈಶ್ವರನು) ಸ್ಥಿರನಾಗಿ ಗೋಚರನಾಗುತ್ತಾನೆ. ಇದೇ ಮೋಕ್ಷದೆಶೆ. ಈ ದೆಶೆಯಲ್ಲಿ ಆತ್ಮನು ಜ್ಞಾನರೂಪನಾಗಿರುತ್ತಾನೆ. ಇದನ್ನೇ **ಕೈವಲ್ಯ**-



ವೆಂದು ಯೋಗಿಗಳು ಕರೆದಿದ್ದಾರೆ. **"ಆತ್ಮನು (ಈಶ್ವರನು) ಸಂಸಾರದಲ್ಲಿಯೂ ಮತ್ತು ಮೋಕ್ಷದಲ್ಲಿಯೂ ಒಂದೇ ರೂಪದಲ್ಲಿರುವನು ಎಂಬುದೇ ಯೋಗದರ್ಶನದ ಸಿದ್ಧಾಂತದ ವಿಶೇಷತೆ".**

ಒಟ್ಟಾರೆ ಶುದ್ಧವಾದ, ಪ್ರಕಾಶರೂಪವಾದ, ಸರ್ವಚೈತನ್ಯದಾಯಕವಾದ, ಜ್ಞಾನರೂಪವಾದ ಈಶ್ವರನ ಸ್ವರೂಪವನ್ನು ನಮಗೆ ತಿಳಿಸಿಕೊಟ್ಟು, ನಮ್ಮನ್ನು ಶಾಂತರನ್ನಾಗಿ, ಸದಾ ಸಂತೋಷಿಗರನ್ನಾಗಿ ಮಾಡುವುದೇ ಯೋಗವಾಗಿದೆ. **ಆಸನಾದಿಗಳು ಶರೀರದ ದೃಢತೆ, ಸುಸ್ಥಿತಿಯನ್ನು ಉಂಟುಮಾಡಿದರೆ, ಪ್ರಾಣಾಯಾಮವು ಮನಸ್ಸನ್ನು ಹದಗೊಳಿಸುತ್ತದೆ. ಇತರ ಅಂಗಗಳು ಈಶ್ವರನನ್ನು ಅರಿಯುವ ದಾರಿಯನ್ನು ತೋರಿಸಿಕೊಡುತ್ತವೆ.** ಈಶ್ವರನ ಸಂದರ್ಶನದಿಂದ ಅಪರಿಮಿತವಾದ, ಅನಿರ್ವಚನೀಯವಾದ ಆನಂದವುಂಟಾಗುತ್ತದೆ. ಆಗ ನಮಗೆ ಬೇರೇನೂ ಬೇಡವಾಗುತ್ತವೆ. ಭಗವಂತನಲ್ಲೇ ನಮ್ಮ ಚಿತ್ತವು ನಿರಂತರವಾಗಿ ಲೀನವಾಗುತ್ತದೆ. ಹೀಗೆ ನಾವು ಭಗವಂತನಲ್ಲಿ ಲೀನವಾಗುವ ಸ್ಥಿತಿಯನ್ನು ನಮಗೆ ಯೋಗದರ್ಶನವು ತಿಳಿಸಿಕೊಡುತ್ತದೆ.

(ಮುಗಿದುದು)


## ಅರ್ಚಕರು – ಪುರೋಹಿತರು – ಅಡಿಗೆಯವರು ಬೇಕಾಗಿದ್ದಾರೆ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನವಾದ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಶಾಖಾಮಠಗಳಲ್ಲಿ ಕಾರ್ಯನಿರ್ವಹಿಸಲು ಅರ್ಚಕರು - ಪುರೋಹಿತರು ಬೇಕಾಗಿದ್ದಾರೆ. **ಮುಖ್ಯವಾಗಿ ಶ್ರೀರಾಯರ ಮಠದ ಸಂಪ್ರದಾಯ ಪ್ರಕಾರವಾಗಿ** ರಾಯರ ಬೃಂದಾವನಗಳ ಪೂಜೆಯನ್ನು ಬಲ್ಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹಾಗೆಯೇ ಪೌರೋಹಿತ್ಯ ಅಧ್ಯಯನವನ್ನು ಮಾಡಿರುವ ವಿದ್ಯಾರ್ಥಿಗಳಾಗಲೀ ಅಥವಾ ನುರಿತ ಪುರೋಹಿತರಾಗಲೀ, ಪುರೋಹಿತರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅನುಭವಿ ಅಡಿಗೆಯವರು ಅಡಿಗೆಯವರ ಹುದ್ದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಉತ್ತಮ ಸಂಬಳ, ಊಟದ ವ್ಯವಸ್ಥೆ, ವಾಸಕ್ಕೆ ಯೋಗ್ಯವಾದ ವಸತಿ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುವುದು. ಮೇಲ್ಕಂಡ ಹುದ್ದೆಗಳಿಗೆ ಅಭ್ಯರ್ಥಿಗಳ ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು.

ಸಂಪರ್ಕಿಸಬೇಕಾದ ವಿಳಾಸ

**ವ್ಯವಸ್ಥಾಪಕರು**

ಸಿಬ್ಬಂದಿ ತರಬೇತಿ ಮತ್ತು ನೇಮಕಾತಿ ವಿಭಾಗ

ನಂ. 16, ಸೀತಾಪತಿ ಅಗ್ರಹಾರ, ಹೊಸ ತರಗುಪೇಟೆ, ಬೆಂಗಳೂರು - 560 002

ದೂರವಾಣಿ : 9342651516, 080-26700471

ಲೇಖನಾಂಕ

# ಆಡಮ್ ಸೇತುವೆ ಅಲ್ಲ, ರಾಮಸೇತುವೆ!

■ **ವಿದ್ವಾನ್. ಡಿ. ಮಧುಸೂದನ ಆಚಾರ್ಯ** ಹಾಗೂ **ಡಾ. ಜೋಷಿ**

ಪ್ರಾಚ್ಯ ವಿದ್ಯಾ ಸಂಶೋಧನಾಲಯ (ಓ.ಆರ್.ಐ.), ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಕ**ಳೆದ ಹಲವು ಮಾಹೆಗಳ ಹಿಂದೆ ಅಮೇರಿಕದ ಬಾಹ್ಯಾಕಾಶ ಸಂಸ್ಥೆಯು (ನಾಸಾ) ಭೂಮಂಡಲದ ಛಾಯಾಗ್ರಹಣದ ಸಮಯದಲ್ಲಿ ಭಾರತದ ದಕ್ಷಿಣ ತುದಿಯಿಂದ ಶ್ರೀಲಂಕಾದವರೆಗೆ ಸುಮಾರು ೧೮ ಮೈಲಿ ಉದ್ದದ ಸೇತುವೆಯನ್ನು ಸಮುದ್ರದಲ್ಲಿ ಕಂಡುಹಿಡಿಯಿತು. ಈ ಸೇತುವೆಗೆ 'ಆಡಮ್ ಸೇತುವೆ' ಎಂದು ನಾಮಕರಣ ಮಾಡಲಾಯಿತು.

ಪುರಾಣಗಳಲ್ಲಿ ಹಾಗೂ ಅರ್ಘ್ಯ ಗ್ರಂಥಗಳಲ್ಲಿರುವ ಉಲ್ಲೇಖಗಳ ಪ್ರಕಾರ **ತ್ರೇತಾಯುಗದಲ್ಲಿ ಶ್ರೀರಾಮಚಂದ್ರದೇವರು ವಾನರಸೇನೆಯ ಸಹಾಯದಿಂದ ಭಾರತದ ರಾಮೇಶ್ವರದಿಂದ ಶ್ರೀಲಂಕೆಯವರೆಗೆ ಸೇತುವೆ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ.** ಈ ಸೇತುಬಂಧನ ಹಿಂದೂಗಳ ಪ್ರಕಾರ ಅತ್ಯಂತ ಆದರಣೀಯ ಹಾಗೂ ಪೂಜ್ಯ ಘಟನೆಯಾಗಿದೆ.

'ಆಡಮ್ ಸೇತುವೆ'ಯ ಬಗ್ಗೆ ಪ್ರಾಕೃತ ಪ್ರಾಚ್ಯ ಸಂಶೋಧನಾಕಾರರ ಅನಿಸಿಕೆಯೇನೆಂದರೆ **ಈ ಸೇತುವೆ ಮಾನವ ನಿರ್ಮಿತವಾದದ್ದು ಹಾಗೂ ೧,೭೦,೦೦೦ ವರ್ಷಗಳಷ್ಟು ಪುರಾತನವಾದ್ದು.** ಇದಲ್ಲದೇ ಶ್ರೀಲಂಕಾದಲ್ಲಿನ ಪ್ರಥಮ ಮಾನವರ ಕುರುಹುಗಳು ಸಹ ಇದೇ ಸಮಯದೊಡನೆ ತಾಳೆ ಹೊಂದುತ್ತವೆ. ಅಂಕಿ-ಅಂಶಗಳ ಪ್ರಕಾರ ತ್ರೇತಾಯುಗವು ಸುಮಾರು ಇದೇ ಕಾಲದ್ದೆಂದು ಕಂಡುಬರುತ್ತದೆ.

**ಆದ್ದರಿಂದ 'ಆಡಮ್ ಸೇತುವೆ'ಯೇ 'ರಾಮಸೇತುವೆ' ಎಂಬುವುದರಲ್ಲಿ ಸಂದೇಹವೇ ಇಲ್ಲ.** ತ್ರೇತಾಯುಗದಲ್ಲಿ ವಾನರಸೇನೆಯಲ್ಲಿದ್ದ ನಳ ಎಂಬ ಶಿಲ್ಪಿಯು ಶ್ರೀರಾಮಚಂದ್ರನ ಅನುಗ್ರಹ ಹಾಗೂ ಅನುಮತಿ ಪಡೆದು ವಾನರ ಸೈನ್ಯದ ಸಹಾಯದಿಂದ ಈ ಸೇತುವೆ ನಿರ್ಮಿಸಿದ್ದು ಎಂಬ ಉಲ್ಲೇಖ ಪುರಾಣಗಳಲ್ಲಿ ಕಂಡುಬರುತ್ತದೆ. ಎರಡು ಲಕ್ಷ ವರುಷಗಳ ಸಮುದ್ರ ಕೊರೆತವನ್ನು ತಡೆದು ಭದ್ರವಾಗಿರುವ ಈ ಸೇತುವೆಯ ನಿರ್ಮಾಣವನ್ನು ನೋಡಿದರೆ ನಮ್ಮ ಬುದ್ಧಿವಂತ ಹಿರಿಯ ಶಿಲ್ಪಿಗಳು ಶ್ರೀರಾಮದೇವರಿಂದ ಅನುಗ್ರಹಿತರಾಗಿದ್ದು ತಿಳಿಯುತ್ತದೆ. ಈ ಸೇತುವೆಯ ಮೂಲಕ ಶ್ರೀರಾಮದೇವರು, ಪ್ರಾಣದೇವರು ಹಾಗೂ ವಾನರ ಸೇನೆಯು



ಭಾರತಖಂಡದಿಂದ ಲಂಕೆಗೆ ಹೋಗಿ ಬಂದದ್ದು ಗೊತ್ತಾಗುತ್ತದೆ. ಅವರ ಚರಣ ಕಮಲಗಳ ಸ್ಪರ್ಶದಿಂದ ಪುನೀತವಾದ ಈ ಸೇತುವೆಯನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಈ ಸೇತುವೆಯ ಬಗ್ಗೆ ೭೫೦ ವರ್ಷಗಳ ಹಿಂದೆ ಶ್ರೀಮಧ್ವಾಚಾರ್ಯಭಗವತ್ಪಾದರು ತಮ್ಮ ಮಹಾಭಾರತತಾತ್ಪರ್ಯನಿರ್ಣಯವೆಂಬ ಗ್ರಂಥದಲ್ಲಿ ಈ ರೀತಿ ಹೇಳಿರುತ್ತಾರೆ –

**"ಬಧ್ವೋದಧೌ ರಘುಪತಿರ್ವಿವಿಧಾದ್ರಿಕೂಟೈಃ ।**
**ಸೇತುಂ ಕಪೀಂದ್ರಕರಕಂಪಿತಭೂರುಹಾಂಗೈಃ ॥"**

(ಮ.ಭಾ.ತಾ.ನಿ. ಅ. 8 - 15.)

ಇದರ ಅರ್ಥವೇನೆಂದರೆ, ಸುಗ್ರೀವಾದಿ ಕಪಿಶ್ರೇಷ್ಠರು ನಾನಾವಿಧದ ಪರ್ವತ ಶೃಂಗಗಳನ್ನು ಕಿತ್ತು ಅದನ್ನು ಸಮುದ್ರದಲ್ಲಿ ಹಾಕಿ ಸೇತುವೆಯನ್ನು ಕಟ್ಟಿದ್ದಾರೆ ಎಂದು.

ಇದಲ್ಲದೆ ಶ್ರೀರಾಘವೇಂದ್ರಗುರುಸಾರ್ವಭೌಮರು ಸುಮಾರು ೩೫೦ ವರ್ಷಗಳ ಹಿಂದೆ ತಮ್ಮ ಮಹಾಭಾರತ ಭಾವಸಂಗ್ರಹ ಗ್ರಂಥದಲ್ಲಿ ಈ ರೀತಿ ಹೇಳಿದ್ದಾರೆ –

**"ಸಿಂಧುಂ ದಕ್ಷಿಣಮಾಗತೋ........................ ।**
**ಬಧ್ವಾ ಸೇತುಮಯಾವಾಪ್ಯ......................... ॥"**

- ಮಹಾಭಾರತ ಭಾವಸಂಗ್ರಹ

ಇದರ ತಾತ್ಪರ್ಯವೇನೆಂದರೆ, ಶ್ರೀರಾಮಚಂದ್ರದೇವರು ದಕ್ಷಿಣ ಸಮುದ್ರಕ್ಕೆ ಬಂದು (ರಾಮೇಶ್ವರ) ಸಮುದ್ರರಾಜನ ಪ್ರಾರ್ಥನೆಯನ್ನು ಸ್ವೀಕರಿಸಿ ಕಪಿಗಳಿಂದ ಸೇತುನಿರ್ಮಾಣ ಮಾಡಿಸಿದರು.

ಇದಲ್ಲದೆ ಶ್ರೀಗುರುಸಾರ್ವಭೌಮರು ತಮ್ಮ ಇನ್ನೊಂದು ಗ್ರಂಥ ಶ್ರೀರಾಮಚಾರಿತ್ರ್ಯ ಮಂಜರಿಯಲ್ಲಿ ಈ ರೀತಿ ಹೇಳಿದ್ದಾರೆ –

**"ನೀತ್ವಾ ಮಾಸಾನ್ ಕಪೀಶಾನಿಹ ದಶಹರಿತಃ ಪ್ರೇಶ್ಯ ಸೀತಾಂ ವಿಚಿಂತ್ಯ**
**ಯಾತಃಶ್ರೀಮದ್ಹನೂಮದ್ಗಿರಮಥಸಮನುಶ್ರುತ್ಯಗಚ್ಛನ್ ಕಪೀಂದ್ರೈಃ ।**
**ಸುಗ್ರೀವಾದ್ಯೈರಸಂಖ್ಯೈರ್ದಶಮುಖಸಹಜಂ ಮಾನಯನ್ನಬ್ಧಿವಾಚಾ**
**ದೈತ್ಯಘ್ನಃ ಸೇತುಕಾರೀ ರಿಪುಪುರರುದವೇದ್ವಾನರೈರ್ವೈರಿಘಾತೀ ॥"**

- ಶ್ರೀರಾಮಚಾರಿತ್ರ್ಯಮಂಜರೀ - 7ನೇ ಶ್ಲೋಕ.

ಇದರ ತಾತ್ಪರ್ಯವೇನೆಂದರೆ, ದಕ್ಷಿಣಕ್ಕೆ ರಾಮಚಂದ್ರದೇವರು ಹೊರಟು ಸಮುದ್ರಕ್ಕೆ ಸೇತುವೆಯನ್ನು ನಿರ್ಮಾಣಮಾಡಿ ಲಂಕೆಗೆ ಹೋಗಿ........

ಈ ರೀತಿಯಾಗಿ ಅನೇಕ ಪ್ರಾಚೀನ ಗ್ರಂಥಗಳಲ್ಲೂ ಹಾಗೂ ಅನೇಕ ಋಷಿ-ಮುನಿ ಹಾಗೂ ಜ್ಞಾನಿಗಳಿಂದ ಇದರ ಉಲ್ಲೇಖವು ಅನೇಕ ಶತಮಾನಗಳ ಹಿಂದೆಯೇ ಆಗಿದೆ.

ಇಂತಹ ಐತಿಹ್ಯವುಳ್ಳ ಈ ಮಹತ್ವದ ರಾಮಸೇತುವೆಯನ್ನು ಯಾವುದೇ ತರಹದ ಯೋಚನೆ ಮಾಡದೇ ನಮ್ಮ ಭಾರತ ಘನ ಸರ್ಕಾರ ಇದನ್ನು ಮಧ್ಯದಲ್ಲಿ ಕತ್ತರಿಸಿ ಹಡಗು ಹೋಗಲು ದಾರಿಮಾಡಿಕೊಡುವ ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ವಿಷಯ ಪ್ರತೀ ಭಾರತೀಯರ ಮನಸ್ಸನ್ನು ಘಾಸಿ ಮಾಡುವಂತಹದ್ದಾಗಿದೆ. ಭಾರತೀಯರಾದ ನಾವು ಎಚ್ಚೆತ್ತು ಇದರ ವಿರುದ್ಧ ಹೋರಾಡಲು ಸನ್ನದ್ಧರಾಗ-ಬೇಕಾಗಿದೆ. **ವಿಶ್ವದಲ್ಲೇ ೪೫೦೦ ವರ್ಷಗಳ ಹಿಂದಿರುವ ಈಜಿಪ್ಟ್‌ನ ಪಿರಾಮಿಡ್, ೨೩೦೦ ವರ್ಷಗಳ ಹಳೆಯ ಚೈನಾದ ಮಹಾನ್ ಗೋಡೆಯನ್ನು ವಿಶ್ವದ ಅದ್ಭುತ-ಗಳೆಂದು ಪರಿಗಣಿಸಿ ಕಾಪಾಡುತ್ತಿರುವಾಗ ಎರಡು ಲಕ್ಷ ವರ್ಷಗಳಷ್ಟು ಹಳೆಯದಾದ ರಾಮಸೇತುವೆಯನ್ನು ಏಕೆ ಕಾಪಾಡಬಾರದು?** ಆದ ಕಾರಣ ಹಿಂದೂಗಳೆಲ್ಲಾ ಒಗ್ಗಟ್ಟಾಗಿ ಮನುಕುಲದ ಐತಿಹ್ಯದಂತಿರುವ ರಾಮಸೇತುವೆಯನ್ನು ಕಾಪಾಡಲು ಮುನ್ನುಗ್ಗಬೇಕಾಗಿದೆ. ಶ್ರೀರಾಮ ಚರಣಸ್ಪರ್ಶದಿಂದ ಪುನೀತವಾಗಿರುವ ಸೇತುವೆ-ಯನ್ನು ನಾವೆಲ್ಲ ಉಳಿಸಿಕೊಳ್ಳೋಣ.

❑❑


॥ ಶ್ರೀಮಲಕ್ಷ್ಮೀ ಅನಂತ ಪ್ರಸನ್ನ ॥

ಶ್ರೀಅನಂತಪದ್ಮನಾಭ ಟೂರ್ಸ್ ಅಂಡ್ ಟ್ರಾವೆಲ್ಸ್

ದಕ್ಷಿಣ ಭಾರತ (ಉಡುಪಿ ಪರ್ಯಾಯ, ರಾಮೇಶ್ವರ) ಯಾತ್ರೆ

ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ತೀರ್ಥಪ್ರಸಾದ, ಮಡಿಯಿಂದ ಊಟದ ವ್ಯವಸ್ಥೆ ಇದೆ.

**ದಿನಾಂಕ 30-12-2007 ರಿಂದ 19-01-2008 ರವರೆಗೆ**

**ಯಾತ್ರಾಸ್ಥಳಗಳು :**

ಶ್ರೀಶೈಲ, ಅಹೋಬಿಲ, ತಿರುಪತಿ, ಕಂಚಿ, ತಿರಕೋಯಿಲೂರು, ಚಿದಂಬರಂ, ಕುಂಭಕೋಣ, ತಂಜಾವೂರು, ದೊಡ್ಡ ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೆಂದ್ರ, ತಿರುವನಂತಪುರಂ, ಗುರುವಾಯೂರು, ಉಡುಪಿ, ಪಾಜುಕಾಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 6,900/- ಮಾತ್ರ** (3 × 2 ಲಕ್ಸುರಿ ಬಸ್ಸಿನಲ್ಲಿ)

**ಸೀಟು ಒಂದಕ್ಕೆ ರೂ. 9,600/- ಮಾತ್ರ** (2 × 2 ಪುಷ್‌ಬ್ಯಾಕ್ ಡಿಲಕ್ಸ್ ಬಸ್ಸಿನಲ್ಲಿ)

ಈ ಸುದೀರ್ಘ ಪ್ರವಾಸದಲ್ಲಿ ಚಹಾ / ಕಾಫಿ, ಉಪಹಾರ, ವಸತಿ ಸೌಕರ್ಯ, ಬಸ್ಸು ಛಾರ್ಜುಗಳು ಸೇರಿವೆ.

ಇಂದೇ ಸೀಟು ಒಂದಕ್ಕೆ ರೂ. 3000/- ಕಳುಹಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.

**ಸೂಚನೆ** : 23-09-2007 ರಿಂದ 23 ದಿನಗಳ ಉತ್ತರ ಭಾರತ (ಬದರಿ) ಯಾತ್ರಾ ಪವಿತ್ರ ಪಕ್ಷಮಾಸದಲ್ಲಿ ಹೈದ್ರಾಬಾದ್ ರೈಲ್ವೆ ನಿಲ್ದಾಣದಿಂದ ಹೊರಡಲಿದೆ ಮತ್ತು ನವೆಂಬರ್ 2007 ರಲ್ಲಿ 12 ದಿನಗಳ ನೇಪಾಳ, ಕಾಶಿ ಯಾತ್ರಾ ಇದೆ.

ಹೆಚ್ಚಿನ ವಿವರಗಳಿಗೆ :

**D. Vijayeendracharya Kosgi**

S/o. D. Ananthapadmanathacharya, Flat, 102, Madhuchaitanya Aprts.,
Sai Delux Nagar, Moulali, Hyderabad - 500 040

**Ph : 040-27141716, Cell : 9440702447**




ಲೇಖನಾಂಕ

# ಶ್ರೀಮನ್ಮಹಾಭಾರತ ನಿರೂಪಿಸಿದ ಧರ್ಮರಹಸ್ಯಗಳು

## ಲೇಖನಾಂಕ - 2


■ ಶ್ರೀ ಶ್ರೀನಿವಾಸ ಸು. ಮಠದ

'ಶ್ರೀಶ ನಿಲಯ', ಅಜರೇಕರ ಚಾಳ, ಮೀನಾಕ್ಷಿ ಚೌಕ, ವಿಜಾಪುರ - ೫೮೬ ೧೦೧


**ಅಶ್ವತ್ಥಂ ರೋಚನಾಂ ಗಾಂ ಚ ಪೂಜಯೇದ್ಯೋ ನರಃ ಸದಾ ।**
**ಪೂಜಿತಂ ಚ ಜಗತ್ತೇನ ಸದೇವಾಸುರ ಮಾನುಷಮ್ ॥**

ಅಶ್ವತ್ಥವೃಕ್ಷವನ್ನೂ, ಗೋರೋಚನವಿರುವ ಗೋವನ್ನೂ, ಯಾವ ಮನುಷ್ಯನು ಸದಾ ಪೂಜಿಸುವನೋ, ಅಂತಹವನಿಂದ ದೇವಾಸುರ ಮನುಷ್ಯರಿಂದ ಕೂಡಿದ ಜಗತ್ತೇ ಪೂಜಿಸಲ್ಪಟ್ಟಂತೆ ಆಗುತ್ತದೆ. ''ಅಶ್ವತ್ಥಃ ಸರ್ವವೃಕ್ಷಾಣಾಂ'' ಎಂಬ ಉಕ್ತಿ-ಯಂತೆ ಅಶ್ವತ್ಥವೃಕ್ಷದಲ್ಲಿ ಭಗವಂತನ ವಿಭೂತಿರೂಪ ಉಂಟು ಎಂಬುದನ್ನು ಸ್ಮರಿಸಬಹುದು.

**ವಾಮನಂ ಬ್ರಾಹ್ಮಣಂ ದೃಷ್ಟ್ವಾ ವರಾಹಂ ಚ ಜಲೋತ್ಥಿತಮ್ ।**
**ಉದ್ಧೃತಾಂ ಧರಣೀಂ ಚೈವ ಮೂರ್ಧ್ನಾ ಧಾರಯತೇ ತು ಯಃ ।**
**ನ ತೇಷಾಮಶುಭಂ ಕಿಂಚಿತ್ ಕಲ್ಮಷಂ ಚೋಪಪದ್ಯತೇ ॥**

ಯಾವ ಮನುಷ್ಯನು ಗಿಡ್ಡನಾಗಿರುವ ಬ್ರಾಹ್ಮಣನನ್ನೂ, ನೀರಿನಿಂದ ಹೊರ ಬಂದ ಕಾಡಹಂದಿಯನ್ನೂ ನೋಡಿ ನಮಸ್ಕರಿಸುವನೋ ಮತ್ತು ಕಾಡುಹಂದಿಯು ತೋಡಿರುವ ಮೃತ್ತಿಕೆಯನ್ನು ತಲೆಯಲ್ಲಿ ಧರಿಸುವನೋ ಅಂತಹವನಿಗೆ ಅಮಂಗಲ-ವಾಗಲೀ, ಪಾಪವಾಗಲೀ ಘಟಿಸುವುದಿಲ್ಲ.

**ಅಪಿ ವಾ ಬ್ರಾಹ್ಮಣಂ ದೃಷ್ಟ್ವಾ ಬ್ರಹ್ಮಚಾರಿಣಮಾಗತಮ್ ।**
**ಬ್ರಾಹ್ಮಣಾಗ್ರ್ಯಾಹುತಿಂ ದತ್ವಾ ಅಮೃತಂ ತಸ್ಯ ಭೋಜನಮ್ ॥**

ಬ್ರಹ್ಮಚಾರಿಯಾದ ಬ್ರಾಹ್ಮಣ ವಟುವು ಮನೆಯ ಬಾಗಿಲಿಗೆ ಬಂದೊಡನೆಯೇ ಗೃಹಸ್ಥನು ಅವನನ್ನು ಒಳಗೆ ಕರೆದು ಸತ್ಕರಿಸಿ ಮೊದಲು ಭೋಜನಮಾಡಿಸಬೇಕು. ನಂತರ ಉಳಿದ ಅನ್ನವನ್ನು ತಾನು ಊಟ ಮಾಡಬೇಕು. ಆ ಭೋಜನವು ಗೃಹಸ್ಥನಿಗೆ ಅಮೃತಕ್ಕೆ ಸಮಾನವೆಂದು ತಿಳಿಯಬೇಕು.

ಐಂದ್ರೀಂ ಸಂಧ್ಯಾಮುಶಿತ್ವಾ ಆದಿತ್ಯಾಭಿಮುಖಃ ಸ್ಥಿತಃ ।
ಸರ್ವತೀರ್ಥೇಷು ಸ ಸ್ನಾತೋ ಮುಚ್ಯತೇ ಸರ್ವಕಿಲ್ಬಿಷೈಃ ॥

ಪೂರ್ವದಿಕ್ಕಿಗೆ ಅಭಿಮುಖವಾಗಿ ಕುಳಿತು ಪ್ರಾತಃ ಸಂಧ್ಯಾವಂದನೆಯನ್ನು ಮಾಡಿ, ಸೂರ್ಯನಿಗೆ ಅಭಿಮುಖನಾಗಿ ಕುಳಿತವನು ಸರ್ವತೀರ್ಥಗಳಲ್ಲಿ ಸ್ನಾನ ಮಾಡಿದ ಫಲವನ್ನು ಹೊಂದುವುದಲ್ಲದೇ, ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ.

(''ಪೂರ್ವಾಂ ಸಂಧ್ಯಾಂ ಸನಕ್ಷತ್ರಾಂ'' ಉಕ್ತಿಯಂತೆ ಪ್ರಾತಃ ಸಂಧ್ಯಾವಂದನೆಯನ್ನು ನಕ್ಷತ್ರಗಳಿರುವಾಗ ಮಾಡಬೇಕು ಅದು ಉತ್ತಮ ಸಂಧ್ಯೆಯೆನಿಸುತ್ತದೆ - ಇದು ಇಲ್ಲಿ ಪ್ರಸ್ತುತವಾಗಿದೆ).

ಕಲ್ಯ ಉತ್ಥಾಯ ಯೋ ಮರ್ತ್ಯಃ ಸ್ಪೃಶೇತ್ ಗಾಂ ವೈ ಘೃತಂ ದಧಿ ।
ಸರ್ಷಪಂ ಚ ಪ್ರಿಯಂಗುಂ ಚ ಕಲ್ಮಷಾತ್ ಪ್ರತಿಮುಚ್ಯತೇ ॥

ಪ್ರತಿದಿನವೂ ಬೆಳಗ್ಗೆ ಎದ್ದೊಡನೆಯೇ ಯಾವ ಮನುಷ್ಯನು ಗೋವನ್ನು, ತುಪ್ಪವನ್ನು, ಮೊಸರನ್ನು, ಸಾಸಿವೆಯನ್ನು, ನವಣೆಯನ್ನು ಮುಟ್ಟುವನೋ, ಅವನು ಪಾಪಗಳಿಂದ ಮುಕ್ತನಾಗುತ್ತಾನೆ.

ಉಪವಾಸೇ ಬಲೌ ಚಾಪಿ ತಾಮ್ರಪಾತ್ರಂ ವಿಶಿಷ್ಯತೇ ।
ಬಲಿರ್ಭಿಕ್ಷಾಂ ತಥಾರ್ಘ್ಯಂ ಚ ಪಿತೃಣಾಂ ಚ ತಿಲೋದಕಮ್ ।
ತಾಮ್ರಪಾತ್ರೇಣ ದಾತವ್ಯಮನ್ಯಥಾಽಲ್ಪಫಲಂ ಭವೇತ್ ।
ಗುಹ್ಯಮೇತತ್ ಸಮುದ್ದಿಷ್ಟಂ ಯಥಾ ತುಷ್ಯಂತಿ ದೇವತಾಃ ॥

ಉಪವಾಸ ವ್ರತವನ್ನು ಕೈಗೊಳ್ಳುವಾಗ, ಬಲಿಹರಣ ಸಮಯದಲ್ಲಿ, ತಾಮ್ರ ಪಾತ್ರೆಯು ಶ್ರೇಷ್ಠವೆಂದು ಹೇಳಲ್ಪಟ್ಟಿದೆ. ಪೂಜಾಸಾಮಗ್ರಿಗಳನ್ನು ತಾಮ್ರದ ತಟ್ಟೆಯಲ್ಲಿಡಬೇಕು. ಭಿಕ್ಷೆಯನ್ನು ತಾಮ್ರದ ಪಾತ್ರೆಯಿಂದಲೇ ಹಾಕಬೇಕು. ಅರ್ಘ್ಯವನ್ನು, ಪಿತೃಗಳಿಗೆ ತಿಲೋದಕವನ್ನು ತಾಮ್ರದ ಪಾತ್ರೆಯಿಂದಲೇ ಕೊಡಬೇಕು. ಬೇರೆ ಪಾತ್ರೆಗಳನ್ನು ಉಪಯೋಗಿಸಿದ್ದಾದರೆ ಅಲ್ಪಫಲವು ಲಭಿಸುತ್ತದೆ. **ಇದು ಅತ್ಯಂತ ನಿಗೂಢವಾದ ಧರ್ಮರಹಸ್ಯವು. ತಾಮ್ರಪಾತ್ರೆಗಳನ್ನು ಉಪಯೋಗಿಸುವುದರಿಂದ ದೇವತೆಗಳು ಸಂತುಷ್ಟರಾಗುತ್ತಾರೆ.**

(ಮುಂದುವರೆಯುವುದು)



ಲೇಖನಾಂಕ

# ತಮಿಳುನಾಡಿನ ನವಗ್ರಹ ದೇವಾಲಯಗಳು – ೮

ಸಂಗ್ರಹ : **ಸೂರೀಂದ್ರ**
ಬೆಂಗಳೂರು

ಗ್ರಹಗಳು ಪ್ರತಿಯೊಬ್ಬನ ಜನನಕಾಲದಿಂದಲೇ ಸಂಚರಿಸಲು ಪ್ರಾರಂಭವಾಗುತ್ತವೆ. ಭಾರತದಲ್ಲಿಯೇ ಅಪರೂಪವಾದ ನವಗ್ರಹಗಳ ದೇವಾಲಯವು ತಮಿಳುನಾಡಿನಲ್ಲಿರುವುದು ಎಷ್ಟೋ ಜನರಿಗೆ ತಿಳಿಯದ ವಿಷಯವಾಗಿದೆ. ಪ್ರತಿಯೊಂದು ಗ್ರಹವೂ ನಮ್ಮ ಮೇಲೆ ಅದರದೇ ಆದ ಪರಿಣಾಮವನ್ನು ಬೀರುತ್ತದೆ. ಗ್ರಹಗಳು ಬೀರುವ ದುಷ್ಪರಿಣಾಮಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಅನೇಕ ವಿಧವಾದ ಶಾಂತಿಗಳನ್ನು ಮಾಡಿಸುವುದು, ತೀರ್ಥಕ್ಷೇತ್ರಗಳನ್ನು ಸಂದರ್ಶಿಸುವುದು ಸಾಮಾನ್ಯ. ಅಷ್ಟೇ ಅಲ್ಲದೆ, ಬಾಧಿತರು ತಮ್ಮ ಕಷ್ಟಗಳಿಗೆ ತಮಿಳುನಾಡಿನಲ್ಲಿರುವ ಈ ನವಗ್ರಹ ದೇವಾಲಯಗಳನ್ನು ಸಂದರ್ಶಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಶ್ರೀಗುರುಸಾರ್ವಭೌಮ ಮಾಸಪತ್ರಿಕೆಯ ಮೂಲಕ ''ತಮಿಳುನಾಡಿನ ನವಗ್ರಹ ದೇವಸ್ಥಾನಗಳು'' ಎಂಬ ಸರಮಾಲೆಯಲ್ಲಿ ಒಂಭತ್ತು ನವಗ್ರಹ ದೇವಸ್ಥಾನಗಳ ಬಗ್ಗೆ, ಅವುಗಳು ನಿರ್ಮಾಣವಾಗಿರುವ ಜಾಗದ ಹೆಸರುಗಳು, ಕ್ಷೇತ್ರದ ಇತಿಹಾಸ, ದೇವಸ್ಥಾನಗಳ ನಕ್ಷೆ - ವಿನ್ಯಾಸ, ಅಲ್ಲಿನ ಪವಿತ್ರ ತೀರ್ಥಗಳು, ಪವಿತ್ರ ವೃಕ್ಷಗಳ ಬಗ್ಗೆ ತಿಳಿಸಿಕೊಡಲಿದ್ದೇವೆ.

ಈ ಎಲ್ಲ ದೇವಸ್ಥಾನಗಳು ಕುಂಭಕೋಣದ ಆಸುಪಾಸಿನಲ್ಲಿವೆ. ಭಕ್ತರು ಕುಂಭಕೋಣದಲ್ಲಿರುವ ಸೋಲೆಯಪ್ಪನ್ ರಸ್ತೆಯಲ್ಲಿನ ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ವಾಸ್ತವ್ಯ ಮಾಡಿ, ಸುತ್ತಮುತ್ತಲಿನ ಈ ಎಲ್ಲಾ ನವಗ್ರಹ ದೇವಸ್ಥಾನಗಳನ್ನು ಸಂದರ್ಶಿಸಬಹುದಾಗಿದೆ. ಶ್ರೀಮಠದಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆಯು ಇರುತ್ತದೆ. ಕುಂಭಕೋಣದಲ್ಲಿನ ವ್ಯವಸ್ಥೆಗಾಗಿ ಅಲ್ಲಿನ ಶ್ರೀಮಠಕ್ಕೆ ಈ ಕೆಳಗಿನ ದೂರವಾಣಿ ಸಂಖ್ಯೆಯ ಮೂಲಕ ಸಂಪರ್ಕಿಸಬಹುದಾಗಿದೆ. **0435-2425448**.

## 8. ಶನಿ

ಕುಂಭಕೋಣ ಕ್ಷೇತ್ರದಿಂದ ಐವತ್ತೇಳು ಕಿ.ಮೀ. ಕ್ರಮಿಸಿದರೆ ತಿರುನಲ್ಲಾರ್ ಎನ್ನುವ ಒಂದು ಚಿಕ್ಕ ಗ್ರಾಮವು ಸಿಗುವುದು. ಈ ಗ್ರಾಮದಿಂದ ಸ್ವಲ್ಪ ಮುನ್ನಡೆದರೆ ನಮಗೆ ಗೋಚರವಾಗುವುದು ಶ್ರೀಶನಿದೇವರ ದೇವಸ್ಥಾನ. ಈ ದೇವಸ್ಥಾನದ

ಮುಂಭಾಗದಲ್ಲಿರುವ ಮತ್ತೊಂದು ರಸ್ತೆಯಲ್ಲಿ ಕ್ರಮಿಸಿದರೆ ಪವಿತ್ರ ನಳತೀರ್ಥವಿದೆ. ಈ ಕೊಳದ ಮಧ್ಯದಲ್ಲಿ ನಳ ಮತ್ತು ನಳನ ಹೆಂಡತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಕ್ಷೇತ್ರದಲ್ಲಿ ನವಗ್ರಹಗಳಿಗಾಗಿ ಪ್ರತ್ಯೇಕ ಒಂಭತ್ತು ಬಾವಿಗಳನ್ನು ನಾವು ನೋಡಬಹುದಾಗಿದೆ. ಇಲ್ಲಿ ಸ್ನಾನವನ್ನು ಮಾಡಿ ಮೂಲ ದೇವಸ್ಥಾನಕ್ಕೆ ಹೋಗಬೇಕು. ದೇವಸ್ಥಾನದ ಒಳಭಾಗದ ಗೋಡೆಯ ಮೇಲೆ ನಳಮಹಾರಾಜನ ಚರಿತ್ರೆಯನ್ನು ಬರೆಯಿಸಲಾಗಿದೆ. ಇವುಗಳನ್ನು ವೀಕ್ಷಿಸಿ ಮುಂದುವರೆದಲ್ಲಿ, 'ವಸಂತಮಂಟಪ'ವು ಎದುರಾಗುವುದು. ಈ ವಸಂತ ಮಂಟಪದಿಂದ ಗರ್ಭಗುಡಿಯವರೆಗೂ ವಿಶೇಷ ದಿವಸಗಳಲ್ಲಿ ಎರಡು ಸಾಲುಗಳಲ್ಲಿ ದೀಪಗಳನ್ನು ಹಚ್ಚುವುದು ಇಲ್ಲಿನ ವಿಶೇಷ. ದೇವಸ್ಥಾನದ ಉತ್ತರ ಪ್ರವೇಶದ್ವಾರದಿಂದ ಹೋದರೆ ಶನೈಶ್ಚರ ವಿಗ್ರಹದ ದರ್ಶನವಾಗುತ್ತದೆ. ಈ ದೇವಸ್ಥಾನದ ಗರ್ಭಗುಡಿಯ ಮುಂಭಾಗದಲ್ಲಿ ಚೇಳು ಮತ್ತು ಶನೈಶ್ಚರ ವಿಗ್ರಹಗಳನ್ನು ಕೆತ್ತಲಾಗಿದೆ. ಇಲ್ಲಿ ಚಿನ್ನದ ಕಾಗೆಯ ವಾಹನವಿದೆ. ಈ ಸ್ಥಳದಲ್ಲಿ ನಳಮಹಾರಾಜನಿಂದ ಪೂಜೆಗೊಂಡ ನಳಲಿಂಗವೂ, ಚಿನ್ನದ ಗಣಪತಿಯ ವಿಗ್ರಹವೂ ಈ ದೇವಸ್ಥಾನದ ಸೊಬಗನ್ನು ಹೆಚ್ಚಿಸಿದೆ.

ಈ ಕ್ಷೇತ್ರವು ಕಾರೇಕಲ್ಲಿನಿಂದ ಐದು ಕಿ.ಮೀ. ದೂರದಲ್ಲಿದೆ. ಪೇರಲಂ ಮತ್ತು ಕಾರೇಕಿಲಾನ್‌ಗೆ ಹೋಗುವ ರೈಲುಮಾರ್ಗದ ಮಧ್ಯದಲ್ಲಿದೆ. ಇಲ್ಲಿನ ಶನೈಶ್ಚರನ ದೇವಸ್ಥಾನಕ್ಕೆ ತಿರುನಲ್ಲಾರ್ ಎನ್ನುತ್ತಾರೆ.

## ಶನಿದೋಷ ಪರಿಹಾರ

ಶನಿದಶೆಯು ೧೯ ವರ್ಷಗಳು ಹಾಗೂ ಗೋಚಾರದಲ್ಲಿ ಏಳೂವರೆ ವರ್ಷಗಳು (ಸಾಡೇಸಾತಿ). ಈ ಸಂದರ್ಭಗಳಲ್ಲಿ ವಿಶೇಷವಾಗಿ ಮರಣ ಭಯವಿರುವವರು ಆಂಜನೇಯನನ್ನು, ವಿಷ್ಣುವನ್ನೂ ಪೂಜಿಸಬೇಕು. ಶನಿಯ ಪ್ರೀತ್ಯರ್ಥವಾಗಿ ನೀಲಿ ಹರಳನ್ನು ಧರಿಸಬೇಕು. ವಿಶೇಷವಾಗಿ ಎಳ್ಳನ್ನು ದಾನ ಮಾಡಬೇಕು. ಎಳ್ಳೆಣ್ಣೆಯಲ್ಲಿ ದೀಪವನ್ನು ಹಚ್ಚುವುದರಿಂದ ಶನಿ ಪ್ರೀತನಾಗುತ್ತಾನೆ. **ಎಲ್ಲದಕ್ಕಿಂತ ಮುಖ್ಯವಾಗಿ ಶನಿಕಾಟವಿರುವವರು ಆಂಜನೇಯನನ್ನು ಆರಾಧಿಸುವುದರ ಜೊತೆಗೆ ನಿತ್ಯವೂ ಶನೈಶ್ಚರ ಕೃತ 'ಶ್ರೀನರಸಿಂಹಸ್ತೋತ್ರ' ಪಠಣದೊಂದಿಗೆ ಮೇಲೆ ಹೇಳಿದ ಕರ್ಮ-ಗಳನ್ನು ಮಾಡುವುದು. ಇದರಿಂದ ಪರಿಹಾರ ಸಿಗುವುದು.**

❑❑

**ಭಕ್ತರು ದಯವಿಟ್ಟು ಡಿ.ಡಿ. ಹಾಗೂ ಎಂ.ಓ. ಮುಖಾಂತರ ಮಂತ್ರಾಲಯ, ಬೆಂಗಳೂರು ಕಾರ್ಯಾಲಯಕ್ಕೆ ಹಣ ಕಳುಹಿಸಬೇಕು. ಚೆಕ್ಕನ್ನು ಸ್ವೀಕರಿಸಲಾಗುವುದಿಲ್ಲ.**




# ಶ್ರೀಸರಸ್ವತೀ ಟೂರ್ಸ್ ಅಂಡ್ ಟ್ರಾವೆಲ್ಸ್

ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059. **ದೂ. 044-22390890**

**(೨೦೦೨ ಮತ್ತು ೨೦೦೪ ರಲ್ಲಿ ಚೆನ್ನೈನಲ್ಲಿರುವ ಅತ್ಯುತ್ತಮ ಯಾತ್ರಾ ಪ್ರವಾಸೋದ್ಯಮವೆಂದು ಪ್ರಶಸ್ತಿ ಪಡೆದಿದೆ)**

**ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2 ಕ್ಕೆ ಅವರ ವಾಸಸ್ಥಳದಿಂದ ಹೋಗಿ ಬರುವ ರೈಲ್ವೇ II Sitting Class Ticket ವೆಚ್ಚವೂ ಸೇರಿದೆ. ಶ್ರೀಬದರೀನಾರಾಯಣನ ಅನುಗ್ರಹದೊಂದಿಗೆ, 2007 ಮತ್ತು 2008 ರಲ್ಲಿ ಕೆಳಗಿನ ತೀರ್ಥಯಾತ್ರಾ ಪ್ರವಾಸಗಳನ್ನು ಚೆನ್ನೈನಿಂದ ವ್ಯವಸ್ಥೆ ಮಾಡಲಾಗಿದೆ.**

**ಪ್ರವಾಸ 1 : ದಿನಾಂಕ 28-11-2007 ರಿಂದ 15 ದಿನಗಳು**

**ನವದ್ವಾರಕಾ ಯಾತ್ರಾ ಒಬ್ಬರಿಗೆ ರೂ. 8,100/- ಸ್ಥಳಗಳು** : ಅಹಮದಾಬಾದ್, ಮೂಲದ್ವಾರಕ, ಗೋಮತಿದ್ವಾರಕ, ಭೇಟ್‌ದ್ವಾರಕ, ಹರಿಸಿದ್ಧಿಮಾತ, ಪೋರಬಂದರ್, ಸೋಮನಾಥ, ಮಾತೃಗಯಾ, ಪುಷ್ಕರ, ಅಂಬಾಜಿ, ಉದಯಪುರ, ಶ್ರೀನಾಥದ್ವಾರಕ, ಕಂಗ್ರೋಲಿದ್ವಾರಕ.

**ಪ್ರವಾಸ 2 : ದಿನಾಂಕ 01-03-2008 ರಿಂದ 10 ದಿನಗಳು ಮಹಾಶಿವರಾತ್ರಿ ಸ್ಪೆಷಲ್**

**ಕಾಶಿ / ಗಯಾ ಯಾತ್ರಾ ಒಬ್ಬರಿಗೆ ರೂ. 6,000/- ಸ್ಥಳಗಳು** : ಅಲಹಾಬಾದ್, ಅಯೋಧ್ಯಾ, ವಾರಣಾಸಿ (ಕಾಶಿ), ಗಯಾ, ಪುರಿ, ಕೋನಾರ್ಕ್, ಭುವನೇಶ್ವರ್ ಮತ್ತು ಧವಳಗಿರಿ.

ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆಯ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಛಾರ್ಜ್ ಮತ್ತು ಬಸ್ ಛಾರ್ಜು ಸ್ಥಳೀಯ ವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ ಕಾಫಿ / ಟೀ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಆರ್. ಪ್ರಸಾದ್/ಆರ್. ಪ್ರಭಾಕರ್**, ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059 **ದೂ. 044-22390890, ಮೊಬೈಲ್ : 94440-87901 -- ಎ. ಭೀಮರಾವ್**, ನಂ. 10/10, 19ನೇ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 085, **ದೂ. 080-26729528 -- ಡಿ.ಆರ್. ರಾವ್**, 'ಘಟಿಕಾಚಲ', ಪ್ಲಾಟ್ ನಂ. 34, ಶಂಕರ್ ಕಾಲೋನಿ, 1ನೇ ಅಡ್ಡರಸ್ತೆ, ಬಳ್ಳಾರಿ - 583 101, **ದೂ. 08392-274107 -- ಎ. ಮುರಳೀಧರ ರಾವ್**, ಆಲೂರ್ ನಿವಾಸ್, ಅಸುಂಡಿ ಕಾಂಪೌಡ್, ಸ್ಟೇಷನ್ ರಸ್ತೆ, ಹೊಸಪೇಟೆ - 583 201, **ದೂ. 08394-224312**


## ಭಾದ್ರಪದ ಸೆಪ್ಟೆಂಬರ್-ಅಕ್ಟೋಬರ್-೦೭ ಸಂಚಿಕೆಯಲ್ಲಿನ 'ಜ್ಞಾನಿ-ಕರ್ಮಿಗಳ ಮಾರ್ಗದರ್ಶನ' ಲೇಖನದ ತಿದ್ದುಪಡಿ ಹೀಗಿದೆ

| ಪುಟ | ಸಾಲು | ತಪ್ಪು | ಸರಿ |
|---|---|---|---|
| ೪೧ | ೯ | 'ತೀರಿದ ಮೇಲೆ' | 'ತೀರದೇ ಆ ಪುಣ್ಯಶೇಷದಿಂದ' |
| ೪೨ | ೧ | 'ದೇವೀ ದಿವಂ' | 'ದೇವೀಂ ದಿವಂ' |
| ೪೨ | ೧೨ | 'ಬಾದರಾಯಣರು' | 'ಬಾದರೀ ಆಚಾರ್ಯರು' |
| ೪೨ | ೨೨ | 'ಸಹತೇ' | 'ಸಹ ತೇ' |
| ೪೨ | ೨೬ | 'ಬಾದರಾಯಣರ' | 'ಬಾದರೀ ಆಚಾರ್ಯರ' |

ಪರ್ಯಟನೆ

## ಮಂತ್ರಾಲಯ ವಿದ್ಯಾಪೀಠದ ವಾರ್ಷಿಕೋತ್ಸವ

ಪ್ರಾಚೀನ ಕಾಲದಿಂದಲೂ ಮಂತ್ರಾಲಯದ ಶ್ರೀರಾಯರ ಮಠದಲ್ಲಿ ಗುರುಕುಲವೊಂದು ಇದ್ದು, ಅದು ಇತ್ತೀಚಿನ ದಿನಗಳಲ್ಲಿ ನೂತನ ರೂಪವನ್ನು ಪಡೆದುಕೊಂಡು ''ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ''ವಾಗಿದೆ. ದಿನಾಂಕ ೧೨, ೧೩, ೧೪ ರ ಅಕ್ಟೋಬರ್ ೨೦೦೭ ರಂದು ಈ ವಿದ್ಯಾಪೀಠದ ವಾರ್ಷಿಕೋತ್ಸವವು ಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರ ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ ಕೃಪಾಶೀರ್ವಾದದಿಂದ ವೈಭವದಿಂದ ನಡೆಯಿತು. ಈ ವಿದ್ಯಾಪೀಠದಲ್ಲಿ ಅಧ್ಯಯನ ಮಾಡಿ ವಿವಿಧ ನಗರಗಳಲ್ಲಿ ಉನ್ನತ ಸ್ಥಾನಗಳಲ್ಲಿ ಉಪಾಧ್ಯಾಯರಾಗಿ ಸೇವೆಯನ್ನು ಸಲ್ಲಿಸುತ್ತಿರುವ ಪೂರ್ವವಿದ್ಯಾರ್ಥಿಗಳೆಲ್ಲರ ಪುನರ್ಮಿಲನದಿಂದಾಗಿ ವಿದ್ಯಾಪೀಠದಲ್ಲಿ ಹಬ್ಬದ ವಾತಾವರಣವೇರ್ಪಟ್ಟಿತ್ತು. ಈ ಕಾರ್ಯಕ್ರಮದ ನಿಮಿತ್ತ ಹಲವಾರು ಆರೋಗ್ಯಕರ ಸ್ಪರ್ಧೆಗಳು ಏರ್ಪಟ್ಟು ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆಯಾಯಿತು. ಅನೇಕ ವಿದ್ವಾಂಸರ ಪ್ರವಚನ, ಪ್ರಶ್ನೋತ್ತರ ಕಾರ್ಯಕ್ರಮಗಳು ಜನ-ಮನ ಸೆಳೆದವು. ಶ್ರೀಸಚ್ಚಿದಾನಂದ ಶಾಸ್ತ್ರಿಗಳ ಭಗವದ್ಗೀತಾ ಅಷ್ಟಾವಧಾನ ಕಾರ್ಯಕ್ರಮವು ಅಚ್ಚರಿ ಮೂಡಿಸಿತು. ವಿದ್ಯಾಪೀಠದ ಬಾಲಕರು ಅಚ್ಚುಕಟ್ಟಾಗಿ ಪ್ರದರ್ಶಿಸಿದ 'ಮಧ್ಯಮ ವ್ಯಾಯೋಗ' ನಾಟಕವು ಜನರ ಮೆಚ್ಚುಗೆಗೆ ಪಾತ್ರವಾಯಿತು. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಸಮಸ್ತ ಸೌಲಭ್ಯವಿರುವ ಈ ವಿದ್ಯಾಪೀಠಕ್ಕೆ ಅಧ್ಯಯನಕ್ಕಾಗಿ ತಮ್ಮ ಮಕ್ಕಳನ್ನು ಸೇರಿಸಬೇಕೆಂದು ಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಅನುಗ್ರಹ ಸಂದೇಶದಲ್ಲಿ ತಿಳಿಸಿದರು. ಪೂಜ್ಯ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ''ವ್ಯಯೀಕೃತೇ ವರ್ಧತಾ ಏವ ನಿತ್ಯಂ'' ಎನ್ನುವುದು ವಿದ್ಯೆಗೆ ಸಂಬಂಧಪಟ್ಟಿದ್ದರಿಂದ ವಿದ್ಯಾಪೀಠದ ಅಭಿವೃದ್ಧಿಯನ್ನು ಇತರರೊಂದಿಗೆ ಸ್ಪರ್ಧೆಗೆ ಗುರಿಮಾಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದರು. ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳಾದ ಶ್ರೀ ರಾಜಾ. ಎಸ್. ರಾಜಗೋಪಾಲಾಚಾರ್ಯರ ಪ್ರೋತ್ಸಾಹದಿಂದ ಕಾರ್ಯಕ್ರಮವು ಮೂರು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು. ಒಟ್ಟಿನಲ್ಲಿ ಕೌಟುಂಬಿಕ ವಾತಾವರಣದಿಂದ ಕೂಡಿದ್ದ ಈ ಕಾರ್ಯಕ್ರಮದಲ್ಲಿ ಅನೇಕ ಭಾವೋದ್ವೇಗಕ್ಕೊಳಗಾಗುವ ಹೃದಯಸ್ಪರ್ಶಿ ಸನ್ನಿವೇಶಗಳು ಕಂಡುಬಂದವು.

---

## ಮಂತ್ರಾಲಯ ವಿದ್ಯಾಪೀಠದ ವಾರ್ಷಿಕೋತ್ಸವದಲ್ಲಿ ನಡೆದ ಸ್ಪರ್ಧೆಯಲ್ಲಿ ವಿಜೇತರಾದವರು

### ಸಂಸ್ಕೃತ ಭಾಷಣ ಸ್ಪರ್ಧೆ

ಪ್ರಥಮ ಬಹುಮಾನ - ಜಿ. ಭೀಮಸೇನ, ಪೂ.ಪ್ರ. ವಿದ್ಯಾಪೀಠ, ಬೆಂ. - ರೂ. ೨,೦೦೦/-
ದ್ವಿತೀಯ ಬಹುಮಾನ - ವಿ. ಕಲ್ಪನಾ, ಆರ್.ಎಸ್.ವಿ.ಪಿ., ತಿರುಪತಿ - ರೂ. ೧,೫೦೦/-
ತೃತೀಯ ಬಹುಮಾನ - ರಾಜೇಂದ್ರ ಸಾವರ್ಕರ್, ತಿರುಪತಿ - ರೂ. ೧,೦೦೦/-

### ಸ್ತೋತ್ರ-ಕಾವ್ಯಗಳ ಅಂತ್ಯಾಕ್ಷರೀ ಸ್ಪರ್ಧೆ

ಪ್ರಥಮ ಬಹುಮಾನ - ಭೀಮಸೇನ ಗುತ್ತಲ, ಪೂ.ಪ್ರ. ವಿದ್ಯಾಪೀಠ, ಬೆಂ. - ರೂ. ೩,೦೦೦/-
ದ್ವಿತೀಯ ಬಹುಮಾನ - ಸತೀಶ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೨,೦೦೦/-
ತೃತೀಯ ಬಹುಮಾನ - ವಿ. ಸುಧೀರ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೧,೦೦೦/-

### ಸಾಂಸ್ಕೃತಿಕ ರಸಪ್ರಶ್ನೆಗಳು

ಪ್ರಥಮ ಬಹುಮಾನ - ಸಂಕರ್ಷಣ ತಂಡ, ತಿರುಪತಿ - ರೂ. ೩,೦೦೦/-
ದ್ವಿತೀಯ ಬಹುಮಾನ - ವಾಸುದೇವ ತಂಡ, ಪುತ್ತಿಗೆ ವಿದ್ಯಾಪೀಠ, ಪುತ್ತಿಗೆ - ರೂ. ೨,೦೦೦/-
ತೃತೀಯ ಬಹುಮಾನ - ನಾರಾಯಣ ತಂಡ, ಪೂ.ಪ್ರ. ವಿದ್ಯಾಪೀಠ, ಬೆಂ. - ರೂ. ೧,೦೦೦/-



### ಸಂಸ್ಕೃತ ಪ್ರಬಂಧ ರಚನಾ ಸ್ಪರ್ಧೆ

ಪ್ರಥಮ ಬಹುಮಾನ - ಜಯರಾಮ ಗರಗ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೨,೦೦೦/-
ದ್ವಿತೀಯ ಬಹುಮಾನ - ವಿ. ಕಲ್ಪನಾ, ಆರ್.ಎಸ್.ವಿ.ಪಿ., ತಿರುಪತಿ - ರೂ. ೧,೫೦೦/-
ತೃತೀಯ ಬಹುಮಾನ - ಎಂ. ಸಾಹಿತೀ, ಆರ್.ಎಸ್.ವಿ.ಪಿ., ತಿರುಪತಿ - ರೂ. ೧,೦೦೦/-

### ವಿಷ್ಣುಸಹಸ್ರನಾಮ ಕಂಠಪಾಠ ಸ್ಪರ್ಧೆ – ಸೀನಿಯರ್

ಪ್ರಥಮ ಬಹುಮಾನ - ಜಿ. ಪವನ್, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೧,೫೦೦/-
ದ್ವಿತೀಯ ಬಹುಮಾನ - ಜಿ. ಧನಂಜಯ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೧,೦೦೦/-
ತೃತೀಯ ಬಹುಮಾನ - ಐ.ಎಲ್. ರಾಜೇಶ್, ಆರ್.ಎಸ್.ವಿ.ಪಿ., ತಿರುಪತಿ - ರೂ. ೫೦೦/-

### ವಿಷ್ಣುಸಹಸ್ರನಾಮ ಕಂಠಪಾಠ ಸ್ಪರ್ಧೆ – ಜೂನಿಯರ್

ಪ್ರಥಮ ಬಹುಮಾನ - ವಾದೀಂದ್ರತೀರ್ಥಾಚಾರ್ಯ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೧,೦೦೦/-
ದ್ವಿತೀಯ ಬಹುಮಾನ - ಎನ್. ಹರೀಶ್, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೭೫೦/-
ತೃತೀಯ ಬಹುಮಾನ - ಎಂ. ನವೀನ್, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೫೦೦/-

### ಸಂಪೂರ್ಣ ಶ್ರೀಸುಮಧ್ವವಿಜಯ ಕಂಠಪಾಠ ಸ್ಪರ್ಧೆ

ಪ್ರಥಮ ಬಹುಮಾನ - ಜಿ. ಭೀಮಸೇನ, ಪೂ.ಪ್ರ. ವಿದ್ಯಾಪೀಠ, ಬೆಂ - ರೂ. ೫,೦೦೦/-
ದ್ವಿತೀಯ ಬಹುಮಾನ - ಮಧ್ವಾಚಾರ್ಯ - ರೂ. ೩,೦೦೦/-

### ಸಂಪೂರ್ಣ ಶ್ರೀರಾಘವೇಂದ್ರವಿಜಯ ಕಂಠಪಾಠ ಸ್ಪರ್ಧೆ

ಪ್ರಥಮ ಬಹುಮಾನ - ಸತೀಶ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೩,೦೦೦/-
ದ್ವಿತೀಯ ಬಹುಮಾನ - ಪ್ರದೀಪ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೨,೦೦೦/-
ತೃತೀಯ ಬಹುಮಾನ - ಅಜಿತ್, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೧,೦೦೦/-

### ಸಂಪೂರ್ಣ ಭಗವದ್ಗೀತಾ ಕಂಠಪಾಠ ಸ್ಪರ್ಧೆ

ಪ್ರಥಮ ಬಹುಮಾನ - ಬಿ. ಭಾಸ್ಕರ, ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ - ರೂ. ೫,೦೦೦/-
ದ್ವಿತೀಯ ಬಹುಮಾನ - ಉಮಾಮಹೇಶ್ವರೀ, ತಿರುಪತಿ - ರೂ. ೩,೦೦೦/-
ತೃತೀಯ ಬಹುಮಾನ - ಎ. ಶೇಖರ, ತಿರುಪತಿ - ರೂ. ೨,೦೦೦/-

### ಮಂತ್ರಾಲಯ ವಿದ್ಯಾಪೀಠದ ವೇದಪರೀಕ್ಷೆ ಫಲಿತಾಂಶ (ಋಗ್ವೇದ)

ಪ್ರಥಮ ಬಹುಮಾನ - ವಿ. ಗೋಕುಲ್ - ರೂ. ೧,೫೦೦/-
ದ್ವಿತೀಯ ಬಹುಮಾನ - ಎಂ. ವಿಘ್ನೇಶ್ - ರೂ. ೧,೦೦೦/-
ತೃತೀಯ ಬಹುಮಾನ - ಎಸ್. ಹರಿಪ್ರಸಾದ್ - ರೂ. ೫೦೦/-

### ಮಂತ್ರಾಲಯ ವಿದ್ಯಾಪೀಠದ ವೇದಪರೀಕ್ಷೆ ಫಲಿತಾಂಶ (ಯಜುರ್ವೇದ)

ಪ್ರಥಮ ಬಹುಮಾನ - ವೈ. ರಮೇಶ್ - ರೂ. ೧,೫೦೦/-
ದ್ವಿತೀಯ ಬಹುಮಾನ - ಬಿ.ವಿ. ಶ್ರೀನಾಥಾಚಾರ್ಯ - ರೂ. ೧,೦೦೦/-
ತೃತೀಯ ಬಹುಮಾನ - ಎ. ರಾಘವೇಂದ್ರ - ರೂ. ೫೦೦/-

**ವರದಿ : ಪಿ.ವಿ. ಹರಿನಾಥ್**